UNIVERSAL
LIBRARY
OU_198214
UNIVERSAL
LIBRARY

ಲಲಿತ ಸಾಹಿತ್ಯಮಾಲೆಯ ಮೂವತ್ತಾರನೆಯ ಕುಡಿ
ಎಂಟನೆಯ ವರುಷದ ಮೂರನೆಯ ಪ್ರಕಟನೆ

# 'ಗೀಚುಗೆರೆ'

ಕಥಾ ಸಂಗ್ರಹ

ರಾಮಚಂದ್ರ ಕೊಟ್ಟಲಗಿ

ಲಲಿತ ಸಾಹಿತ್ಯಮಾಲೆ
ಧಾರವಾಡ

ಉತ್ತಮ ಪ್ರತಿ ೨-೦-೦

ಸಾದಾ ಪ್ರತಿ ೧-೪-೦

ಜುಲೈ ೧೯೫೩

ಸಂಪಾದಕರು–ಪ್ರಕಾಶಕರು :
ಚುಳಕಿ ಗೋವಿಂದರಾಯರು
ಲಲಿತ ಸಾಹಿತ್ಯಮಾಲೆ, ಧಾರವಾಡ

Checked 1969

CHECKED 1964
Checked 1965

ಮಾರಾಟಗಾರರು :
ಮನೋಹರ ಗ್ರಂಥ ಭಾಂಡಾರ, ಧಾರವಾಡ
ಕನ್ನಡ ಪುಸ್ತಕಾಲಯ, ಬೆಳಗಾವಿ

ಮುದ್ರಕರು :
ಎಸ್. ಎಮ್. ಕುಲಕರ್ಣಿ
ಲಲಿತ ಮುದ್ರಣಾಲಯ, ಧಾರವಾಡ

# ಅರಿಕೆ

'ಅನುರಕ್ತೆ'ಯ ನಂತರದ ಈ 'ಗೀಚುಗೆರೆ'ಯ ಪ್ರಕಟನೆ ಕಾರಣಾಂತರದಿಂದ ಸಾವಕಾಶವಾಯಿತು. ಜತೆಯಲ್ಲಿಯೇ ಮುಂದಿನ, ಮತ್ತು ಎಂಟನೆಯ ವರುಷದ ಕೊನೆಯ ಪ್ರಕಟನೆ 'ಈ ಪರಿಯ ಸೊಬಗು' ಸಹ ಓದುಗರ ಕೈಸೇರುವುದರಿಂದ ಅವರು ಈ ನಿಧಾನವನ್ನು ಮನ್ನಿಸುವರೆಂದು ಆಶಿಸಿದ್ದೇವೆ.

ಈ 'ಗೀಚುಗೆರೆ'ಯ ಕತೆಗಾರ ಶ್ರೀ. ರಾಮಚಂದ್ರ ಕೊಟ್ಟಲಗಿ ಅವರು ಈ ಮೊದಲು ತಮ್ಮ 'ಪಿಪಾಸೆ' ಎಂಬ ಕವನ ಸಂಗ್ರಹದ ಮೂಲಕ ಕನ್ನಡ ಜನತೆಗೆ ಪರಿಚಿತರಾಗಿದ್ದಾರೆ. ಕವಿಜೀವದ ಸೂಕ್ಷ್ಮನಿರೀಕ್ಷಣೆಯೂ ಇಲ್ಲಿಯ ಕತೆಗಳ ಜೀವಾಳವಾದುದನ್ನು ಓದುಗರು ಗುರುತಿಸಬಹುದು.

ಕನ್ನಡನಾಡಿನ ವಿಸ್ತಾರವಾದ ಪ್ರದೇಶದ ಒಂದು ಬದಿಯ ಜನರ ಜೀವನದ ನಂಬಿಕೆ, ನೆಚ್ಚು-ಕೆಚ್ಚುಗಳ ಅದ್ಭುತ ರಮ್ಯತೆ, ಮಾತಿನ ಬೆಡಗಿನ ವಿಶಿಷ್ಟ ನಡೆ-ನಿಲವು;—ಅದರಲ್ಲಿಯೂ ಒಂದು ಬಗೆಯ ಕುಸುರಿಕೆಲಸದ ವಿವಿಧ ವಿಲಾಸಗಳು ಈ ಕಥೆಗಳಲ್ಲಿ ಚಿತ್ರಿತವಾಗಿವೆ

ಕನ್ನಡ ಸಣ್ಣಕತೆ ಇಂಥ ವಸ್ತು-ವಿನ್ಯಾಸಗಳಿಂದ ತನ್ನ ಹಿರಿಮೆಯನ್ನು ಇನ್ನೂ ಬೆಳಸಿಕೊಳ್ಳಲು, ಗಳಿಸಿಕೊಳ್ಳಲು ಅನುವು ಮಾಡಿಕೊಳ್ಳುವಂತಿದೆ ಯೆಂದು ಈ ಕಥೆಗಳು ಸಾರುವಂತಿವೆ.

ಇಂಥ ಕತೆಗಳ ಗೊಂಚಲೊಂದನ್ನು ಲಲಿತ ಸಾಹಿತ್ಯಮಾಲೆ ತನ್ನ ಸರದಲ್ಲಿ ಸೇರಿಸಿಕೊಳ್ಳಲು ಅವಕಾಶ ಮಾಡಿಕೊಟ್ಟ ಶ್ರೀ. ಕೊಟ್ಟಲಗಿ ರಾಮಚಂದ್ರರಾಯರಿಗೆ ನಾವು ಋಣಿಯಾಗಿದ್ದೇವೆ.

ಇವರೇ ಬರೆದ 'ದೀಪ ನಿರ್ವಾಣ' ವೆಂಬ ಕಾದಂಬರಿಯನ್ನೂ ಬರುವ ವರುಷ ಪ್ರಕಟಿಸುವ ಹಂಬಲವಿದೆ.

ಅಂಚೆಯ ದರಗಳು ಇಮ್ಮಡಿಯಾಗಿ ಮುಂಚೆಯೇ ಚಂದಾದಾರರ ಕೊರತೆ-ಕೊರೆತಗಳಿಂದ ಬಳಲುತ್ತಿರುವ ಮಾಲೆಯ ಪ್ರಕಾಶನ ಇನ್ನೂ ಹವ್ಯಾಸವಾಗಿಯೇ ನಡೆದಿದೆ. ನಾಲ್ಕು ದಿನ ತಡವಾದರೂ ಒಳ್ಳೊಳ್ಳೆಯ ಕೃತಿಗಳನ್ನೇ ಬೆಳಕಿಗೆ ತರುವ ನಮ್ಮ ಯತ್ನ ನಮ್ಮ ವಾಚಕರ ರುಚಿಗೆ ಅನುಗುಣವಾಗಿ, ಮಾಲೆಗೆ ಗ್ರಾಹಕಸಂಪತ್ತಿ ಬೆಳೆದು ಬರಲೆಂದು ಹಾರೈಸುತ್ತೇವೆ.

ಧಾರವಾಡ
೨೦-೭-೫೩

**ಸಂಪಾದಕ**
ಲಲಿತ ಸಾಹಿತ್ಯಮಾಲೆ

## ಬಾಗಿಲೊಳು ಕೈಮುಗಿದು—

ಕಥಾಮಂದಿರಪ್ರವೇಶಪೂರ್ವದಲ್ಲಿ ಸುಹೃತ್-ವಾಚಕವೃಂದಕ್ಕೆ ಕೈ ಮುಗಿದು ಬಿನ್ನವಿಸುವ ಒಂದು ಮಾತು:—

" ಗೀಚುಗೆರೆ "- ಸಂಗ್ರಹ ರೂಪದಲ್ಲಿ ಪ್ರಕಟವಾಗುವ ನನ್ನ ಪ್ರಥಮ ಗದ್ಯ ಕೃತಿ.

" ಜೀವನದ ಪರಿಭಾಷೆ " ಒಂದು ಹಿಂದೀ ಕೃತಿಯಿಂದ ಅನುವಾದಿತ ವಾದದ್ದು. ಅದರ ಮೂಲ ಲೇಖಕರ ಹೆಸರು, ಆ ಭಾಗವನ್ನು ಆರಿಸಿಕೊಂಡ ಪುಸ್ತಕದ ಹೆಸರು-ಇಂದು ನೆನಪಿನಲ್ಲಿಲ್ಲ. ಏನೇ ಆದರೂ ನಾನು ಮೂಲ ಲೇಖಕರಿಗೆ—ಅವರು ಎಲ್ಲೇ ಇದ್ದರೂ—ಋಣಿ. ಉಳಿದೆಲ್ಲ ಬರೆಹ ಸ್ವತಂತ್ರವಾದದ್ದು.

ನನ್ನ ಗದ್ಯಲೇಖನ ರಸವಂತಿಯಾದುದಲ್ಲ. ಅದರ ಭಾಷೆ, ವಿವರಣೆಯ ರೀತಿ ಒಂದಿನಿಸು ಅಂಕು-ಡೊಂಕು; ನೇರವಾಗಿ ನಡೆಯದೆ ಬಳಸುವ ದಾರಿ ಯಿಂದ ಸುತ್ತುವಂತೆ. ಜೊತೆಗೆ ಆಡುವ—ಪ್ರಾದೇಶಿಕ ಭಾಷೆಯ ಮಿಶ್ರಣ ದಿಂದ ಕನ್ನಡ ನಾಡಿನ ಉಳಿದ ಭಾಗದವರಿಗೆ ಅರ್ಥವಾಗಲು ಒಂದಿಷ್ಟು ಕಠಿಣ ವೆನಿಸಬಹುದಾಗಿದೆ. ಬಿಜಾಪುರದತ್ತಕಡೆಯ ಜನರ ಮಾತನ್ನು, ಅವರ ಜೀವಾಳವಾಗಿರುವ ನುಡಿಯನ್ನು ಅರಿತುಕೊಳ್ಳಬೇಕೆಂಬ ಹವ್ಯಾಸದಿಂದ ಲಾದರೂ ಉಳಿದ ಭಾಗದ ಜನತೆ ಒಂದಿಷ್ಟು ಶ್ರಮವಹಿಸಿ ಈ ಗ್ರಂಥದಲ್ಲಿ ಬರುವ ಆಡು-ನುಡಿಯನ್ನು ಅರ್ಥಮಾಡಿಕೊಂಡಾರೆಂದು ನಂಬಿದ್ದೇನೆ.

ಈ ಕೃತಿಯನ್ನು ನನ್ನಿಂದ ಬರೆಸಿ, ಪ್ರಕಟಿಸಿದ ಸರ್ವ ಶ್ರೇಯ ಗೆಳೆಯ ದ. ಬಾ. ಕುಲಕರ್ಣಿ ಅವರದು. ಅವರ ಒತ್ತಾಯವಿಲ್ಲದಿದ್ದರೆ ನಾನು ಬರೆದು ಮುಗಿಸುವದು ದೂರವಿತ್ತು.

ಘಟಪ್ರಭಾ
೮-೭-೫೩

ರಾಮಚಂದ್ರ ಕೊಟ್ಟಲಗಿ

ಈ ಅಲ್ಪಕೃತಿ

**ಶ್ರೀ. ಪುರುಷೋತ್ತಮ ರಾಮಚಂದ್ರ ಜೋಶಿ**

ಅವರಿಗೆ

ಪ್ರೀತಿ-ಆದರ-ವಿಶ್ವಾಸ ಪೂರ್ವಕವಾಗಿ

ಅರ್ಪಿತ

# ವಿ ವ ರ


| | | ಪುಟ |
|---|---|---|
| ೧ | ಜೀವನದ ಪರಿಭಾಷೆ | ೧ |
| ೨ | ಅತೃಪ್ತ ವಿಲಾಸ | ೩ |
| ೩ | ಬಯಲ ಬಂಗಾರ | ೧೪ |
| ೪ | ಶೇಷ ಪ್ರಶ್ನೆ | ೩೦ |
| ೫ | ಹೆಬ್ಬೆರಳು–ಕಿರಿಬೆರಳು | ೩೮ |
| ೬ | ಒಂದೇ ದೇಟಿನ ಕಾಯಿಗಳು | ೫೫ |
| ೭ | ಆರಿದ ದೀಪ | ೭೬ |
| ೮ | ಋಣಮುಕ್ತಿ | ೮೩–೧೦೩ |

# ಜೀವನದ ಪರಿಭಾಷೆ

ಒಂದು ಸಲ ಗುಬ್ಬಿಗಳೆಲ್ಲ ತಮ್ಮ ಚೀಂವ ಚೀಂವ ರಾಗವನ್ನು ಮುಗಿಸಿ ಮಲಗುವ ಸಿದ್ಧತೆಯಲ್ಲಿದ್ದಾಗ ಸಂಜೆಯ ನಿಃಸ್ತಬ್ಧತೆಯನ್ನು ಭೇದಿಸಿ, ಬುಲ್‌ಬುಲ್ ಹಕ್ಕಿ " ಜೀವನವೆಂದರೇನು ? " ಎಂಬ ಪ್ರಶ್ನೆಯನ್ನೆತ್ತಿತು.

ಪ್ರಶ್ನೆ ಕೇಳಿ ಗುಬ್ಬಿಗಳೆಲ್ಲ ಸ್ತಂಭಿತವಾದವು. ಆದರೊಂದು ಟಿಟ್ಟಿಭ ಮಾತ್ರ ಉತ್ತರಿಸಿತು : " ಜೀವನವೆಂದರೆ ಸಂಗೀತ " ವೆಂದು.

ಹೊದರಿನಿಂದ ಹೊರಬಿದ್ದು ಅಳಿಲೊಂದು ನುಡಿಯಿತು : " ಜೀವನ ವೆಂದರೆ ಕತ್ತಲೆಯೊಡನೆ ಸಂತತ ಸಂಗ್ರಾಮ " ವೆಂದು.

ಶ್ವೇತ ಕಮಲವೊಂದು ತನ್ನ ಕೋಮಲ ದಳಗಳನ್ನು ಅರಳಿಸುತ್ತ ಹೇಳಿತು : "ಜೀವನವೆಂದರೆ ವಿಕಾಸ" ವೆಂದು. ಆ ಕಲಿಕೆಯನ್ನು ಚುಂಬಿಸುತ್ತ ಭ್ರಮರವೊಂದು ನುಡಿಯಿತು : " ಜೀವನವೆಂದರೆ ಆನಂದ " ವೆಂದು.

" ಛೇ, ಜೀವನವೆಂದರೆ ಅಲ್ಪಕಾಲವಿರುವ ವಸಂತದಂತೆ " ಎಂದು ಹೇಳಿತು ಒಂದು ಮಧುಕೀಟ.

ತನಗಿಂತಲೂ ಭಾರವಾದ ಒಂದು ಹುಲ್ಲುಗರಿಕೆಯನ್ನು ಎಳೆಯುವ ಸಾಹಸದಲ್ಲಿದ್ದ ಇರಿವೆ ಹೇಳಿತು : " ಜೀವನವೆಂದರೆ ಕಠಿಣ ಶ್ರಮ " ವೆಂದು.

ಆಕಾಶದಿಂದ ಉದುರುತ್ತಲಿದ್ದ ಮುತ್ತಿನ ಮಾಟದ ಜಲಕಣಗಳು ಹೇಳಿ ದವು : " ಜೀವನದಲ್ಲಿ ಅಶ್ರುಕಣದ ವಿನಾ ಬೇರೆ ಏನೂ ಇಲ್ಲ " ವೆಂದು.

ಸುರಮ್ಯಗಗನದಲ್ಲಿ ವಿಹರಿಸುವ ಗರುಡ ಪಕ್ಷಿ—ತನ್ನ ಪಕ್ಕಗಳನ್ನು ಫಡ ಫಡಿಸಿ ಹೇಳಿತು : " ಛೇ, ನಿನ್ನ ಮಾತಿನಲ್ಲಿ ಹುರುಳಿಲ್ಲ; ಜೀವನವೆಂದರೆ ನಿಜ ವಾದ ಸ್ವಾತಂತ್ರ್ಯ—ಸಾಮರ್ಥ್ಯ " ವೆಂದು.

ಅನಿತರಲ್ಲಿ ಅಂಧಕಾರ ಪಸರಿಸಹತ್ತಿತು. ಸಂಧ್ಯಾ ಸಮೀರ ಗಿಡಗಳಿಗೆ ಕಿವಿಮಾತನ್ನೂದಿದ : " ಜೀವನವೊಂದು ಸುಂದರ ಸ್ವಪ್ನದಂತಿದೆ "ಯೆಂದು.

ರಾತ್ರಿಯ ನೀರವತೆಯಳಿದು ಮೂಡಣದಲ್ಲಿ ಅರುಣಪ್ರಭೆ ಉಕ್ಕ ಹತ್ತಿತು. ಒಬ್ಬ ವಿದ್ಯಾರ್ಥಿ ಬೆಳಗಿನ ಅಭ್ಯಾಸ ಮುಗಿಸಿ, ದೀಪವಾರಿಸುತ್ತ ನುಡಿದ : " ಜೀವನವೊಂದು ಶಾಲೆ "ಯೆಂದು.

ಇನ್ನೂ ಅನೇಕ ಜನ ನಿದ್ರೆಯ ಮಡಿಲಲ್ಲಿದ್ದರು. ಆಗಲೇ ಎದ್ದು ಪ್ರಾತಃಕಾರ್ಯದಲ್ಲಿ ನಿಮಗ್ನರಾದ ಕೆಲವರೆಂದರು: "ಜೀವನವೊಂದು ಅತೃಪ್ತ ಅಭಿಲಾಷೆ "ಯೆಂದು.

ಬೆಳಗಿನ ಸೊಗಸು ಪಸರಿಸಹತ್ತಿತು. ಗಿಡಮರಗಳು ಸ್ವರ್ಣಪ್ರಭೆಯಿಂದ ರಾರಾಜಿಸ ತೊಡಗಿದವು. ಇಂಥ ಸುರಮ್ಯ ಸಮಯದಲ್ಲಿ ಸೂರ್ಯರಶ್ಮಿಗಳು ಸದ್ಯೋಜಾಗೃತ ವಸುಂಧರೆಗೆ ಅವಘ್ರಾಣ ಪ್ರಬೋಧನವಿತ್ತವು. ವಾತಾವರಣ " ಜೀವನವೊಂದು ಆರಂಭ "ವೆಂಬ ಶಬ್ದದಿಂದ ಝುಮುಝುಮಿಸಹತ್ತಿತು.

# ಅತೃಪ್ತ ವಿಲಾಸ

ತಮಣಾಚಾರಿ ಸಾಯುವ ಸಮಯಕ್ಕೆ ಆ ಮನೆ ಲಕ್ಷ್ಮಿಯ ನೃತ್ಯಾಂಗಣವಾಗಿತ್ತು. ಮನೆತುಂಬ ಮಕ್ಕಳು–ದನ–ಕರ, ಕಣಜದ ತುಂಬ ಕಾಳುಕಡಿ. ೧೬ ಎತ್ತಿನ ಒಕ್ಕಲುತನ. ಮನೆಯಲ್ಲಿ ಹೆಂಡತಿ, ಸೊಸೆಯಂದಿರ ಮೈಮೇಲೆ ತೀರ ಕಡಿಮೆಯೆಂದರೂ ಧಡೆಗೆ ಮಿಕ್ಕುವಷ್ಟು ಬಂಗಾರ, ತುಂಬ ರೇಶಿಮೆಯ ತೆನೆತಿರುವಿದ ಪೀತಾಂಬರುಗಳೇ ಹತ್ತು-ಹನ್ನೆರಡು ಇರಬಹುದು. ಇದರ ಹೊರತು ಬೆಳ್ಳಿಯ ಭಾಂಡಿ; ರೋಖ ಹಣ ಬೇರೆಯೇ ! ರಂಜಣದಲ್ಲಿಯ ಎಡ್ವರ್ಡನ ರೂಪಾಯಿ, ಹಳೆಯ ಕಾಲದ ಸವರಿನ್ ನಾಣ್ಯ, ಚಾಲ್ತಿ ಇಲ್ಲದೆ ಹಸರುಗಟ್ಟಿದ್ದವಂತೆ. ತಮಣಾಚಾರಿಯ ವ್ಯಾಪ ದೊಡ್ಡದು. ಜೀವನ ದೊಡ್ಡದು. ಬಾಳಿಬೆಳೆದ ಕಾಲ ಹಿರಿದು. "ಕಾಲೇ ವರ್ಷತು ಪರ್ಜನ್ಯಃ" ಎನ್ನುವ ಸುಕಾಲದಲ್ಲಿ ಬಾಳು ಮಾಡಿದವ. ಅಖಂಡ ಜೀವಮಾನದಲ್ಲಿ ನೇರವಾಗಿ—ಸತ್ಯವಾಗಿ ಪಾವನ ಜೀವನ ಸಾಗಿಸಿದವ. ಅವನ ದುಡಿಮೆಯ ಸತ್ಯಸಂಧತೆಯ ತಪಸ್ಸಿಗೆ ಮೆಚ್ಚಿ ಇಂಥ ವೈಭವ ಶ್ರೀವರವಾಗಿ–ಬಾಗಿಣವಾಗಿ ಬಂದಂತಿತ್ತು. ಪೇಶ್ವೆಯರ ಪರವಾಗಿ ಈ ನಾಡಿನ ಭಾಗದಲ್ಲಿ ಕಾರುಭಾರವನ್ನು ಸಾಗಿಸುತ್ತಿದ್ದ ರಾಸ್ತೇಕುಟುಂಬಕ್ಕೆ ಇನಾಮಾಗಿ ದೊರೆತ ಭೂಮಿಯ–ತೋಟಪಟ್ಟಿಯ ಸಾಗುವಳಿಯ ಕೆಲಸ ತಮಣಾಚಾರಿಯ ಅಜ್ಜ ತಂದೆಯವರಿಂದ ಅವರ ಮನೆತನಕ್ಕೆ ನಡೆದು ಬಂದಿತ್ತು. ವರುಷದ ಉತ್ಪನ್ನ ಅಪೇಕ್ಷೆಗಿಂತಲೂ ಒಂದಂಶ ಹೆಚ್ಚಾಗಿ ಬರುವಂತೆ ಬೆವರು ಹರಿಸಿ ದುಡಿದು—ಅದರ ಲೆಕ್ಕಪತ್ರವನ್ನು ಪೈ-ಪಾವು ಆಣೆಯಲ್ಲಿಯೂ ತಪ್ಪದಂತೆ ಇಟ್ಟು—ಯಜಮಾನರಿಗೆ ವರ್ಷಾಂತ್ಯದಲ್ಲಿ ಒಪ್ಪಿಸುವ ಪರಿಪಾಠ. ಸಂಶಯ ಅಪನಂಬಿಕೆಗೆ ಒಂದಿಷ್ಟೂ ಅವಕಾಶ—ಅನುವು ದೊರೆಯದು. ನಮ್ಮೂರಿಂದ ೩೦೦ ಮೈಲು ದೂರದ ಸಾತಾರೆಗೆ ಹೋಗಿ, ಲೆಕ್ಕ ಒಪ್ಪಿಸಿ, ಯಜಮಾನರಲ್ಲಿ ನಾಲ್ಕುದಿನದ ಆತಿಥ್ಯ ಸ್ವೀಕರಿಸಿ ಬರುವಾಗ ಹೊನ್ನಿನುಂಗುರ–ಜರತಾರೀ ಶಾಲು–ಬೆಳ್ಳಿಯ ತಾಟು–ತಂಬಿಗೆ ಬಹುಮಾನ ತೆಗೆದುಕೊಂಡು ಬರುವದು. ಮೂವತ್ತು ವರುಷದ

ಈ ಕ್ರಮಕ್ಕೆ ವ್ಯತ್ಯಯವೆಂದೂ ಬಂದಿರಲಿಲ್ಲ. ಈ ಅವಾಢವ್ಯ ವ್ಯವಹಾರ ನಿರ್ವಹಣೆಗೆ–ಮನೆಯ ಹಿರಿಯಮಗ ಕಂಕಣ ಕಟ್ಟಿ ನಿಂತಷ್ಟು ಭರವಸೆ ಯಜಮಾನರಿಗೆ ಆದರೆ ತಮಣಾಚಾರಿಯ ಅಪಮೃತ್ಯುವಿನಿಂದ ಈಗ ಎಲ್ಲವೂ ಸ್ಥಗಿತವಾದಂತಾಯಿತು.

ತಮಣಾಚಾರಿ ಗಂಟುಬೇನೆಯಿಂದ ಮೃತನಾದ. ಊರವರು ಹೇಳುತ್ತಾರೆ: ಅವನೇ ಊರಿಗೆ ಈ ಮಾರಿಬೇನೆಯನ್ನು ಕರೆದು ತಂದನೆಂದು. ಕಾಕತಾಳೀಯವಾಗಿ ಅದೂ ಸರಿಯೇ ! ಯಾಕೆಂದರೆ ನಿತ್ಯಕ್ರಮದಂತೆ ಈ ಸಲವೂ ಅವನು ಯಜಮಾನರಿಗೆ ಅವರ ಆಸ್ತಿಯ ಫಲವನ್ನು ಸಮರ್ಪಿಸಲು ಹೋಗಿ ಬರುವಾಗ ಯಾವ ಬೇನೆಯುಂಟಿದ ಊರಿನಲ್ಲಿ ತಂಗಿ ಬಂದನೋ ತಿಳಿಯದು. ಕಂಕುಳವಲ್ಲಿ ನೋಯುತ್ತಿದೆಯೆಂದು ಹೇಳಿ ಹಾಸಿಗೆ ಹಿಡಿದವನು ತಿರುಗಿ ಏಳಲೇ ಇಲ್ಲ. ೩ ದಿನದಲ್ಲಿ ಪ್ರಾಣ ಸೀಗಿಬಿಟ್ಟ. ಅವನ ಬೇನೆಯು ನೆರಳು ಅಮಾವಾಸ್ಯೆಯಂತೆ ಊರಿಗೆ ಊರನ್ನೆಲ್ಲ ವ್ಯಾಪಿಸುವಷ್ಟು ಪ್ರಬಲಿಸಿತು. ಜನ ಭಯಭೀತರಾಗಿ ಓಡಿಹೋಗಿ ಅಡವಿಯನ್ನು ಸೇರಿಕೊಂಡರು. ಊರು ಬಿಟ್ಟು ಎರಡು ಮೈಲಿನ ಅಂತರದಲ್ಲಿ ಗುಡಿಸಲುಗಳು ನಾಯೀ ಛತ್ತ್ರಿಗೆಯಂತೆ ಕಾಣಿಸಿಕೊಂಡವು. ತಮಣಾಚಾರಿಯೇ ಊರಿಗೆ ಬೇನೆಯನ್ನು ತಂದನೆಂಬ ನಂಬಿಕೆ ದೃಢಮೂಲವಾದಕಾರಣ ಅವನಿಗೆ "ಕರಿಗಾಲಿ"ನವನೆಂದು ಜನ ದೂರಿಕೊಳ್ಳತೊಡಗಿತು. ನಿನ್ನೆ ಮೊನ್ನೆಯವರೆಗೂ "ದೇವತಾ ಮನುಷ್ಯ"ನೆಂದು ಊರವರಿಂದ ಹಾಡಿ ಹೊಗಳಿಸಿಕೊಂಡವನ ಹೆಣ ಸಾಗಿಸಲೂ ನಾಲ್ಕು ಜನ ದೊರೆಯದಾಯಿತು. ಕೊನೆಗೆ ಅವನು ಸಾಕಿ ಬೆಳೆಯಿಸಿದ, ನಚ್ಚಿನಿಂದ ಸಲುಹಿದ "ರಾಜಾ–ಪಾಚ್ಚಾ" ಎತ್ತುಗಳ ಹೆಗಲನ್ನೇರಿ ಅವನ ಸಿದಿಗೆ ಸ್ಮಶಾನಕ್ಕೆ ಸಾಗಿ–ಮಕ್ಕಳ ಕೈಯಿಂದ ಅಗ್ನಿಸಂಸ್ಕಾರ ಪಡೆಯಿತು. ತಮಣಾಚಾರಿಯ ಜೀವಮಾನದಲ್ಲಿ ಅವನ ಹೆಚ್ಚಳವನ್ನು ಸಹಿಸದೆ ಕೊರಗುತ್ತಿದ್ದ ಅವನ ದಾಯಾದಿಗಳು–ಹತ್ತು ದಿನದ ಸಂಬಂಧಿಕರು, ಭೀಮಾಚಾರಿ–ರಂಗಾಚಾರಿ ಇತ್ತಕಡೆಗೆ ಹಣಿಕಿ ಹಾಕುವ ಸಾಹಸ ಮಾಡಲಿಲ್ಲ. ಗಂಟುಬೇನೆಯ ಗಾಳಿ ಬೀಸಿ ತಮ್ಮ ವಂಶವೇಲಿಯನ್ನೇ ಕಿತ್ತೆಸೆದೀತೆಂದು ಗಾಬರಿಗೊಂಡಿರಬೇಕು. ಪರಿಸ್ಥಿತಿಯೂ ಹಾಗೆಯೇ ವಿಷಮಿಸಿಕೊಳ್ಳುತ್ತ ನಡೆದಿತ್ತು. ಒಂಟಿಯಾಗಿ ಹೋಗಲು ಹೆದರಿಕೊಂಡು ಜೊತೆಯನ್ನು ಅಪೇಕ್ಷಿಸಿದನೆಂಬುವಂತೆ ಕಾಕಪಿಂಡಕ್ಕೂ ಕೂಡ

ಅವಕಾಶ ಮಾಡಿಕೊಳ್ಳದೇ ತಮ್ಮಣ್ಣಾಚಾರಿ ಸತ್ತ ೧೦-೧೨ ದಿನಗಳಲ್ಲಿಯೇ ಬೆಳೆದು ನಿಂತ ಇಬ್ಬರು ಗಂಡಸುಮಕ್ಕಳು, ಅವರ ಹೆಂಡಂದಿರು, ಮೂವರು ಮೊಮ್ಮಕ್ಕಳನ್ನು ಬಲಿ ತೆಗೆದುಕೊಂಡು ಹೋದ. ಗಂಡ ಸತ್ತು ಬಾಲವಿಧವೆಯಾಗಿ ತೌರುಮನೆ ಸೇರಿದ ಅವನ ಒಬ್ಬ ಮಗಳು ಮತ್ತು ಹೆಂಡತಿ ಮಾತ್ರ ಮರಣದ ದವಡೆಯಿಂದ ನುಣುಚಿಕೊಂಡು ಬದುಕಿದರು. ಮನೆಯಲ್ಲಿ ದುಡಿಯುವ ಆಳುಮಕ್ಕಳು ಈ ಹೆಣಗಳನ್ನು ಸಾಗಿಸಿ "ಮಣ್ಣು ಮಾಡಿದ' ರೆಂದು ಹೇಳುತ್ತಾರೆ. ಪ್ರತ್ಯಕ್ಷ ನೋಡುವ ಪಾಪವನ್ನು ಯಾರೂ ಮಾಡಿಲ್ಲ. ಐತಿಹಾಸಿಕ ಮಹತಿಯನ್ನು ಪಡೆಯಲಾರದ ಇಂಥ ಒಂದು ಘಟನೆಯ ಬಗ್ಗೆ— ಅದಕ್ಕೆ ಸಂಬಂಧಿಸಿದ ಪ್ರತ್ಯಕ್ಷದರ್ಶಿಗಳೆಂಬರ ಕಡೆಯಿಂದ ಯಾವ ಸತ್ಯಾಂಶವನ್ನು ಅರಿತುಕೊಂಡು ಏನು ಮಾಡಬೇಕಾಗಿದೆ ?

ತಮ್ಮಣ್ಣಾಚಾರಿಯ ಹೆಂಡತಿ ಕೃಷ್ಣಮ್ಮ ಮೊದಲೇ "ತಿರಸಿಷ್ಟ" ಎನ್ನುತ್ತಾರಲ್ಲ-ಆ ಜಾತಿಗೆ ಸೇರಿದವಳು ಅಲ್ಲದ ಈಗಂತೂ ಗಂಡುಮಕ್ಕಳು ಮೊಮ್ಮಕ್ಕಳು ಎಲ್ಲರೂ ಮಾತಾಡಿಕೊಂಡಂತೆ ಅವಳನ್ನು ನಿರಾಧಾರಳನ್ನಾಗಿ ಅನಾಥಳನ್ನಾಗಿ ಮಾಡಿಹೋಗಿದ್ದರು. ತುಂಬಿದ ಮನೆ ಕ್ಷಣಾರ್ಧದಲ್ಲಿ ತೆರವಾಗಿತ್ತು. ಮನದ ನೀರವತೆ ರಾಹು ಹೊಡೆದಂತೆ ಆ ದೊಡ್ಡ ಮನೆಯ ಭಣಭಣತೆಗೆ ತೀರ ಭಯಾನಕ ಸ್ವರೂಪವನ್ನು ಒದಗಿಸಿತ್ತು. ಹತ್ತೆಂಟು ದೊಡ್ಡ ದೊಡ್ಡ ಕೋಣೆಗಳು ವಿಶಾಲವಾದ ಮೊಗಸಾಲೆ. ದನ ಕಟ್ಟುವ ಉದ್ದನ್ನ ದಾವಣಿ. ೩೦-೪೦ ಜನ ಪ್ರಶಸ್ತವಾಗಿ ಊಟಕ್ಕೆ ಕುಳಿತುಕೊಂಡರೆ ಸಂಕೋಚವಾಗದ ಅಡುಗೆಯ ಮನೆ. ಹಿಂದೆ ವಿಶಾಲವಾದ ಹಿತ್ತಲಮನೆ. ಹಿತ್ತಲಿನಲ್ಲಿ ಒಂದು ತೀರ ಹಳೆಯದಾದ ಅಶ್ವತ್ಥವೃಕ್ಷ. ಅದನ್ನು ಪರಿವೇಷ್ಠಿಸಿದ ಎತ್ತರು ಕಟ್ಟೆ. ಮನೆ ತುಂಬಿ ತುಳುಕುತ್ತಿದ್ದಾಗ ಇದೇ ಕಟ್ಟೆಯ ಮೇಲೆ ಕುಳಿತು ತಮ್ಮಣ್ಣಾಚಾರಿಯ ಸೊಸೆ, ಮೊಮ್ಮಕ್ಕಳು ಬೆಳುದಿಂಗಳಲ್ಲಿ ಪಂತಿಯನ್ನು ಮಾಡಿದ್ದಾರೆ. ಆಸರಿಕೆ ಬೇಸರಿಕೆಯಾದಾಗ ಗಾಳಿಗೆ ಮೈಯೊಡ್ಡಿ ಅವನ ಮಕ್ಕಳು ಇಲ್ಲಿಯೇ ಅಡ್ಡಾಗಿದ್ದಾರೆ. ಈ ಅಶ್ವತ್ಥ ಕಟ್ಟೆಯ ಮೇಲೆ ಕುಳಿತು ಅವನೇ ಸ್ವತಃ ಅದೆಷ್ಟೋ ಸಲ ಸಂಧ್ಯಾವಂದನೆಯನ್ನು ಮಾಡಿದ್ದಾನೆ. ಅಂದು ಅದರ ವರ್ಣಸ್ಪಂದನದಲ್ಲಿ ಆನಂದ ಗೀತ ನಿನದಿಸಿದ್ದರೆ ಇಂದು ಆ ಗಿಡದ ರೆಂಬೆ-ಕೊಂಬೆ ಎಲೆ ಎಲೆಗಳಿಂದ

ಮೃತರ ಅಸ್ಪಷ್ಟವಾದ-ಅಪೂರ್ತವಾದ-ಆರ್ತನಾದ ಮಿಡಿಯುವಂತಿದೆ. ಅಕಲ್ಪಿತವಾದ-ಅಕಾಲಿಕವಾದ ಮೃತ್ಯು, ಈ ಮನೆಯ ಜೀವಸತ್ವವನ್ನು ಹೀರಿದರೂ ಅತೃಪ್ತ ಆಶಾಚ್ಛಾಯೆಯನ್ನು ಮಾತ್ರ ಈ ಗಿಡದ ಇಂದಿನ ಅವಕಳೆಯಲ್ಲಿ ಇರಿಸಿ ಹೋದಂತೆ ಕಾಣುತ್ತಿದೆ. ಸಾಯಬಯಸದೆ ಸತ್ತ ತಮಣಾಚಾರಿ ಅವನ ಮಕ್ಕಳು-ಮರಿ ಎಲ್ಲರಿಗೂ ಈ ಗಿಡ ನಿವಾಸಸ್ಥಾನವಾಗಿದೆಯೆಂದು ಹೇಳುತ್ತಾರೆ. ಆ ಗಿಡದ ನೆರಳಿನ ಸೌಭಾಗ್ಯವನ್ನು ಜೀವಿತ ಕಾಲದಲ್ಲಿ ಅನುಭವಿಸಿದವರು ಮೃತರಾದ ಮೇಲೂ ಯಾಕೆ ಬಿಟ್ಟಾರು ?

ಹೀಗೆ ತುಂಬಿತುಳುಕುವ ಆ ಮನೆಗೆ ಅಕಲ್ಪಿತ ಅಂತ್ಯವಾಯಿತು. ದೇವರು-ಧರ್ಮ, ಪಾಪ-ಪುಣ್ಯ ಯಾವುದೂ ಯಾರ ನೆರವಿಗೂ ಕೈಚಾಚಲಿಲ್ಲ. ಕಾಲಪುರುಷನ ಉನ್ಮತ್ತ ತೇರು ಕುರುಡುಗಣ್ಣಿಂದ ಈ ಮನೆಯನ್ನು ತುಳಿದು ಮುಂದೆ ಸಾಗಿ ಹೋಯಿತು.

ಆ ಮಾತಿಗೆ ಇದೀಗ ೨-೩ ವರುಷವಾಗಿರಬಹುದು. ಆ ಮನೆಯಲ್ಲಿ ಈಗ ಕೃಷ್ಣವ್ವ, ರಾಧವ್ವ (ತಮಣಾಚಾರಿಯ ವಿಧವೆಯಾದ ಮಗಳು) ಎರಡು ಜೀವಂತ ಭೂತಗಳು ಅಲೆದಾಡುತ್ತಿವೆ. ಒಕ್ಕಲುತನ-ಊಳಿಗ ದನಕರ ಎಲ್ಲವೂ ಯಾರು ಯಾರದೋ ಪಾಲಾಗಿ ಹೋಯಿತು. ಯಜಮಾನರ ಜಮೀನಿನ ಸಾಗುವಳಿ ಊರ ಗೌಡರ ಪಾಲಿಗೆ ಹೋಯಿತು. ತಮಣಾಚಾರಿಯ ಸ್ವಂತ ಜಮೀನುಗಳನ್ನು ಅವನ ಮನೆಯಲ್ಲಿ ದುಡಿಯುತ್ತಿದ್ದ ಹಿರಿಯ ಕಮತಿಗ–ಸದಾಶಿವ ಸಾಗಿಸಹತ್ತಿದ. ಕಾಳು-ಕಡಿ ಬೇಕಾದಾಗ ಕೃಷ್ಣವ್ವ ಅವನ ಮನೆಗೇ ಹೋಗಿ ತನಗೆ ಬೇಕಾದಷ್ಟನ್ನು ತರುತ್ತಾಳೆ. ಆ ಮನೆಯ ಮುಂದೆ ಹಾಯುವ ಧೈರ್ಯವೇ ಯಾರಿಗೂ ಆಗುವದಿಲ್ಲ. ಇನ್ನು ಒಳಗೆ ಹೋಗಿ ಆ ಎರಡು ಜೀವಿಗಳ ಸುಖ ದುಃಖವನ್ನು ವಿಚಾರಿಸುವ ಮಾತಂತೂ ದೂರೇ ಉಳಿಯಿತು. ಹಾಲಿನ ಹೆಣ್ಣುಮಗಳು ಕೂಡ, ತಲೆಬಾಗಿಲಿನಿಂದ ಕೂಗುತ್ತಾಳೆ. ಒಮ್ಮೆ ಒದರಿ, ಉತ್ತರ ಬರದಿದ್ದರೆ ಭಿರಭಿರನೇ ಮುಂದೆ ಹೋದಾಳು. ಆದರೆ ಒಳಗೆ ಹೋಗಿ ಹಾಲು ಹಾಕಿ ಬರುವ ಎದೆ ಮಾಡಲಾರಳು. ಅದರಂತೇ ಕಾಯಿ-ಪಲ್ಲೆಯವಳು. ಇದೆಲ್ಲವನ್ನು ಹೇಗಾದರೂ ಸಹಿಸಿಯಾದೀತು. ಆದರೆ ೨-೨॥ ತಿಂಗಳಿಗೆ ಈ "ಗರುಡೆಯರ" ಮುಂಡನಕ್ಕೆ ಬರುವ ನಾವಲಿಗರ ಯಮುನ್ಯಾ ಕೂಡ ಹೊರಗಿನ ಕಟ್ಟೆಯ ಮೇಲೆಯೇ—ಅಂದರೆ ತಲೆ

ಬಾಗಿಲಿನ ಮುಂದಿನ ಕಟ್ಟೆಯ ಮೇಲೆ ಕುಳಿತೇ ತನ್ನ ಕರ್ತವ್ಯಕರ್ಮವನ್ನು ಯಥಾಸಾಂಗವಾಗಿ ಪೂರೈಸುತ್ತಾನೆ. ಇಬ್ಬರ ತಲೆಯ ಲೆಕ್ಕ ೨ ಆಣೆಯಂತೆ ನಾಲ್ಕಾಣೆಯಾಗುವದು. ಇಷ್ಟು ಅತ್ಯಲ್ಪ ಉತ್ಪನ್ನಕ್ಕೆ ಆಶೆಬಟ್ಟು, ಜೀವನವನ್ನು ಸಂಕಟದಲ್ಲಿ ಹಾಕಲಾರ. ಅಷ್ಟೇಕೆ? ಈ ಮನೆಯ " ಧನಲಕ್ಷ್ಮಿ " ಯನ್ನು ಒಲಿಸಿಕೊಳ್ಳುವ ಧೈರ್ಯವನ್ನು ಆಶೆಬುರುಕರಾದ ಭೀಮಾಚಾರಿ ರಂಗಾಚಾರಿ ಮಾಡಲಾರದಾಗಿದ್ದರು. ಅವರ ಅಂತರಂಗದ ಆಶೆ ಈ ಸ್ವರ್ಣಕುಂಭವನ್ನು ಒಂದೇ ಗುಟುಕಿಗೆ ಎಟುಕಿಸಬಯಸಿದರೂ ಸಮೀಪವರ್ತಿಯಾಗುವ ಸತ್ವವನ್ನು ಪಡೆದಿರಲಿಲ್ಲ. ಮೇಲಾಗಿ ತಮ್ಮ ಅಸಡ್ಡೆಯಿಂದ—ದಾಯಾದಿತ್ವದಿಂದ " ಕಾಕಪಿಂಡ " ವನ್ನೂ ಕಾಣದೆ ರೌರವದಲ್ಲಿ ತೊಳಲುತ್ತಿದ್ದ, ಭೂತಬೆಂತರವಾಗಿ ಅಲೆಯುತ್ತಿದ್ದ ತಮಣಾಚಾರಿಯ ಪರಿವಾರದ ಭೀತಿಯೊಂದು ಅವರನ್ನು ಅಳುಕಿಸುತ್ತಿತ್ತು. ಹೀಗಾಗಿ ಆ ಮನೆಯಲ್ಲಿಯ ಆ ಎರಡು ಜೀವನ್ಮೃತ ವ್ಯಕ್ತಿಗಳಿಗೆ ಮನುಷ್ಯ ಪ್ರಾಣಿವರ್ಗದ ಸಂಪರ್ಕವೇ ವಿರಳವಾಗುತ್ತ ನಡೆದಿತ್ತು.

ಸಂಜೆಯ ೪–೪॥ ಗಂಟೆಯ ಹೊತ್ತಿಗೆ ಆ ಎರಡೂ ವ್ಯಕ್ತಿಗಳು ಭೂತಗೃಹದಿಂದ ಹೊರಬಿದ್ದು ಬಂದು ತಲೆಬಾಗಿನ ಮುಂದೆ ಜಯ–ವಿಜಯರಂತೆ ಕುಳಿತು, ಹೋಗಿಬರುವ ಜನರನ್ನು ಮಾತಾಡಿಸುವ ಪ್ರಯತ್ನ ಮಾಡುತ್ತಿದ್ದವು. ಅವಕ್ಕೆ ಜನರ ಸುಖ ದುಃಖದ ಪೃಚ್ಛೆಯಲ್ಲಿ ಉತ್ತರದ ಅಪೇಕ್ಷೆಯಿಲ್ಲ. ನಿರುತ್ತರದ ದುಃಖವಿಲ್ಲ. ಮೌನದ ವ್ಯಾಕುಲತೆಯಿಲ್ಲ. ನನ್ನಂಥ ಒಬ್ಬ ಎಬಡ " ಯಾಕ ಆಯೀ ಕೂತಿರ್ಯಾs " ಎಂದು ಕೇಳಿದರೆ, ಸ್ವರ್ಗಸುಖ ದೊರೆತಷ್ಟು ಆನಂದದಿಂದ " ಹೌದಪಾ ಕೂತೇವುs. ಯಾಕ ರಾಮಣ್ಣಾ ಇಕಡಿ ಕಡೆ ಎಲ್ಲೂ ಕಾಣೂದೇ ಇಲ್ಲಾ. ಭಾಳ ದಿನಕ ಭೆಟ್ಟಿ ಆದಿಪಾ. ಸೀನ ಇದ್ದಾಗ ಬರುತಿದ್ದಿ; ಈಗ ಯಾಕ ಬಂದೀಯಪಾ. (ಸೀನ ಅವರ ಎರಡನೇ ಮಗ; ನನ್ನ ಓರಗೆಯ ಗೆಳೆಯ) ಸುಂದರಕ್ಕ (ನನ್ನ ತಾಯಿ) ನೆಟ್ಟಗಿದ್ದಾರs". ಭೆಟ್ಟಿಯಾದಾಗೊಮ್ಮೆ ಆಡುವ ನಿಶ್ಚಿತ ಮಾತಿವು. ಆ ಮಾತಿನಲ್ಲಿಯ ಕಳವಳ, ದುಃಖ, ಅಪಾರ ನೋವು ನನ್ನೆದೆಯನ್ನು ಕಲುಕಿಸಿಬಿಡುತ್ತಿದ್ದವು. ತಮ್ಮ ಗತಿ ಏನೇ ಆಗಿದ್ದರೂ ನನ್ನ ತಾಯಿಯ ಸುಖದುಃಖದ ವಿಚಾರ ಮಾಡುವ ಆತ್ಮೀಯ ಭಾವ. ಇಂಥ ದುರ್ಧರ ಪ್ರಸಂಗವನ್ನು ತಪ್ಪಿಸಲೆಂದು ತಿಂಗಳಾನು

ಗಟ್ಟಿಲೆಯಾಗಿ ನಾನು ಅವರ ಮನೆಯ ಮುಂದೆ ಹಾಯುವ ಎದೆ ಮಾಡುತ್ತಿರಲಿಲ್ಲ. ನಾನೇ ಏಕೆ ? ನನಗಿಂತ ವಯಸ್ಸಿನಲ್ಲಿ ತೀರ ಹಿರಿಯರಾದ, ಗೋರಿಯ ದಾರಿಯನ್ನು ಕಾಯುವ ಮುಪ್ಪಿನ ಮುದುಕ–ಮುದುಕಿಯರೂ ಕೂಡ ಈ ಎರಡು ಜೀವನಗಳಿಗೆ ಸಾಂತ್ವನ ಬೀರುವ ಒಂದೆರಡು ಮಾತುಗಳನ್ನೂ ಕೂಡ ಆಡುವ ಮನಸ್ಸು–ಧೈರ್ಯ–ಮಾಡುತ್ತಿರಲಿಲ್ಲ. ಜನಸಂಪರ್ಕ ತಪ್ಪಿದ ಈ ಲೋಕಬಾಹಿರ ವ್ಯಕ್ತಿಗಳು ನಿರಾಶರಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳಬಹುದೆಂದು ಒಂದೊಂದು ಸಲ ನನಗೆನಿಸುತ್ತಿತ್ತು. ಅಂಥ ಅಂತ್ಯಕ್ಕೆ ಇವರ ಸರ್ವ ಸನ್ನಾಹವಿದ್ದರೂ ಕೊನೆಯಗಳಿಗೆ ಮಾತ್ರ ಇನ್ನೂ ಫಲಿಸಿದಂತಿರಲಿಲ್ಲ ಜನತೆಯೊಡನೆ ವಿಧಿಯೂ ಇವರ ಕೂಡ ಮುಂಗಚೇಷ್ಟೆಯಾಡುತ್ತಿರಬೇಕು.

ಮತ್ತೆ ವರುಷಾರು ತಿಂಗಳು ಸಾಗಿಹೋದವು. ನಿತ್ಯಕ್ರಮದಲ್ಲಿ, ಜೀವನದಲ್ಲಿ ಯಾವ ಬದಲಾವಣೆ ಕಾಣದಿದ್ದರೂ ಸೃಷ್ಟಿಯಲ್ಲಿ ಮಾತ್ರ ಅಭೂತಪೂರ್ವ ಘಟನೆ ನಡೆದುಹೋಯಿತು ಸುಮಾರು ೩೦–೪೦ ವರುಷದ ಅವಧಿಯಲ್ಲಿ ಬೀಳಲಾರದಷ್ಟು ಮಳೆ ಆ ವರುಷ ಬಿದ್ದಿತು. ಮನೆಬಿದ್ದು ಅನೇಕ ಕುಟುಂಬ ನಿರಾಶ್ರಿತವಾದವು. ಗುಡಿಯ–ಧರ್ಮಶಾಲೆಯ ನೆರಳಿನ ಆಸರೆಗೆ ಹೇಗೋ ನಿಂತುಕೊಂಡವು. ಇದ್ದ ವಿಶಾಲವಾದ ಮನೆಗಳಲ್ಲಿ ಒಂದರ ಜೊತೆಗೆ ನಾಲ್ಕು ಸಂಸಾರ ಒಲೆ ಹೂಡಿದವು. ಲೋ. ಬೋ. ಶಾಲೆಗಳಲ್ಲಿ ರಾತ್ರಿಯ ವೇಳೆಯನ್ನು ಕಳೆಯುವ ಪ್ರಸಂಗ ಬಂದಿತು. ನನ್ನ ಮನೆ ಗಾರೆಗಲ್ಲಿನದು–ಅದರ ಮೂನೆಯೂ ಕೊಂಕಿರಲಿಲ್ಲ. ಆದರೆ ಎದುರು ಮನೆಯ ಸದಾಶಿವನ ಮನೆಗೆ ಹೊಂದಿಕೊಂಡಿದ್ದ ದಿವಂಗತ ತಮಣಾಚಾರಿಯ ಮನೆಯ ಕೆಲ ಭಾಗ ಮಾತ್ರ ಕುಸಿದುಬಿದ್ದಿದ್ದವು. ತೋಫಿನ ಹೊಡೆತದಿಂದ ದೊಡ್ಡ ಖಿಂಡಿ ಬಿದ್ದಂತೆ ತಮಣಾಚಾರಿಯ ಮನೆಯ ಪಡಸಾಲೆಯಲ್ಲಿಯ ಒಂದಂಕಣ ಸಂಪೂರ್ಣವಾಗಿ ಭೂಮಿಗತವಾಗಿತ್ತು. ನಮ್ಮ ಮನೆಯ ಅಟ್ಟದ ಮೇಲೆ ನಿಂತರೆ ಅವರ ಮನೆಯ ಪಡಸಾಲೆಯಲ್ಲಿ ನಡೆಯುವ ಸರ್ವ ಚಲನವಲನವನ್ನು ಸಾಧಾರಣವಾಗಿ ನೋಡಿ ಊಹಿಸಬಹುದಾಗಿತ್ತು. ಇದ್ದ ಮನೆಯೋ " ಬೆಕೋ " ಎನ್ನುವಾಗ ಬಿದ್ದ ಭಾಗದ ದುರಸ್ತಿಯನ್ನು ಯಾರು–ಯಾರಿಗಾಗಿ ಮಾಡಿಸಬೇಕು?

ಒಂದು ದಿನ ಸದಾಶಿವ ಬಂದು ಕುಳಿತು, ಆ ಮಾತು ಈ ಮಾತು ಆಡಿ, ಕೊನೆಗೆ " ಅಂಣಾ, ಇಷ್ಟು ದಿನಾ ನಮ್ಮ ಮನೀ ನಡವ ಮತ್ತ ಧಣೇರ ಮನೀ ನಡವ ಗ್ವಾಡೀ ಇತ್ತು. ಆ ಕಡಿ ಏನ ನಡೀತಿತ್ತೋ ಶಿವಗs ಗೊತ್ತು. ಆದ್ರ ಮನ್ನೀ ಮಳೀಗೆ ಆ ಗ್ವಾದಿ ಕುಸದಾಗಿಂದs—ನನ್ನ ಮನೀ ಒಳ ಜಗಲೀ ಮ್ಯಾಲ ನಿಂತರ ಧಣೇರ ಪಡಸಾಲ್ಯಾಗ ಖಿಂಡಿ ಬಿದ್ದೈತೆಲಾ-ಅದರಾಗಿಂದ ಒಳಗ ಏನ ನಡದsದ ಎಲ್ಲಾ ಕಾಣತದ. ಆ ಮನೀಗ ಕಂಣ ಹುಟ್ಟಿದಾಂಗ ಆಗ್ಯೈತಿ ಆ ಖಿಂಡಿ. ಅಲ್ಲಿ ನಡಿಯೂದ್ನ ನೋಡಾಕ ಎದಿಯಿಲ್ಲs ಬಿಡಾಕ ಗತಿಯಿಲ್ಲ. ಹೀಗಾಗಿ ನಾ ಬಲೆ ಕತ್ರ್ಯಾಗ ಸಿಕ್ಯಾಂಗಾಗೀನಿ. ಗೌಡ್ರ ಓಣ್ಯಾಗಿನ ನನ್ನ ಸ್ವಥಾದ ಮನೀ ತಯಾರಾಗೂತನಾ ನಾ ನಿಮ್ಮನ್ಯಾಗs ಮಲಗತೀನಿ. ಹುಡುಗೂರು ಹುಪ್ಪಡಿ ನಾಕ ದಿನ ಮಾವನ ಮನೀಗ ಹೋಗವಲ್ಲರ್ಯಾಕ."

"ಯಾಕ ಸದೂ, ಆ ಮನ್ಯಾಗ ಆಡಿ ಬೆಳದ ನೀನೂ ಅಂಜಲಿಕ್ಕೆ ಹತ್ತಿದೇನು ? ನಿನ್ನ ಮನ್ಯಾಗ ನೀ ಮಲಕ್ಕೊಳ್ಳಿಕ್ಕೆ ಯಾಕ ಅಂಜತೀ. ನಿನಗೆ ಭಿಡೆ ಅನಿಸಗಿದ್ರ ಇಕಾ ನಮ್ಮ ನಡಮನ್ಯಾಗಿನ ಖೋಲೀ ಖಾಲೀ ಮಾಡಿಸಿಕೊಡತೀನಿ. ಹೆಂಡ್ರೂ-ಮಕ್ಳೂ-ಬೇಕಾದರ ಅಲ್ಲೇ ಇರ್ರಿ."

" ರಾಮಂಣಾ, ನಾ ಏನ ಅಂಜೂ ಮಗಾ ಅಲ್ಲಾ. ಆದ್ರs...."

"ಆದ್ರೇನು ಸದೂ, ನನ್ನ ಮುಂದ ಹೇಳ್ಲಿಕ್ಕೆ ಯಾಕ ಬೆದರಿಕಿ ?'' ನಾನು ಮತ್ತೆ ಮತ್ತೆ ಕೇಳಿದೆ.

ಸದಾಶಿವ ಭಯಭೀತನಾಗಿ ಹೇಳತೊಡಗಿದ.

"ಮನ್ನೆ ರಾತ್ರೀ ಕಾಲ್ಮಡ್ಯಾಕ ಅಂತ ಎದ್ದು ಹೊರಗೆ ಬಂದೆ. ಹಾಂಗs ದನಗೋಳ ಮುಂದ, ಹಿಡಿ ಕಣಿಕೀ ಒಗೀಬೇಕಂತ ದಾವಣ್ಯಾಗ ಹೋದೆ. ಕಣಿಕಿ ಹಾಕಿ ತಿರಗಿ ಬರಾಂವ, ಅಪ್ಪರಾಗs ಧಣೇರ ಮನ್ಯಾಗಿನ ಪಡಸಾಲ್ಯಾಗ ದೊಡ್ಡದಾಗಿ ದೀಪ ಉರ್ಯಾಕ ಹತ್ತಿತ್ತು. ಇಂಥಾ ಅಪರಾತ್ರ್ಯಾಗ ಏನ ದೀಪಾ ಉರಸ್ತಾರಪಾ ಅಂತ ಆ ಖಿಂಡ್ಯಾಗಿಂದ ನೋಡಿದರ ಕಂಣಿಗಿ ಕತ್ಲ ಬಂಧಾಂಗಾಗಿ ತಲೀ ಗಿಮಿಗಿಮಿ ತಿರಗಾಕs ಹತ್ತು. ನಾ ಹ್ಯಾಂಗರೆ ಬಂದು ಹಾಸಿಗೀ ಮ್ಯಾಲ ಕುಂತ್ನ್ಯಾ ಶಿಂವಗs ಗೊತ್ತುs. ಮತ್ತ, ನನ್ನ ಕಡಿಂದಯೋನ ಮಲಗೂ ಧೈರ್ಯ ಆಗ್ಲಿಲ್ಲ. ಹೇಣ್ತೀನ ಎಬ್ಬಿಸಿ ಹೇಳಿದರ ಅಂಜಿ ಎದಿ ಒಡಕೊಂಡಾಳಂತ ಸುಮ್ಮs ಕುಂತ್ನೀ. ಕೂಡೂದುಕೂ ಧೈರ್ಯಾಯಿಲ್ಲ.

ಕಡೀಕಿ ಆಕಿನ್ನ ಎಬ್ಬಿಸಿ, ಬೆಳಗಹರ್‍ಯಾಕ ಬಂತೂ–ಬೀಸಾಕ ಹಾಕ ಏಳು ಅಂತ ಹೇಳಿ, ಇನಾ ಮೂರ-ನಾಕ ತಾಸ ರಾತ್ರಿ ಇರೂತ್ಲೂ ಬೀಸೂದ್ಕ ರೊಟ್ಟೀ ಮಾಡೂದ್ಕ ಹಚ್ಚಿದೆ. ಹ್ಯಾಂಗಾರಿ ರಾತ್ರೀ ಕಳದೆ. ಮರದಿನಾ ಅಂದ್ರಿ ನಿನ್ನೆ ಒಂದ ಜರಾ ಝುಲ್ಲ ಬಿಟ್ಟಿತು. ಆದ್ರ ಮತ್ತ ಅದಃ ನೋಡಿದ್ನಿ."

"ಏನು ನೋಡಿದ್ದು ಅದನ್ನು ಹೇಳಾದರೂ ಹೇಳಲ್ಲ"

ಅವನಿಗೆ ವಿವರಿಸುವ ಧೈರ್ಯವಾಗಲಿಲ್ಲ. ಹೇಳಿದರೂ ನಾನು ನಂಬು ವೆನೋ ಇಲ್ಲವೋ ಎನ್ನುವ ಅನುಮಾನ ಅವನಿಗೆ.

"ನನ್ನ ಹೇಳಿಕೀ ಮ್ಯಾಗ ನಂಬಿಗಿ ಬ್ಯಾಡಾ. ಇಂದ ರಾತ್ರೀ ಬೇಕಾರ ನಿಮ್ಮ ಅಟ್ಟದ ಮ್ಯಾಲ ನಿಂತು ಕಂಣಾಕಿ ನೋಡೇಬಿಡಾಕೆಂತ. ಆಗ ನನ್ನ ಮಾತ ಪಟಾಸೀತು" ಅವನು ಹೇಳಿದ

ಅಂದು ರಾತ್ರಿಯ ಕಾರ್ಯಕ್ರಮ ನಿಶ್ಚಯವಾದಂತಾಯಿತು. ಸದಾಶಿವ ತಾನು ಯಾವುದೋ ಜರೂರಿಯ ಕೆಲಸದ ಸಲುವಾಗಿ ಬೇರೆ ಊರಿಗೆ ಹೋಗುವದಿದೆಯೆಂದು ಹೇಳಿ ಹೆಂಡತಿ ಮಕ್ಕಳನ್ನು ಮಾವನ ಮನೆಯಲ್ಲಿ ಬಿಟ್ಟು ಬಂದ. ಮುಚ್ಚುಂಜೆಯಾಗಿ ದೀಪ ಹಚ್ಚುವ ಹೊತ್ತಿಗೇ ಬಂದು ನಮ್ಮ ಮನೆಯಲ್ಲಿ ತಳಊರಿದ. ಅಂದು ಅವನು ತೋರಿಸುವ ಅದ್ಭುತ ಚಮತ್ಕಾರ–ಭಯಂಕರ ನೋಟವನ್ನು ನೋಡುವ ಆಶೆ, ಕುತೂಹಲ ನನಗೆ. ಆದರೆ ಆ ಕುತೂಹಲದಲ್ಲಿ, ಆಶೆಯಲ್ಲಿ ಭಯ ಬೆರೆಯದೆ ಇರಲಿಲ್ಲ.

ರಾತ್ರಿಯ ಊಟದ ವೇಳೆಯಲ್ಲಿ ನನ್ನ ತಾಯಿ ಕೇಳಿದರು:

"ಯಾಕ, ಇಂದ ಸದಾಶಿವ ಬಂದ ಕೂತಾನ ಇಲ್ಲೀಽ"

"ಅವನಃ ಆ ರಾಸ್ತೇನವರ ಹೊಲಾ ಇದ್ದೂ ಅಲಾ, ಕಮಣಾಚಾರಿ ಮಾಡ್ತಿದ್ದೂ. ಅವನ್ನ ಪಾಲಲೇ ಮಾಡಬೇಕೆಂತ ಮಾಡ್ಯಾನ. ಇವಾ ಆಚಾರ ಮನೀ ಕಮತಗ್ಯಾ. ಛಲೋ ದುಡ್ಯಾವ ಅನ್ನೂದು ಅವರಿಗೂ ಗೊತ್ತು. ಅದಕಽ ಕಾಗದ ಪತ್ರಾ ನೋಡಿ ಜಮಾಸಿದ್ರ ಹೊಂದಿಸಿಕೊಡತೇನಿ, ಬಾ ಅಂತ ಹೇಳಿದ್ದೆ"

ನಿಜ ಸಂಗತಿಯನ್ನು ಮರೆಯಿಸಲಿಕ್ಕೆ ಏನೋ ಸುಳ್ಳಿನ ಕಂತೆ ಬಿಚ್ಚಿದೆ.

ಹಳ್ಳಿಯಲ್ಲಿಯ ರಾತ್ರಿಯ ೧೦ ಗಂಟೆ ಎಂದರೆ ಮಧ್ಯರಾತ್ರಿಯಾದಂತೆಯೇ! ಊರೆಲ್ಲ ನಿಸ್ತಬ್ಧವಾಗಿ ನಿದ್ದೆಯ ಮಡಲಿನಲ್ಲಿ ಪವಡಿಸಿತ್ತು. ಗಾಳಿ

ಕೂಡ ಯಾವ ಮನೆಯ ಮೂಲೆಯನ್ನು ಸೇರಿತ್ತೋ ಯಾರು ಬಲ್ಲರು. ಮೇಲೆ ಕತ್ತಲು ಕವಿಕಾಳ. ಗ್ರಾಮಪಂಚಾಯತಿಯ ಬೆಳಕು ಇನ್ನೂ ನಮ್ಮ ಬೀದಿಗೆ ಬಂದಿರಲಿಲ್ಲ. ಆಗೀಗ ಒದರಿದಕೆ ಒಂದೆರಡು ನಾಯಿಗಳ ಬೊಗಳಿಕೆ. ದೂರದ ಓಣಿಯಿಂದ ಕೇಳಿಬರುತ್ತಿದ್ದ ನಾಯಿಯ ಕರ್ಕಶ ರೋದನ. ನಾನು ಸದಾಶಿವ ಇಬ್ಬರೂ ಮೇಲಟ್ಟದ ಮೇಲಿನ ಕೋಣೆಯಲ್ಲಿ " ನರಸಿಂಗಸಾ ಭಾಪ " ಬೀದಿಗಳನ್ನು ಟೂದಿಮಾಡುತ್ತ ಕುಳಿತೆವು. ಮಾತು ಅಷ್ಟಾಗಿರಲಿಲ್ಲ. ನಾವು ಕುಳಿತ ಕೋಣೆಯ ಬಾಗಿಲಿಗೆ ಬಂದು ನಿಂತರೆ ಎದುರಿಗೆ ತಮ್ಮಣಾಚಾರಿಯ ಮನೆಯು ಸ್ಪಷ್ಟವಾಗಿ ಕಾಣುತ್ತಿತ್ತು. ಹಿತ್ತಲಿನಲ್ಲಿಯ ಅಶ್ವತ್ಥವೃಕ್ಷ ಕತ್ತಲೆಯಲ್ಲಿ ಭೂತಾಕಾರ ತಳೆದು ನಿಂತಂತೆ, ಆ ಮನೆಯ ಹಿಂದಿನಿಂದ ಎದ್ದು ನಿಂತಿರುವಂತೆ ಭಾಸವಾಗುತ್ತಿತ್ತು. ಅದರ ಹಿರಿಯ ಟೊಂಗೆಗಳು ಕತ್ತಲೆಯಲ್ಲಿ ಕೈಚಾಚಿ ಯಾರನ್ನೋ ಏನನ್ನೋ ಹಿಡಿಯ ಹವಣಿಸುವಂತೆ, ಪಸರಿಸಿದಂತೆ ತೋರುತ್ತಿದ್ದವು.

೧೦॥-೧೧ ಗಂಟೆಯ ಸುಮಾರಿಗೆ ತಮ್ಮಣಾಚಾರಿಯ ಮನೆಯ ಪಡಸಾಲೆಯಲ್ಲಿ ದೀಪದ ಬೆಳಕು ಕಾಣಿಸತೊಡಗಿತು. ಬರಬರುತ್ತ ಆ ಬೆಳಕು ಢಾಳವಾಗಿ ಖಿಂಡಿಯಿಂದ ಹೊರಚೆಲ್ಲಿ ಒಳಗಿನ ಸರ್ವ ಚಲನವಲನವನ್ನು ಅವಲೋಕಿಸಲು ಅವಕಾಶಮಾಡಿಕೊಟ್ಟಿತು. ಬೇಟೆ ಹೊರಬಿದ್ದ ಸುಳಿವು ಹತ್ತಿದೊಡನೆ ಬೇಟೆಗಾರ ಸರ್ವಸನ್ನದ್ಧನಾಗಿ ಚೇತರಿಸಿಕೊಂಡು ಮೈತುಂಬ ಕಂಣುಳ್ಳವನಾಗಿ ನಿಲ್ಲುವಂತೆ ನಾವೂ ಜಾಗರೂಕತೆಯಿಂದ ಎದ್ದು ಕೋಣೆಯ ಬಾಗಿಲಿಗೆ ಬಂದು ನಿಂತೆವು. ರಾಧವ್ವ ಕೃಷ್ಣವ್ವ ಅತ್ತಿಂದಿತ್ತ ಅಡ್ಡಾಡುವ ಸ್ಪಷ್ಟ ನೋಟ ಕಂಣಿಗೆ ಬೀಳುತ್ತಿದೆ. ರಾಧವ್ವ ಹಳೆಯ ಕಾಲದ ೨ ಪಿಂಟಿನ ಜರ್ಮನ್ ಕಂದೀಲೊಂದನ್ನು ತಂದು ಪಡಸಾಲೆಯಲ್ಲಿಯ ಕಂಬದ ಬದಿಗೆ ಇರಿಸಿದಳು. ಕೃಷ್ಣವ್ವ ಟೊಂಕಮಟ ಎತ್ತರದ ಒಂದು ದೊಡ್ಡ ಕನ್ನಡಿಯನ್ನು ತಂದು ಅದೇ ಕಂಬಕ್ಕ ಹಚ್ಚಿ ದೀಪದ ಬೆಳಕು ಅದರ ಮೇಲೆ ಪ್ರಶಸ್ತವಾಗಿ ಬೀಳುವ ರೀತಿಯಲ್ಲಿ ಇರಿಸಿದಳು. ೪-೫ ನಿಮಿಷದ ಅವಧಿಯಲ್ಲಿ ೩-೪ ಭಾರವಾದ ಪೆಟ್ಟಿಗೆಗಳನ್ನು ಒಂದೊಂದಾಗಿ ತುಂದು ಕನ್ನಡಿಯ ಮುಂಭಾಗದಲ್ಲಿ ಇಡಲಾಯಿತು. ಉಸಿರು ಹಿಡಿದುಕೊಂಡು ಈ ನೋಟವನ್ನು ಅವಲೋಕಿಸುತ್ತಿದ್ದ ನಮಗೆ ಮುಂದಿನ ವೈಭವದ ಯಾವ ಕಲ್ಪನೆಯೂ ಸುಳಿಯಲಿಲ್ಲ. ಸದಾಶಿವನೂ ಈ ಪ್ರಾಸ್ತಾವಿಕತೆಗೆ ಹೊಸಬನಾದ ಕಾರಣ ನನ್ನಷ್ಟೇ ಆತುರತೆ

ಯಿಂದ ಇದೆಲ್ಲವನ್ನೂ ನೋಡುತ್ತಿರಬೇಕು. ನನ್ನ ಜೊತೆಯ ಆಸರೆಯಿದ್ದ ಕಾರಣ ಅವನಿಗೆ ಒಂದಿಷ್ಟು ಧೈರ್ಯವೂ ಬಂದಿರಬೇಕು.

ರಾಧವ್ವ–ಕೃಷ್ಣವ್ವ ಒಂದೊಂದಾಗಿ ಪೆಟ್ಟಿಗೆಯ ಕೀಲಿಗಳನ್ನು ತೆರೆದು ಅದರಲ್ಲಿಯ ಭಾರಿಯ ಪೀತಾಂಬರ, ವಸ್ತ್ರವಡವೆಗಳನ್ನು ಪ್ರದರ್ಶನಕ್ಕಿಡುವಂತೆ ಹೊರಗೆತೆಗೆದಿಟ್ಟರು. ಅವರಿಬ್ಬರೂ ತಮ್ಮೊಳಗೆ ಮಾತನಾಡುತ್ತಿರಬೇಕು. ನಗುವ ರೀತಿ ಹಾವ–ಭಾವ ನೋಡಿಯೇ ಅದನ್ನು ಕಲ್ಪಿಸಬೇಕೇ ವಿನಾ–ಕೇಳಿ ಬರದಷ್ಟು ಅಂತರವಿತ್ತು ನಮ್ಮಲ್ಲಿ. ಒಂಪ್ಯೆದು ನಿಮಿಷದ ಅವಧಿಯಲ್ಲಿ ಇಬ್ಬರೂ ಒಂದೊಂದು ಪೀತಾಂಬರವನ್ನು ಉಟ್ಟುಕೊಂಡು ಕನ್ನಡಿಯ ಮುಂದೆ ಕುಳಿತರು. ತಲೆಯ ಮೇಲೆ ಇನ್ನೂ ಸೆರಗು ಬಂದಿರಲಿಲ್ಲ ಅದು ಹೆಗಲ ಮೇಲೆಯೇ ನೇತಾಡುತ್ತಿತ್ತು. ಕೆಂಪುಬಣ್ಣದ ಒಂದೊಂದು ಕುಪ್ಪಸ ತೊಟ್ಟು ಕೊಂಡರು. ಕೂದಲಿಲ್ಲದ ಈ ಬೋಳು ತಲೆಯ ವಿಧವೆಯರಿಗೆ ಇಂಥ ಸಾಜ ಶೃಂಗಾರ ಹೇಗೆ ಒಪ್ಪಿರಬೇಕೆಂಬುದನ್ನು ಊಹಿಸಿಯೇ ಅನುಭವಿಸಬೇಕು. ಅನಿರ್ವಚನೀಯ ಅವರ್ಣನೀಯ ಸೌಂದರ್ಯವನ್ನು ಬಣ್ಣಿಸಲು ನನಗಂತೂ ಶಬ್ದಸಂಪತ್ತಿ ಸಾಲದು. ಕನ್ನಡಿಯಲ್ಲಿ ಏಕಕಾಲಕ್ಕೇ ಇಬ್ಬರೂ ನೋಡಿ ಕೊಂಡು, ಒಬ್ಬರ ಮುಖ ಒಬ್ಬರು ನೋಡಿ, ತಮ್ಮ ಬೆಡಗಿನ ತಾರೀಪಿಗೆ ಕಿಲ ಕಿಲನೆ ನಕ್ಕ ರೀತಿ ಮಾತ್ರ ನನಗೆ ಹೃದಯ ವಿದ್ರಾವಕವೆನ್ನಿಸಿತು; ಅಸಹ್ಯ ವೆನ್ನಿಸಿತು. ಇದು ಅಷ್ಟಕ್ಕೇ ನಿಲ್ಲಲಿಲ್ಲ. ವಂಕಿ, ಸರಿಗೆ, ಗೋಟು, ಪಾಟಲಿ, ಕೊರಳಲ್ಲಿಯ ಪದಕ, ನತ್ತು, ಬುಗಡಿ ಎಲ್ಲವೂ ಒಂದೊಂದಾಗಿ ಅವರ ಮೈ ಕೈ ಮೂಗು ಕಿವಿಗಳಲ್ಲಿ-ಸ್ವಸ್ಥಾನದಲ್ಲಿ ವಿರಾಜಮಾನವಾದವು. ರಾಧವ್ವ ಕಾಲಲ್ಲಿ ಭಾರವಾದ ರುಳಿಯ ಜೋಡನ್ನು ಹಾಕಿಕೊಂಡಳು. ಕೃಷ್ಣವ್ವ ಪಿಲ್ಲಿಗಳನ್ನು ಧರಿಸಿದಳು. ಮಧ್ಯಾಹ್ನದ ಹೊತ್ತಿಗೆ ಅಖಂಡ ಒಂದು ಇದ್ದಲಿಯ ಚೂರನ್ನೇ ತೇಯ್ದು ಕೊರೆದುಕೊಂಡ ಹಣೆಯ ಮೇಲಿನ ಅಂಗಾರವನ್ನು ಪೀತಾಂಬರದ ಸೆರಗಿನಿಂದ ಕರಕರನೆ ಒರಸಿ ಉದ್ದನೆಯ ಒಂದು ಕುಂಕುಮದೆಳೆಯನ್ನು ಇಟ್ಟುಕೊಂಡರು. ಇಷ್ಟು ಸಿದ್ಧತೆಯಾದ ಮೇಲೆ ಹೆಗಲ ಮೇಲೆ ಜೋಲುವ ಸೆರಗನ್ನು ಅದೆಷ್ಟು ವೈಯಾರದಿಂದ ತಲೆಯ ಮೇಲೆ ಎಳೆದುಕೊಂಡು ಮತ್ತೊಮ್ಮೆ ಕನ್ನಡಿಯಲ್ಲಿ ತಮ್ಮ ವಿಕೃತರೂಪವನ್ನು ನೋಡಿಕೊಂಡು ಗಟ್ಟಿ ಯಾಗಿ ನಕ್ಕರು. ಆ ನಗೆಯಲ್ಲಿ ನಿಜವಾದ ಆನಂದ–ಸಂತಸ ತುಂಬಿತ್ತೋ—

ಏನು ಅಕಾಲದಲ್ಲಿ ಮೃತ್ಯು ತಂದ ವೈಧವ್ಯವನ್ನು ಅಣಗಿಸುವ ಅಟ್ಟಹಾಸ ತುಂಬಿತ್ತೊ ತಿಳಿಯಬರದು. ಒಂದೆರಡು ಕ್ಷಣ ಮಾತ್ರ ಇಬ್ಬರೂ ನೆಟ್ಟನೋಟದಿಂದ ಒಬ್ಬರನ್ನೊಬ್ಬರು ನೋಡಿಕೊಂಡರು. ಅದೇನು ಭಾವನೆ ಏಕಕಾಲದಲ್ಲಿ ಮಿಂಚಿತೋ ಏನೋ–ಇಬ್ಬರೂ ಎದ್ದು ನಿಂತು ಚಿಕ್ಕಮಕ್ಕಳು ಫುಗಡಿಯಾಡುತ್ತಾರಲ್ಲ–ಆ ರೀತಿಯಲ್ಲಿ ಕೈಯಲ್ಲಿ ಕೈಯಿಕ್ಕಿ ರಂಗಣಗುಣಿತ ಹಾಕತೊಡಗಿದರು ಕಾಲಿನ ಅವರ ಒದೆತ ನನ್ನ ಎದೆಯಲ್ಲಿ–ಅವಲಕ್ಕಿಯನ್ನು ಕುಟ್ಟುವ ಹಾರಿಯ ಹೊಡೆತ ಬೀಳುವಂತೆ ಬಿರುಸಾಗಿ ಆಘಾತಿಸತೊಡಗಿತು. ಸದಾಶಿವ ನಾನು ಹಿಮವತ್ ಪಿಂಡದಂತೆ ನಿಂತು ಆ ಭೀಕರ ದೃಶ್ಯವನ್ನು ನೋಡುತ್ತಿದ್ದೆವು. ೨–೩ ನಿಮಿಷದಲ್ಲಿ ಈ ತಾಂಡವ ನೃತ್ಯದ ನಾಟ್ಯಮುಗಿದು ಆ ಎರಡೂ ರಾತ್ರಿ ಭೂತಗಳು ಒಂದರ ಹೆಗಲಮೇಲೆ ಇನ್ನೊಂದು ಒರಗಿ ತೋಳತೆಕ್ಕೆಯಲ್ಲಿ ಒಂದನ್ನೊಂದು ಹಿಡಿದುಕೊಂಡು–ಅಪ್ಪಿಕೊಂಡು ನಿಂತವು. ಮುಂದೆ ಇನ್ನಾವ ಭಯಂಕರ ಘಟನೆ ನಡೆಯಲಿತ್ತೋ ಯಾರು ಬಲ್ಲರು. ನಾನಂತೂ ಭಯದಿಂದ ತೊಯ್ದು ತಪ್ಪಡಿಯಾಗಿದ್ದೆ. ಇನ್ನೂ ನಿಂತಿದ್ದೆನಾದ ಕಾರಣ–ಅಷ್ಟು ಶಕ್ತಿ ಕಾಲಿನಲ್ಲಿದ್ದಿರಬೇಕೆಂದು ಈಗೆನಿಸುತ್ತಿದೆ. ಕಂಣಿಗೆ ಮಾತ್ರ ಚಕ್ರಬಂದಂತಾಗಿ-ಬವಳಿ ಬರತೊಡಗಿತು. ಆಸರೆಗೆಂದು ಬಾಗಿಲ ಚೌಕಟ್ಟು ಹಿಡಿದುಕೊಂಡು ಹೇಗೋ ಸವರಿಸಿಕೊಂಡೆ ! ಅನಿತರಲ್ಲಿ ಗಾಳಿಯ ಸುಳಿಯೊಂದು ಸುಳಿದ ಕಾರಣ ತಮಣಾಚಾರಿಯ ಮನೆಯ ಅಶ್ವತ್ಥವೃಕ್ಷದ ಒಣಗಿದೆಲೆಗಳು ಮರ್ಮರ ಸಪ್ಪಳ ಮಾಡಿದವು. ನೀರವತೆಯನ್ನು ಭೇದಿಸಿ ಬಂದ ಈ ಸದ್ದಿನಿಂದ ಎಚ್ಚೆತ್ತ ಓಣಿಯ ನಾಯಿಗಳು ಬೊಗಳತೊಡಗಿದವು. ಮೈಮೇಲೆ ಒಂದಿಷ್ಟು ಎಚ್ಚರ ಒಂದಂತಾಗಿ ನಾನು ಸದಾಶಿವ ಒಬ್ಬರ ಮುಖ ಒಬ್ಬರು ನೋಡಿದೆವು. ಇಬ್ಬರ ಕಂಣಲ್ಲಿಯೂ ಭೀತಿ, ಭಯಂಕರ ಸ್ವಪ್ನ ಕಂಡಿದ್ದ ನಂತರದ ಅಸಹನೀಯತೆ ಮೈದಾಳಿ ನಿಂತಂತಿತ್ತು.

ಮುಂದಿನ ದೃಶ್ಯವನ್ನು ನೋಡುವ ಶಕ್ತಿ ಉಡುಗಿದ ಕಾರಣ ನಾವಿಬ್ಬರೂ ಹಿಂದೆ ಸರಿದು ಹಾಸಿಗೆಯ ಮೇಲೆ ಹೋಗಿ ಕುಳಿತೆವು. ಇಂಥ ದೃಶ್ಯವನ್ನು ನೋಡುವ ಅಗ್ನಿದಿವ್ಯವನ್ನು ಮಾಡಿ ನಿದ್ರೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದೆವು. ಕೋಣೆಯಲ್ಲಿಯ ದೀಪವನ್ನು ಢಾಳವಾಗಿಸಿ ಒಂದೊಂದಾಗಿ ಬೀಡಿ ಎಳೆಯುತ್ತ ಮೂಕ ಪಶುಗಳಂತೆ ಕುಳಿತುಕೊಂಡೆವು. ಆ ನೋಟದ

ನೆನಪನ್ನು ಅಳಿಸುವದು ಅಸಾಧ್ಯವಾದರೂ ಒಂದಿಷ್ಟಾದರೂ ಮರೆಯಲೆಂದು ಮೌನಮುರಿದು ನಾನೆಂದೆ: "ಸದೂ, ಏನ ಭಯಂಕರ ಹೆಂಣಪಾ ಇವು. ಅನು ಭೋಗಿಸೂ ಸುಖಾ ದೇವರ ಕೊಡಲಿಲ್ಲಂತ ಅವನ ಮ್ಯಾಲ ಸೇಡು ತೀರಿಸಿ ಕೊಂಬಹವರ್ಗ್ಹಾಂಗ ರಾಕ್ಷಸೀ ಕೃತಿ ಮಾಡ್ತಾವ. ಈ ಜೀವಂತ ದೆವ್ವಿನ ಮನೀ ಸನೇಕ ಹಾಯೀ ಅಂದ್ರ ಜನಾ ಯಾಕ ಹಾದೀತು. ತಮಣಾಚಾರೀ ಸೀನ್ಯಾ ಮಾತ್ರ ಎಲ್ಲಾರೂ ದೆವ್ವ ಆಗಿ ಈ ಹೆಂಣಗೋಳ ಲೀಲಾ ನೋಡಿ ಸುಖಾ ಹಚಿಗೋತಿರಬೇಕು."

ನಾವು ಮಾತನಾಡುತ್ತಿರುವಂತೆ, ಅದೇ ವಿಷಯ ಗುಣಿಸುತ್ತಿರುವಂತೆ ಆ ತಂದ್ರಿಯಲ್ಲಿ ಜೋಲುತ್ತಿರುವಾಗಲೇ ಜೋರಾಗಿ ಗಾಳಿ ಬೀಸತೊಡಗಿತು. ಕಿಟಕಿ ಬಾಗಿಲು ಪಟಪಟನೆ ಬಡಿಯುತೊಡಗಿದವು. ಅಶ್ವತ್ಥವೃಕ್ಷ ವಿದಾರಕ ರೀತಿಯಲ್ಲಿ ನಗುವಂತೆ, ಗಾಳಿಯಲ್ಲಿ ಪರ್ಣಭರಿತ ಶಾಖೆಗಳನ್ನು ಅಲ್ಲಾಡಿಸಿ ಸದ್ದು ಮಾಡತೊಡಗಿತು.

ತಮಣಾಚಾರಿಯ ಮನೆಯ ಪಡಸಾಲೆಯ ಆ ಖಿಂಡಿಯಲ್ಲಿಯ ಬೆಳಕು ಮಾಯವಾಗಿ ಕತ್ತಲೆ ಮುಸುಕಿದಂತಾಗಿತ್ತು. ಬೆಳಗಿನ ಕೋಳಿ ಕೂಗುವವರೆಗೂ ನಾವು ಮಾತ್ರ ಜಾಗ್ರತರಾಗಿ ಬೀಡಿಗಳನ್ನು ಎಳೆಯುತ್ತ ಈ ಅತೃಪ್ತ ವಾಸನಾ ಭೂತಗಳ ಲೀಲಾ ವಿಲಾಸವನ್ನು ಕುರಿತು ಯೋಚಿಸುತ್ತ ಕುಳಿತುಕೊಂಡಿದ್ದೆವು.*

---

*ನನ್ನ ತಂದೆಯವರು ಬರೆದಿಟ್ಟ ಮೇಲಿನ ವೃತ್ತಾಂತವನ್ನು, ಮೊನ್ನೆ ಯಾವುದೊ ಹಳೆಯ ಕಾಗದ ಹುಡುಕುವಾಗ ಕೈಗೆ ದೊರೆತಿದ್ದಂತೆ ಪ್ರತಿಕೃತಿ ಮಾಡಿದ್ದೇನೆ. ಇದರಲ್ಲಿ ನನ್ನ ಕಥಾವಿವರಣೆಯ ಯಾವ ಅಂಗವೂ ಇಲ್ಲ.

—ಲೇ

# ಬಯಲ ಬಂಗಾರ

ಇಂದು ಶನಿವಾರ. ಬೆಳಗಿನ ಕಚೇರಿ ಮುಗಿಯುವದು ಅಪರಾಹ್ನ ೨ಕ್ಕೋ ೩ಕ್ಕೋ. ಸರಕಾರೀ ನಿಯಮದಂತೆ ಅದು ೮-೩೦ಕ್ಕೆ ಮೊದಲಾಗಿ ೧೨-೧೫ಕ್ಕೆ ಮುಗಿಯಬೇಕು. ಸಾಹೇಬರ ಶಿಸ್ತಿನ ರಾಜ್ಯದಲ್ಲಿ ಸಾಧಾರಣವಾಗಿ ಈ ನಿಯಮಕ್ಕೆ ಅಪವಾದ ಕ್ವಚಿತ್ತಾಗಿ ಬರುತ್ತಿತ್ತು. ಅವರ ನಿರ್ಗಮನದ ನಂತರದಲ್ಲಿ ಕಾಲು ಬುಡಮೇಲಾಗಿ ಬಿಟ್ಟವು. ನಮ್ಮ ಕರೀ ಸಾಹೇಬರು ಬರುವದೇ ೧೦ ಗಂಟೆಗೆ. ನಂತರ ಅವರು ಎಲ್ಲ ಕಾರಕೂನರ Arrears list—work sheet ತಪಾಸು ಮಾಡುವದು. ಇದೆಲ್ಲ ಹೆಚ್ಚಾಗಿ ಉಳಿದ ಕಾರಕೂನರ ತಲೆಗೆ ಶೇರಾ (Remarks) ಪಟ್ಟಿ ಬರುವದು ಸಣ್ಣ ಸಣ್ಣ ಚೀಟಿಯ ಮುಖಾಂತರ. ಪಿಂಚಣಿಗೆ ಬಂದ ಹೆಡ್‌ಕ್ಲಾರ್ಕ ಈ ಚೀಟಿಯ ಸರವನ್ನು ಹಿಡಿದುಕೊಂಡು ಹಂಸದೂತನಂತೆ—ಮೇಘದೂತನಂತೆ ಕಚೇರಿ ತುಂಬ ಅಲೆಯುವದು. ಕೆಲಸ ಮೊದಲಾಗಲು ೧೧-೧೧॥ ಗಂಟೆ ಆಗುವದು. ದಿನದ ಕೆಲಸ ಮುಗಿಯಲಿಕ್ಕೆ ೨॥-೩ ಆದರೆ ಹೆಚ್ಚೇನಲ್ಲ. ಆದರೆ ಇಂದು ರಾಮಣ್ಣ ೩-೩॥ ಆದರೂ ಮನೆಗೆ ಬರಲಿಲ್ಲ. ಸೀತಕ್ಕ—ಅವರ ಕುಟುಂಬ—ಬಾಗಿಲಲ್ಲಿ ನಿಂತು ದಾರಿ ಕಾಯ್ದು ಬೇಸತ್ತಳು. ಕಳೆದ ೨೦ ವರುಷ ತನ್ನ, ರಾಮಣ್ಣನ ಸಂಬಂಧ ಕೂಡಿದನಂತರ ಈ ಬಗೆಯ ದುರ್ದೈವೀ ಅನುಭವ ಬರುತ್ತಿರುವದು ಇದೇ ೨-೩ ವರುಷದಲ್ಲಿ. ಅವಳು ಈ ಮೂರು ವರುಷದಲ್ಲಿ ಶನಿವಾರವನ್ನು ಅದೆಷ್ಟೋ ಸಲ ಶಪಿಸಿದ್ದೇ ಶಪಿಸಿದ್ದು. ಆದರೆ ಅವಳ ಶಾಪವಾಣಿಗೆ ಕರಗದಷ್ಟು ಕಲ್ಲಾಗಿತ್ತು ಶನಿವಾರ. ಹುಡುಗರೆಲ್ಲ ಹನ್ನೊಂದಕ್ಕೇ ಶಾಲೆಯಿಂದ ಬಂದು ಊಟ ಮುಗಿಸಿಬಿಟ್ಟಿದ್ದವು. ೨ ಗಂಟೆಯ ಹೊತ್ತಿಗೆ ಸಣ್ಣ ಒಂದು ಪಾತೇಲಿಯಲ್ಲಿ ಒಂದಿಷ್ಟು ಅಕ್ಕಿ ಹಾಕಿ ಸೀತಕ್ಕ ಅನ್ನಕ್ಕಿಟ್ಟಿದ್ದಳು, ರಾಮಣ್ಣ ೨-೨॥ವರೆಗೆ ಬಂದರೆ ಬಿಸಿ ಅನ್ನವನ್ನಾದರೂ ಉಣಲೆಂದು. ಆದರೆ ಈಗ ಮಾಡಿಟ್ಟ ಆ ಅನ್ನವೂ ಆರಿ ಅಂಗಾರವಾಯಿತು. ಒಲೆಯ ಹಿಂಬದಿಗೆ ಬೆಕ್ಕು—ಮುಂಬದಿಗೆ ಅನತಿದೂರದಲ್ಲಿ ಸೀತಕ್ಕ ಅಡ್ಡಾಗಿ ಬೇಸತ್ತರು. ಬೆಕ್ಕು

"ವಿಶ್ರಾಂತಿ ಸಿಕ್ಕಿತೂ-ನೀವ್ ತಂಗೊಂಡ್ರೀ. ಮತ್ತ ತಂದೀರಲಾ ಕಾಗದ ಗಂಟಾಽ."

"ಮಾಡಿಕೊಂಡ ಹೇಣ್ತಿ, ಪೇನಶನ್ ತಗೊಂಬೂತನಕಾ ಕಚೇರಿ ಕಾಗದಾ ಬ್ರಹ್ಮಗಂಟ ಇದ್ಹಾಂಗ. ಬಿಡಲಿಕ್ಕೆ ಹ್ಯಾಂಗ ಬಂದೀತು?"

ಮಾತನಾಡುತ್ತ ಆಡುತ್ತ ಎಲೆಯಲ್ಲಿ ಹಾಕಿದ ಉಸುಕಿನಂತಹ ಅನ್ನವನ್ನು ಹಿಂಜಿ ಹಿಂಜಿ ಹಂಣು ಮಾಡಲೆತ್ನಿಸುತ್ತಿದ್ದ ರಾಮಂಣ. ಅವನ ಕಡೆಗೆ ನೋಡಿ ಸೀತಕ್ಕನಿಗೆ ಸಂಕಟವಾಗಿರಬೇಕು. ಈ ಅನ್ನಕ್ಕೆ ಇನ್ನೆರಡು ತೊಟ್ಟು "ಅಬಿಗ್ಯಾರ" (ಘೃತ) ವನ್ನು ಬಿಡುವ ತ್ರಾಣವೂ ಅವಳ ತುಪ್ಪದ ಚಿಕ್ಕ ಬಿಳ್ಳಿಯಲ್ಲಿ ಉಳಿದಿರಲಿಲ್ಲ. ಅನ್ನಶುದ್ಧಿಗೆಂದು ಬಿಟ್ಟ ಒಂದೇ ಒಂದು ಚಮಚೆಯ ತುಪ್ಪ-ಏನು ಅನ್ನಕ್ಕೆ ಹತ್ತಿತೋ, ಏನು ಚಿತ್ರಾಹುತಿ ಇಡುವಾಗ ದೇವರ ಪಾಲಾಯಿತೋ!

"ಅನ್ನಾ ಸರಸರಿ ಬೇಕಾರ. ಮೆತ್ತಗಿನ ಭಕ್ಕರಿ ಅವಽ. ಖುಮ್ಮಗ ಮಜ್ಜಿಗೀ ಅವ. ಮುರದ ಹಾಕೊಂಡು ತಿಂದರಽ ಹೊಟ್ಟಿಗರೇ ತಂಪ ಆದೀತು. ಅವಕ್ಕೇನ ಅಕ್ಕಿ ಅಂತಾರಽ. ಕಟಿಗೀ ಹೊಟ್ಟ ಕಲಿಸಿಧಾಂಗಽ ಆಗ್ತದ."

"ಇದ್ನೋಡು, ಇದಽ ಈಗ ಚಿತ್ರಾಹುತಿ ಇಟ್ಟು ಕೈಮುಗೀಲಿಲ್ಲಽ ಅದು ಅವಗ ಮುಟ್ಟಲೀ ಅಂತಽ. ಎಲ್ಲಾಽ ಅವನ ಪ್ರಸಾದಾ ಅಂತ ಸ್ವೀಕಾರ ಮಾಡೂದು. "ಅನ್ನಂ ಮಾ ನಿಂದ್ಯಾತ್" ಅನ್ನಕ್ಕ ಬಯ್ಯಬಾರದೂ ಅಂತ ಹೇಳ್ಯಾರ ಹಿರೇರು."

"ಹೇಳಿದ್ದಾರಾದೀತು, ಸಂಣಕ್ಕೀ ಅನ್ನಾ ಉಣೂ ಹಿರ್‍ಯಾರು. ಇಂಥಾ ರೇಶನ್ನದಾಗಿನ ಅಕ್ಕೀ ತಿಂದಿದ್ರ ಎಂದೋ ಶಾಪ ಕೊಟ್ಟು ಕಡೀಕಾಗ್ತಿದ್ರು. ಹೇಳಾವ್ರೇನು ಭೋಗಿಸಲಿಕ್ಕೆ ಬರೂಹಾಂಗಿಲ್ಲಾ. ಬಿಸೀ ಅನ್ನ ಇದ್ರ ಅಷ್ಟೇ ಒಂದಿಷ್ಟು ಸಮಾಧಾನಾ. ಇಂದ ಶನಿವಾರ ಬ್ಯಾರೇ. ರಾತ್ರೀ ಊಟ ಸುದ್ದೇ ಇಲ್ಲಾ."

"ಅದಕಽ ಮೂರ ನಾಕ ಘಂಟೇಕ್ಕ ಉಂಡಿತಪಾ ಅಂದ್ರ ನಿಶ್ಚಿಂತಿ ಆಧಾಂಗ. ರಾತ್ರೀ ಕಾಳಜೀ ತಪ್ಪಿತು. ಒಂದ ಧಾಲಿ ನೀರ ಕುಡಿದು ಶ್ರೀಹರೀ ಅಂತ ಹಾಸಿಗೀ ಹಿಡೀಲಿಕ್ಕೆ ಅಡ್ಡೀ ಇಲ್ಲಾ."

"ಇನ್ನ ನೀವ್ ರಾತ್ರೀ ಬರೋದು ಎಷ್ಟು ಹೊತ್ತೊ ಯಾರಿಗ್ಗೊತ್ತು. ತಿಂಗಳಖೈರ ಬ್ಯಾರೀ. ಲೆಕ್ಕಾ ಬರದು ಮುಗಸೂದು ಅಂದ್ರ ರಾತ್ರಿ ಹನ್ನೊಂದೇ ಹೊಡೆಯೂದು."

"ಛೇ, ಅದೇನಿಲ್ಲಾ, ನಾಳೆ ಹ್ಯಾಂಗೂ ಆಯಿತ್ವಾರ ಅದs. ಹೋಗಿ ಕೆಲಸಾ ಮಾಡಿದರಾತು. ಲಗೂನ ಒಂಬತ್ತಕ್ಕ ಬಂದ ಬಿಡತೇನಿ. ಆ ಶೇಡ ಜೀದೂ Income tax Return ಸೋಮವಾರs ಹೋಗಬೇಕು. ನಾಳೆ ಹೋಗಿ ಅಷ್ಟು ಮಾಡಿ ಕೊಟ್ಟ ಬಂದೇ ಅಂದ್ರ ಅವಗ ಒಂದ ಹತ್ತ ರುಪಾಯರ ಕೇಳಲಿಕ್ಕ ನೆಟ್ಟಗ."

"ಹಾದು, ಕೇಳೇ ಬಿಡ್ರಿ. ಧೋತರಾ ಹರದು ಚಿಂದಿ ಆಗ್ಯಾವ. ಒಂದ ಜೋಡ ತಗೊಂಡ ಬಂದ ಬಿಡ್ರಿ ನಾಳೇನs. ಉಳದ ಅರಿವೀ ಪಗಾರ ಆದ ಮ್ಯಾಲ ತರಲಿಕ್ಕ ಬಂದೀತು. ಇನ್ನೇನ ಕಾರ್ಡಿನ ಮ್ಯಾಲ ರೇಶನ್ನ ತರೂದು ಉಳಿದಿಲ್ಲಾ ಏನ ಇಲ್ಲಾ. ಸಾಮಾನು ಅಷ್ಟಕಷ್ಟ ಅದs. ಪೈಲಾದತನಕ ಹೋಗತದ ಹ್ಯಾಂಗಾರೇ."

"ನನ್ನ ಧೋತರೇನು, ನಡೀತಾಂವ ತಿಂಗಳೊಪ್ಪತ್ತು. ಮಾಧೂ ಚಂಣ ಹರದಾಂವ ಅಂತಿದ್ದಿಲ್ಲs. ಪಮ್ಮಿಗೂ ಒಂದು ಪರಕಾರ-ಪೋಲಕಾ ಅರೇ ಆಗಬೇಕು."

"ಅವೇನು ಈಗ ಹೊಸಾ ಅರಿವೀ ಹಾಕ್ಕೊಂಡು ಮಾಮುಲೀ ನಡ ಕೂದೂ ಅಷ್ಟರಾಗs ಅದs. ಅವರಗೇ ಮುಂದಿನ ತಿಂಗಳ ಕೊಲಿಸಿದರ ನಡೀತದ. ಪರೀಕ್ಷಾನೂ ಮುಗಿತೂ, ಮತ್ತ ಸಾಲಿನೂ ಬಂದ ಆಗೂದು ಇನ್ ಎಂಟ ದನಕ. ತಿಂಗಳೆರಡ ತಿಂಗಳಾ ಮನ್ಯಾಗs ಇರಾವ್ರು. ಅವರಗೇನ ಅರಿವೀದು ಅಂಥಾ ಜರೂರಿ ಇಲ್ಲಾ."

"ಎಂದ ಹುಡುಗೂರು ಕಾಣಬೇಕು ಹೊಸಾ ಅರಿವೀ. ಮುಂದಿನ ತಿಂಗಳಾ ವಿಮಾಕಂತು ತುಂಬಬೇಕು. ತಾಪತ್ರಯಕ್ಕೇನ ಮೂರ್ತ ತಗಸ ಬೇಕಾಗ್ತದs. ಅಪ್ಪಾಜಿ, ತಾs ಧೋತ್ರಾ ತಂಗೊಂಡಾ, ನಮ್ಮ ಅರಿವಿ ಹರದಿದ್ರೂ ಕಾಳಜೀ ಮಾಡ್ಬs—ಅಂತ ಹುಡುಗರ ಕಡಿಂದ ಶಬ್ದ ಬ್ಯಾಡಾ."

"ಶಬ್ದ ಕೊಡಲಿಕ್ಕೆ ನನ್ನ ಮಕ್ಕಳೇನ ಶ್ರೀಮಂತರ ಹುಡುಗೂರಲ್ಲಾ. ಹತ್ತ ದಿನದ ಕೂಸಿದ್ದಾಗಿನಿಂದೂ—ಹರಕ ತಟ್ಟಿನ ಮ್ಯಾಲ ಬೆಳದ ಧೊಡ್ಡೊ

ಆಗ್ಯಾವ. ತಿನ್ಲಿಕ್ಕ, ಉಳ್ಳಿಕ್ಕ, ಕೊಡದಿದ್ರೂ, ಬುದ್ಧೀ ಹಾಕೂವುಂದ, ಏನ ಜೀನತಾನಾ ಮಾಡಿಲ್ಲಾ ದೇವರು, ನನ್ನ ಮಕ್ಕಳಿಗೆ. ಅನ್ನಕ್ಕ ಹತ್ತಿದ ಮ್ಯಾಲ ಬೇಕಾರ ಚೈನೀ ಮಾಡವಲ್ಲರ‍್ಯಾಕ. ಪಮ್ಯಾಽ, ಕೈಗೆ ನೀರಿಟ್ಟೇನ ಕೂಸಽ. ಅಲ್ಲೀ ಡಬ್ಯಾಗ ಅಡಿಕಿ ಅದಽ ನೋಡು. ಒಂದ್ಡೋಳು ಕೊಡು ಅವರಿಗೇ."

" ನೀ ಊಟಾ ಬಗೀಹರಸು ಇನ್ನಽ. ಶನಿವಾರ ನನ್ನ ಹಾದೀ ನೋಡ ಬ್ಯಾಡಾ ಅಂತ ಎಷ್ಟು ಹೇಳಿದ್ರೂ ನೀ ಏನ ಕೇಳಬ್ಯಾಡಾ. ಸುಮ್ಮನಽ ಹಾದೀ ಕಾಯೂದು. ನೀ ಮೊದಲು ಉಂಡ್ರ ನಾ ಯಾಕಽ ಅಂತ ಕೇಳ್ತೇನು ? "

" ಅದೇನ ಅಸ್ಯಂ ತಗೀರಿ. ಉಣೂ ಹೆಂಗಸ್ರು ಉಣ್ಲಿ. ಹುಡುಗೂರ ಸುದ್ದೀ ನೀವ್ ಬಂದಮ್ಯಾಲಽ ಉಣತೀವಿ ಅಂತ ಹಟಾ ಹಿಡೀತಾವ. ನಾನೇ ಝುಂಬರಿಸಿ ಊಟಕ್ಕ ಹಾಕ್ತೇನಿ. "

ರಾಮಣ್ಣ ಆಪ್ರೋಷಣ ತೆಗೆದುಕೊಂಡು ಕೈತೊಳೆದುಕೊಳ್ಳಲು ಬಚ್ಚಲು ಮನೆಗೆ ನಡೆದ. ಸೀತಕ್ಕ ಒಂದು ಪತ್ರಾವಳಿಯಲ್ಲಿ ಎರಡು ತುಂಡುಮಾಡಿ ಒಂದು ತುಣುಕು ತೆಗೆದಿಟ್ಟು ಉಳಿದರ್ಧವನ್ನು ತನ್ನ ಹಸಿದೊಡಲಿಗೆ ಎಡೆ ಬಡಿಸಿಕೊಳ್ಳಲು ತೆಗೆದುಕೊಂಡು, ಅಲ್ಲೆ ಒಲೆಯ ಬದಿಗೆ ಊಟಕ್ಕೆ ಕುಳಿತು ಕೊಂಡಳು.

* * * *

ರಾಮಣ್ಣ ಫಾಯನಲ್ ಆದನಂತರ ಹೇಗೋ ಯಾರದೋ ವಶೀಲಿಯ ಪ್ರಭಾವದಿಂದ ರೆವಿನ್ಯೂ ಖಾತೆಯಲ್ಲಿ ೩೦–೫–೨–೫೫ರ ಗ್ರೇಡ ಗಾಡಿಯನ್ನು ಹಿಡಿದು ಹತ್ತಿ ಬಿಟ್ಟ. ಹಾಯರ ಪರೀಕ್ಷೆ ಆದರೂ ಮಾಮಲತ್ತಿಯ ಮಂಚ ಕಾಸನಕ್ಕೆ ದೂರದಿಂದಲೇ ಶರಣು ಹೊಡೆದು, ಖಜಾನೆಯ ಕಾರಖಾನೆಯಲ್ಲಿಯೇ ಉಳಿದುಕೊಂಡು ಬಿಟ್ಟ–ಖೊಟ್ಟಿ ನಾಣ್ಯ ಶಿಲ್ಕೀ ಬೀಳುವಂತೆ. ಮೊದಲಿನಿಂದಲೂ ದೇವಭೋಳೆ ಸ್ವಭಾವ. ಅಲ್ಲದೆ ಚಾಕರಿ ಹಚ್ಚಿ ಕೊಟ್ಟ ಪುಣ್ಯಾತ್ಮ ಇವನ ಕಿವಿಯಲ್ಲಿ " ಕೈ ಮೈ ಸಾಚಾ ಇಟ್ಟುಕೊಂಡಿರು " ಎಂಬ ಗಾಯಿತ್ರಿ ಬೇರೆ ನುಡಿದಿದ್ದ. ಅನ್ನದಾತನ ಅಮರವಾಣಿಗೆ ಎರಡು ಬಗೆಯುವದೇ ? ಇಲ್ಲದ ಉಸಾಬರಿಗೆ ಕೈ ಹಾಕಿ ಕೆಸರು ಮಾಡಿಕೊಳ್ಳುವ ಅಧಿಕ ಪ್ರಸಂಗಿ ಜಾತಿಗೂ ಅವನು ಮೊದಲಿನಿಂದಲೂ ದೂರೀ ! ಎರಡು ವರುಷಕ್ಕೊಮ್ಮೆ ಮಹಾಭಾಗ್ಯ ತೆರೆದಂತೆ ಬರುವ ಐದು ರೂಪಾಯಿಯ ಬಡತಿ ನಿಯಮಿತವಾಗಿ ಬಂದರೆ ಸಾಕೆಂಬ ಮಹಾ ಅಲ್ಪಸಂತುಷ್ಟಿ ಜೀವ. ಹಾಯರ

ಪರೀಕ್ಷೆಯನ್ನು ಉತ್ತಮ ರೀತಿಯಲ್ಲಿ ತೇರ್ಗಡೆ ಹೊಂದಿದರೂ ಬರುವ ಭಾಗ್ಯವನ್ನು ವಿನಮ್ರನಾಗಿ ಅಸ್ವೀಕಾರ ಮಾಡಿದ ಕಾರಣದಿಂದಾಗಿ ಅವನ ನೈತಿಕ ಮಟ್ಟವೇರಿದರೂ ಕೆಲಜನ ಅವನಿಗೆ " ಶ್ಯಾಮಳೂ ಭಾಯೀ " ಎಂದು ಅಂದರು; " ಕೈಲಾಗದವ " ನೆಂದರು ಆದರೆ ರಾಮಣ್ಣ ಯಾವ ಮಾತಿನಿಂದಲೂ ವಿಚಲಿತನಾಗದೆ ಇಪ್ಪತ್ತು ವರುಷ ಹಾಗೇ ನಡೆದುಕೊಂಡು ಬಂದಿದ್ದಾನೆ ಸಾಂಸಾರಿಕ ತಾಪತ್ರಯ, ಬೆಳೆಯುವ ಕುಟುಂಬ. ಅದರ ಪೋಷಣೆಯಲ್ಲಿ ಸವೆಸುವ ದೇಹವನ್ನು ಹೊತ್ತುಕೊಂಡು ೪೫ ವರುಷದ ಇನ್ನೂ ನಡುವಯಸ್ಸಿನ ದಿನವಿದ್ದರೂ–ಅವನ ಕೂದಲು ನರೆತುಕೊಂಡಿದೆ. ನಿಶ್ಚಿತ ಕಾಲಕ್ಕಿಂತ ಮುಂಚಿತವಾಗಿ ಎರಗಿ ವಾರ್ಧಕ್ಯ ಅವನ ಮೇಲೆ ತನ್ನ ಪ್ರಭಾವ ಬೀರಿದೆ.

ತನಗೆ ಬರುವ ವರಮಾನ–ಸಂಸಾರ ಯಜ್ಞದ ಯಾವ ಆಜ್ಯಾಹುತಿಗೂ ಸಾಕಾಗದೆಂದು ರಾಮಣ್ಣ ಖಾಸಗೀ ಕಂಪನಿಗಳಲ್ಲಿ–ದೊಡ್ಡ ಅಂಗಡಿಗಳಲ್ಲಿ ಲಾಭ-ಹಾನಿಯ ಲೆಕ್ಕಾ, Income tax ವಟ್ಟಿ ಸಿದ್ಧಪಡಿಸಿಕೊಟ್ಟು ಒಂದಿಷ್ಟು ದುಡ್ಡುಗಳಿಸುತ್ತಾನೆ. ಅವನ ಶ್ರಮಕ್ಕೆ ಪ್ರತಿಫಲವಾಗಿ ಆಗೀಗ ೧೦೦–೨೦೦ ರೂ. ಸಿಗುತ್ತವೆ ಮಕ್ಕಳ ಶಿಕ್ಷಣ, ಒಂದೇ ಒಂದು ಮುತ್ತಿನಂತಿರುವ ಮಗಳ ಲಗ್ನ ಇದೆಲ್ಲ ಆಗಬೇಕು. ತಿಂಗಳಿಗೆ ಕಟ್ಟಿಟ್ಟಂತೆ-ಎಣಿಸಿ ಬರುವ ಸಂಬಳ ಸಂಸಾರಕ್ಕೆ ಆಗಬೇಕು. ಕಚೇರಿ ಕೆಲಸದ ವ್ಯತಿರಿಕ್ತವಾಗಿ ಬರುವ ಅಲ್ಪಸ್ವಲ್ಪ ಹಣ ಮಕ್ಕಳ ಮಂಗಳಕ್ಕೆ ಮೀಸಲಾಗಬೇಕು. ಈ ಎರಡನೇ ಬಗೆಯ ಉತ್ಪನ್ನ ಕೂಡ— ಜಾಗತಿಕ ಮಹಾಯುದ್ಧ ಮುಗಿದಾಗಿನಿಂದ ಬರಲು ಮೊದಲಾದದ್ದು. ಇಂಥ ಬಿಡಿಗೆಲಸವನ್ನು ಅವನು ಡಾಣಾ ಡಂಗುರವಾಗಿ ಮಾಡುವಂತಿಲ್ಲ. ಕೆಲಸ ಮಾಡಿಸಿಕೊಳ್ಳುವವರು ಇವನ ಶ್ರಮಕ್ಕೆ ಇಂತಿಷ್ಟು ಪ್ರತಿಫಲಕೊಟ್ಟೆವೆಂದು ಲೆಕ್ಕದ ಕಾಕರಲಿಪಿಗೆ ಇಳಿಸುವಂತಿಲ್ಲ. ಎಲ್ಲವೂ ವಿಶ್ವಾಸದ ಮೇಲೆ ನಡೆಯಬೇಕು. ಈ " ಅಸಾಚಾ " ಕೆಲಸಕ್ಕೆ ಸರಕಾರ ಒಪ್ಪುವಂತಿಲ್ಲ.

ರಾಮಣ್ಣನಿಗೆ ನಾಲ್ಕು ಕೈ, ಕೊನೆಗೆ ದಿನಕ್ಕೆ ೨೪ ರ ಬದಲು ೩೬ ತಾಸು ಇರುತ್ತಿದ್ದ ಪಕ್ಷದಲ್ಲಿ, ಇನ್ನೂ ಒಂದಿಷ್ಟು ದುಡಿದು ಮಕ್ಕಳ ದಾರಿ ಸುಗಮವಾಗಲು ಬುತ್ತಿ ಈಡು ಮಾಡುವ ಹಂಬಲ ಅವನದು. ದುಡಿಯುವ ದಕ್ಕೆ ಹಿಂಜರಿಯುವ ಬಾಳಲ್ಲ ಅದು; ಸೋತೆನೆಂದು ಕೈಯೂರುವ ಕಾಯ

ವಲ್ಲ. ಈಗ ಇಷ್ಟು ದೇಹ ತೆಯ್ಸಿರೂ ಹೊರಡುವ ಗಂಧವೆಷ್ಟು ? ಯಾವ ಧೂಪಕ್ಕೂ ಸಾಕಾಗುವಂತಿಲ್ಲ. ತನಗೆ–ಮನೆಯವಳಿಗೆ ಮಕ್ಕಳಿಗೆ ಚೆಂದವಲ್ಲದಿದ್ದರೂ ಹೋಗಲಿ—ಮೈತುಂಬ ಗಟ್ಟಿಮುಟ್ಟಾದ ಅರಿವೆ ಅಂಚಡಿಯಿಲ್ಲ. ಸುಭಿಕ್ಷೆಯಿದ್ದಾಗ ಕಾಸು ಸಾಲುತ್ತಿರಲಿಲ್ಲ. ಈಗ ಬರುವ ಕಾಸು–ಮುಂಚಿನ ವರಮಾನದ ಮೂರುಪಟ್ಟಾದರೂ—ಏರಿದ ಬೆಲೆಯು ಕೂಡ ಸ್ಪೈಪೋಟಿ ಮಾಡುವ ತ್ರಾಣವಿಲ್ಲ. ಅದು ಅವನ ಯೋಗ್ಯತೆಯ ಹೊರಗಿನದು. ಇಬ್ಬರು ಮಕ್ಕಳ ಮುಂಜಿವೆಯನ್ನು ಊರಿನ ಛತ್ರಮಂದಿರದಲ್ಲಾಗುವ—ಸಾರ್ವಜನಿಕ ವ್ರತಬಂಧ ಸಮಾರಂಭದಲ್ಲಿ–ಸಮಾರೋಪಗೊಳಿಸಿದ. ಅದಕ್ಕೆ ನೆರೆಮನೆಯವರು, ಕಚೇರಿಯವರು ನಕ್ಕರು. ನಕ್ಕವರ ಹಲ್ಲು ಮಾತ್ರ ಕಂಡವು. ಒಂದೆರಡು ದಿನ ಅಷ್ಟು ಕೆಡುಕೆನಿಸಿಕೊಂಡ. ಆದರೆ ತನ್ನ ಕಾಲು ಹಾಸಿಗೆ ದಾಟಿ ಹೊರಗೆ ಬೀಳಲಿಲ್ಲವಲ್ಲವೆಂಬ ಸಾತ್ವಿಕ ಸಮಾಧಾನ ತಳೆದುಕೊಂಡು ಸುಮ್ಮನಿದ್ದುಬಿಟ್ಟ. ಇನ್ನು ಉಳಿದ ಒಬ್ಬ ಹುಡುಗನ ಮುಂಜಿವೆ, ಒಂದು ಮಗಳ ಲಗ್ನ ಆದರೆ ಗೆದ್ದ. ಅದಕ್ಕೇನೂ ಈಗ ಅವಸರವಿಲ್ಲ. ಹತ್ತೆಂಟು ವರುಷ ಹೋದರೂ ನಡೆಯುತ್ತದೆ. ಆದರೆ ಮಕ್ಕಳ ಶಿಕ್ಷಣದ ದಾರಿಯೇನು ? ತನ್ನ ಫಾಯನಲ್ಲಿಗೆ ಆಗ ಇನ್ನೂ ಬೆಲೆಯಿತ್ತು, ಈಗ ಬೀಎಕ್ಕೇ ದಿಕ್ಕಿಲ್ಲ. ಮಕ್ಕಳನ್ನು ಮುಂದಿನ ದಾರಿಗೆ ಹೇಗೆ ಹಚ್ಚುವದು ? ಮಾಧೂ ೧-೨ ವರುಷದಲ್ಲಿ ಮ್ಯಾಟ್ರಿಕ್ ಆಗುತ್ತಾನೆ. ಇಲ್ಲಿಯ ವರೆಗೂ ಅವನ ಫೀಗೂ–ಅವನ ಸ್ಕಾಲರಶಿಪ್ಪಿಗೂ ಗಂಟಿದೆ. ಮುಂದೆ ? ಕಾಲೇಜಿನಲ್ಲಿ free ship ಸಿಗುವದು ಸಾಧ್ಯವೇ ! ಅಷ್ಟು ವಶೀಲಿ ಒಂದು ಬೇಕಲ್ಲ ? ಮುಂಚಿನ ಇಂಗ್ಲೀಷ್ ಕಲೆಕ್ಟರ ಸಾಹೇಬರು ಇಂಥ ಹುಷಾರು ಹುಡುಗರಿದ್ದರೆ ಮುಂದೆ ತರುವ ಧೈರ್ಯ ಮಾಡುತ್ತಿದ್ದರು. ದೈವವಿದ್ದರೆ ಮಗ ಆಯ್. ಸಿ. ಎಸ್ಸೂ ಆಗ ಬಹುದಾಗಿತ್ತು. ಪೆರೀ ಸಾಹೇಬರಿದ್ದರೆ ಖಾತ್ರೀಯಾಗಿ ಮಗನ ನಶೀಬು ತೆಗೆಯುತ್ತಿತ್ತು. ಈ 'ರೇ' ರಾಜ್ಯದಲ್ಲಿದ್ದ ರಾಂಮಣ ಈಗ ಮಕ್ಕಳ ಕೈಯಲ್ಲಿ ತಿಂಗಳಿಗೊಮ್ಮೆಯಾದರೂ ಒಂದಾಣೆಯ ನಿಕೆಲ್ ನಾಣ್ಯವನ್ನೂ ಇಡಲು ಅಸಮರ್ಥನಾಗಿದ್ದ. ಆ ಮಕ್ಕಳ ಆಶೆ–ಆಕಾಂಕ್ಷೆ–ಹಸಿವು–ನೀರಡಿಕೆಯ ಅರಿವು ಅವನಿಗಿತ್ತು. ಅವನು ಮನಸ್ಸು ಮಾಡಿದ್ದರೆ—ಗಾಳಿಯ ಸುಳಿನೋಡಿ ತೂರಿಕೊಂಡಿದ್ದರೆ ಈ ದಾರಿದ್ರ್ಯ ತಪ್ಪುತ್ತಿತ್ತು. ಆದರೆ ನವಕರಿಗೆ ಸೇರುವ ಮುನ್ನ ಆಲಿಸಿದ "ಸಾಚಾ

ತನದ " ವಾಣಿ ಇನ್ನೂ ಕಿವಿಯಲ್ಲಿ ನಿನದಿಸುತ್ತಿತ್ತು. ಆ ಅನ್ನ ತೋರಿಸಿದ ಕೈಗೆ ಎರಡು ಬಗೆಯುವ ದ್ರೋಹ ಮಾಡುವಂತಿರಲಿಲ್ಲ. ಈ ದರಿದ್ರ ಜೀವನದ ಕತ್ತಲಲ್ಲೂ-ಆ ಸಾತ್ವಿಕ ಸಮಾಧಾನದ ಕಿರುದೀಪ ಮಿಣುಕುತ್ತಲಿತ್ತು. ರಾಮಣ್ಣನ ಜೀವನ, ಆ ಬೆಳಕಿನಲ್ಲಿ ನಿಧಾನವಾಗಿ ಸಾಗಿತ್ತು.

* * * *

ಈಗಂತೂ ಪರೀಕ್ಷೆ ಮುಗಿದು ಹುಡುಗರು ಮನೆಯಲ್ಲಿಯೇ ಇವೆ ಓದು-ಬರೆಹದ ತೊಂದರೆಯಿಲ್ಲ ಸಾಲೆಗೆ ಹೋಗುವ ಅವಸರವಿಲ್ಲ ಪರೀಕ್ಷೆಯ ಪರಿಣಾಮ ಹೊರಬೀಳಲು ಇನ್ನೂ ೮-೧೦ ದಿನದ ಅವಧಿ. ಅವರಿಗೆ ಅಲ್ಲಿಯವರೆಗೆ ಬೇರೆ ಉದ್ಯೋಗವೇನು ಬಂತು ? ೧೧ಕ್ಕೆ ಕಚೇರಿಗೆ ಹೋಗುವ ತಂದೆಯ ಕೂಡ ಊಟ ಮುಗಿಸಿ, ಬಿಸಿಲಿನ ತಾಪ ತಗ್ಗುವವರೆಗೂ ಮನೆಯಲ್ಲಿಯೇ ಆಡಿ ದಣಿಯುತ್ತಾರೆ ಸಂಜೆಗೆ ತಾಸೆರಡು ತಾಸು ಹೊರಗೆ ಹೋಗಿ ಬಂದರೆಂದರೆ ಆಯಿತು, ಅವರ ಕೆಲಸ. ಇಂದು ಓಣಿಯಲ್ಲಿಯ ೩-೪ ಹುಡುಗರೂ ಬಂದು ಇಲ್ಲೇ ಸೇರಿಕೊಂಡಿವೆ. ನಾಲ್ಕು ಹುಡುಗರು ಸೇರಿದವೆಂದರೆ ಅವರ ಮಾತಿನ ಮಥನದಿಂದ ತೇಲಿಬರುವ ವಿಷಯವೆಂದರೆ—ಸಿನೀಮಾ. ಈಗಂತೂ ಊರಲ್ಲಿ " ಸಂತ ಜ್ಞಾನೇಶ್ವರ " ಚಿತ್ರಪಟ ಹತ್ತಿದೆ. ಜನ ಹಿಂಡಾಗಿ ಹೋಗಿ ನೋಡಿ ಬಂದಿದ್ದಾರೆ. ಮತ್ತೆ ಮತ್ತೆ ಹೋಗುತ್ತಲಿದ್ದಾರೆ. ೫-೬ ಸಲ ನೋಡುವವರ ಗದ್ದಲ ಇನ್ನೂ ಕಡಿಮೆಯಾಗಿಲ್ಲ. ಕೊನೆಯ ವಾರ— ಅಂದರೆ ಚಿತ್ರದ ಅವಧಿ ಮುಗಿಯುವಾಗ— ಖಾಸ್ ಸವಲತ್ತೆಂದು ಶಾಲೆಯಹುಡುಗರಿಗೆ ಅರ್ಧ ತಿಕೀಟಿನ ಆಟವಿಡುವರೆಂದು ಸುದ್ದಿಯಿತ್ತು. ರಾಮಣ್ಣನ ಸಂತಾನಶ್ರೀ ಈ ಸುಯೋಗ ಲಭಿಸಿ ಬರಲೆಂದು ಹಾರೈಸುತ್ತಿತ್ತು. ಓಣಿಯ ಹುಡುಗರೆಲ್ಲ ಈ ಮೊದಲೇ ಚಿತ್ರಪಟ ನೋಡಿ ಬಂದು ಅದನ್ನು ವರ್ಣಿಸಿದಾಗ-ಮಾಧೂ ಶೀನ, ರಂಗ ಪಮ್ಮಿ (ರಾಮಣ್ಣನ ನಾಲ್ವರು ಮಕ್ಕಳು) ಇವರ ಬಾಯಲ್ಲೂ ನೀರು ಬಿಟ್ಟಿದ್ದವು. ಅವರು ತಡೆಯಲಾರದ ಆಸ್ಥೆಯಿಂದ ದಿನವೂ ತಪ್ಪದೆ ಹೋಗಿ ಚಿತ್ರಮಂದಿರದ ಹೊರಬದಿಗೆ ಹಚ್ಚಿದ ಚಿತ್ರಪಟದಲ್ಲಿನ ವಿವಿಧ ದೃಶ್ಯ ಕಂಡು ಆನಂದಿಸಿದ್ದರು. ಅರ್ಧ ತಿಕೀಟಿನ ಅವಕಾಶ ಕಲ್ಪಿಸಿ, ಅವರ ಸ್ವರ್ಗವನ್ನು ಭೂಮಿಗಿಳಿಯುವಂತೆ ಮಾಡಿದ ಥೇಟರ ಮಾಲಕನಿಗೆ ಅವರು ಹತ್ತು ಸಲ ಆಶೀರ್ವದಿಸಿದ್ದರು. ಮಾಧೂ ಹೇಳಿದ : "ನೋಡು ಗೋವಿಂದಾ, ರಿಝಲ್ಟ ಆತ ಅಂದ್ರs ಪೈಲಾ ನಂಬ್ರ ನನಗ ಕಟ್ಟಿಟ್ಟದ್ದs. ಹೆಡ್‌ಮಾಸ್ತರು

ಇಟ್ಟಾರಲಹಾಳ ಹತ್ತ ರೂಪಾಯಿ ಭಕ್ಷಿಸಾ ಅದು ಬಂತಂತಽ ತಿಳಿ. ಆಮ್ಯಾಲ ನೋಡು—ಒಮ್ಮೆ ಬಿಟ್ಟು ಎರಡು ಸಾರಿ ಆದ್ರೂನು ಸಿನೇಮಾ ನೋಡೂದಽ. ಮತ್ತ ನಮ್ಮ ಅವ್ವನ್ನೂ ಕರಕೊಂಡು ಹೋಗೂದದ. ದೇವರ ಸಿನೇಮಾ ಅದ ಅನಾಯಾಸವಾಗಿ. ”

“ ಹೂಂ ತಡದ ನಿಂದರತಾನ ಜ್ಞಾನೇಶ್ವರಾ, ನಿನಗ ಭೆಟ್ಟೀ ಕೊಡಲಿಕ್ಕೆ. ನಿನಗ ರಿಝಲ್ಟ ಇದ್ರ ಅವಗೂ ಅದ ಏನ ಅದರ ಕಾಳಜೀ ? ನೀ ಒಬ್ಬ ಚದರನ ಚಾರ ಅಣೇಕ್ಕ ಅವೇನ ಕಂಗಾಲಾಗಿ ನಿಂತಿಲ್ಲಾ. ಮಳ್ಳಽ ಇದಽ ಕಡೀವಾರ ಅಂತ. ಬೋರ್ಡ ಹಚ್ಚ್ಯಾರ ಗೊತ್ತದ ಇಲ್ಲೋ ? ನಿನ್ನ ರಿಝಲ್ಟ ಅದಽ ಇನಾ ೮–೧೦ ದಿನಾ ಮುಂದ ” ಎಂದು ಉತ್ತರಿಸಿದ ಗೋವಿಂದ. ಗೋವಿಂದ ನೆರಿಮನೆಯ ಹುಡುಗ “ ಬಿಡಲೇ, ಬೋರ್ಡ ಸುಮ್ಮನಽ ಹಚ್ಚತಾರತಿ ಮುಂದ ಬರ್ಲಿ ಅಂತ. “ ಕನಕ ತಾರಾ ” ಕ ನೋಡಲಿಲ್ಲ, ತಿಂಗಳಾನಗಟ್ಲೆ ನಡದ್ರೂ ಕಡೀ ಆಟಽ ಅಂತಿದ್ದಾ. ಈ ಸಿನೇಮಾ ಅಂತೂ ಸುರೂ ಆಗಿ ಇನ್ನೂ ಹದಿನೈದ ದಿನಾ ಸುದ್ದಾ ಆಗಿಲ್ಲಾ. ಇಷ್ಟ ಲಗೂ ಹೋಗೂದೂ ಶಕ್ಯನಽ ಇಲ್ಲಾ. ”

“ ಅದೇನಽ ಇರವಲ್ಲದ್ಯಾಕ. ನಾವ್ ಇಂದ ಹೋಗೂದು ಅಂತ ಠರಾಯಿಸಿಗೊಂಡು ಬಂದೀವಿ. ನೀ ಏನ ಬರಾವನೋ ಇಲ್ಲೋ ಹೇಳು. ”

“ ಶಕ್ಯ ಇಲ್ಲಪಾ. ನನ್ನ ಹತ್ತೀಲೇ ದುಡ್ಡಽ ದುಗಾಣೀ. ಮತ್ತ ನಾ ಒಬ್ಬನಽ ಹೋಗೂದಂತೂ ತೀರಾ ಅಶಕ್ಯ. ಶೀನಾ, ರಂಗಾ, ಪಮ್ಮಿ, ಅವ್ವಾ ಇಷ್ಟು ಮಂದಿ ನೋಡಾವರಿದ್ದಾರ. ”

ರಂಗ ನಡುವೆಯೇ ಬಾಯಿ ಹಾಕಿ ಹೇಳಿದ :

“ ಮಾದಣ್ಣಾ, ನೀ ಇಂದ ನೋಡಿಕೊಂಡು ಬಾ. ನಿನ್ನ ಇನಾಂ ಬಂದ ದಿನಾ ಮತ್ತ ನಾವೆಲ್ಲಾರೂ ಹೋಗೂಣಂತ. ಬೇಕಾರ ಪಮ್ಮಿನ ಕರಕೊಂಡು ಹೋಗು. ಅಕೀ ಕಾಣಿಸಲಿಕ್ಕೆ ಹ್ಯಾಂಗೂ ಗಿಡ್ಡ ಇದ್ದಾಳ. ತಿಕೀಟಿಲ್ಲದ ಸಾಗತದಽ.”

ಪಮ್ಮಿ ದೊಡ್ಡವರಂತೆ ಕೈತಿರುವಿ ಮುಖ ಮುಂದೆ ಮಾಡಿ ಹೇಳಿದಳು :

“ ಶ್ಯಾಽಽಣ್ಯಾ. ನನಗ ತಿಕೀಟ ಇಲ್ಲದನಽ ನಡೀತದಂತ. ಆವತ್ತ ಮೋಟರದಾಗ ಬರೂಮುಂದ ಅಪ್ಪಾ ನನಗ ಅರ್ಧಾ ತಿಕೀಟ ತಗೊಳ್ಳಿಲ್ಲೇನು ? ನಾ ಏನ ತಿಕೀಟ ಇಲ್ಲದ ಬರಾಕಿ ಅಲ್ಲಾ.”

" ನೋಡ ಮಾಧೂ, ರಂಗ ಹೇಳಿಧಾಂಗ ನೀ ಒಬ್ಬ ಬರಾಂವಿದ್ರ ನಾ ಚಾರ ಅಣೇ ಸಾಲಾ ಕೊಡತೇನಿ. ನಿನ್ನ ಇನಾಂ ಬಂದ ಮ್ಯಾಲ ಕೊಡೂ ಅಂತೀ."

" ಬ್ಯಾಡ ಮಾರಾಯಾ ನಿನ್ನ ಸಾಲಾ. ಕನಡ ಮಾಸ್ತರ ಏನ ಕಲಿಸಿದ್ರು ಮರತೇನು ಮತ್ತ ? ಸಾಲವನು ಕೊಂಬಾಗ ಹಾಲು ಬೋನುಂಡಂತೆ !"

"ಮಗಾ ಮಾಸ್ತರಾ. ಅಂದ ಸಾಲ್ಯಾಗ ಹೇಳಿದಾ, ಮತ್ತ ಸಂಜೀನ್ಯಾಗ ನಮ್ಮಪ್ಪನ ಕಡೆ ಬಂದ ರೇಶನ್‌ಕ ಹರಕತ್ ಆಗೇದ, ೧೦ ರೂ. ಕಡಾ ಕೊಡ್ರೀ ಅಂತ ೧೦ ರೂ. ಕೈಗಡಾ ಒಯ್ದಾ. ಅವನ ಮಾತ ಅವಗ ಮುಟ್ಟಿಸಬೇಕಂದ್ರ ಆಡಿದಂತೆ ಮಾಡದವನ–ಏನೋ ಯಾತಕ್ಲೇನೋ ಹೊಡೀ ಅಂತಾರಲಾ, ಹಾಂಗಮಾಡಬೇಕು–ಹೌದಲ್ಲೇನಲೇ ಬಿಂದ್ಯಾ."

" ಅವೇನೂ ಇರವಲ್ಲದ್ಯಾಕಪಾ. ನನಗ ಮಾತ್ರ ನಿನ್ನ ಸಿನೇಮಾನೂ ಬ್ಯಾಡಾ–ಸಾಲಾನೂ ಬ್ಯಾಡಾ " ಎಂದು ಮಾಧವ ನಿಶ್ಚಿತಾರ್ಥದಲ್ಲಿ ಹೇಳಿಬಿಟ್ಟ. ಕಿನ್ನರಿಗೆ ಓಗೊಡದ ಈ ಕೋಣನ ಮುಂದೆ ಏನು ಬಾರಿಸಿದರೂ ಅಷ್ಟೇ— ಅವನಿಗೆ ಹೇಳುತ್ತ ಕುಳಿತರೆ ಸಿನೇಮಾ ತಪ್ಪೀತೆಂದು ಆ ಹುಡುಗರು ಎದ್ದು ಹೊರಟು ಹೋದರು. ನಡುಮನೆಯಲ್ಲಿ ಹೂಬತ್ತಿ ಮಾಡುತ್ತ ಕುಳಿತ ಸೀತಕ್ಕ ತನ್ನ ಮಕ್ಕಳ ಬುದ್ಧಿವಂತಿಕೆಗೆ ಮೆಚ್ಚಿ—ದೇವರ ಕಟ್ಟೆಯ ಹತ್ತಿರ ಬಂದು–ದೀಪವನ್ನು ದೊಡ್ಡದಾಗಿ ಮಾಡಿ ಕೈ ಮುಗಿದಳು. ಅವಳ ತುಟಿಯಿಂದ ಏನೋ ಒಂದೆರಡು ಪಿಸುನುಡಿ ಹೊರಟಂತೆ ಆಯಿತು. ಅವಳ ಮಾತಿಗೆ ಸೈ ಗುಟ್ಟಿತೆನ್ನುವಂತೆ—ಜಂತಿಯ ಮೇಲಿನ ಹಲ್ಲಿ ಲೊಟ ಲೊಟ ಗುಟ್ಟಿತು.

* * * *

ನಿನ್ನೆಯೋ ಪರೀಕ್ಷೆಯ ಪರಿಣಾಮ ಹೊರಬಿದ್ದಿತ್ತು. ಮಾಧೂನಿಗೆ ೧೦ ರೂ. ಬಹುಮಾನ, ಪುಸ್ತಕಗಳ ಕಾಣಿಕೆ ಸಿಕ್ಕಿದ್ದವು. ಮನೆಯಲ್ಲಿ ಎಲ್ಲರಿಗೂ ಅದರಿಂದ ಹಿಡಿಸಲಾರದ ಹಿಗ್ಗು. ಬಡವರ ಮಕ್ಕಳಿಗೆ ಏನಿರದಿದ್ದರೂ– ಕೊನೆಗೆ ದೇವರು ಬುದ್ಧಿಯನ್ನು ಕೊಡುಗೈಯಿಂದ ದಾನ ಮಾಡಿದ್ದಾನಲ್ಲ ಎಂಬ ಅಭಿಮಾನ, ರಾಮಂಣ ಸೀತಕ್ಕನಿಗೆ. ವರುಷೆರಡು ವರುಷದಲ್ಲಿ ಮ್ಯಾಟ್ರಿಕ್ ಆದರೆ–ಮುಂದೆ ಕಾಲೇಜಿನ ಶಿಕ್ಷಣ ಹೇಗೆ ? ನವಕರಿಗೆ ಹಚ್ಚ

ಬೇಕೆಂದರೆ ಇನ್ನೂ ಚಿಕ್ಕವಯಸ್ಸು. ವರ ದೊರಕದೆ ಬೆಳೆದು ನಿಂತ ಮಗಳು-ಬುದ್ಧಿಯಿದ್ದೂ ಹೆಚ್ಚಿನ ಶಿಕ್ಷಣದ ಅನುವಿರದಿದ್ದ ಬಡವರ ಮಕ್ಕಳು-ಎರಡೂ ಒಂದೇ ತಾಯಿಯ ಅವಳಿ-ಜವಳಿ ಮಕ್ಕಳಂತೆ. ಈ ಚಿಂತೆ ಸೀತಕ್ಕ ರಾಮಣ್ಣ ಇಬ್ಬರನ್ನೂ ಕೊರೆಯುತ್ತಿತ್ತು. ಅದರ ಬಗ್ಗೆ ಎಷ್ಟು ಮಾತನಾಡಿದರೂ—ಉಪಾಯವೇನೂ ಇಬ್ಬರಿಗೂ ಹೊಳೆದಿರಲಿಲ್ಲ.

ಮೊನ್ನೆ ರಾಮಣ್ಣ ಕಚೇರಿಯಿಂದ ಮನೆಗೆ ಬರುವಾಗ-ಅವನ ಚಪ್ಪಲಿಯ ಉಂಗಷ್ಟ ಕಿತ್ತಿ ಹೆಬ್ಬಟ್ಟಿಗೆ ಒಂದಿಷ್ಟು ಪೆಟ್ಟು ತಗಲಿತ್ತು. ಆ ಗಾಯದಲ್ಲಿ ಮಣ್ಣು ಸೇರಿಕೊಂಡಿರಬೇಕು. ಬೊಟ್ಟು ಇಂದು ಒಂದಿಷ್ಟು ಊದಿಕೊಂಡು-ಅವನನ್ನು ಹೆಚ್ಚು ಅಡ್ಡಾಡದಂತೆ ಮಾಡಿತ್ತು. ಕಣಿಕಣಿಯೆನಿಸಿ, ಮೈಯೂ ಒಂದಿಷ್ಟು ಬೆಚ್ಚಗಾದಂತಿತ್ತು. ಕಣಕದ ಪೋಟೀಸುಹಾಕಿ ಕಟ್ಟಿಬಿಟ್ಟಿದ್ದ. ರವಿವಾರವಾದ ಕಾರಣ ಕಚೇರಿಯ ತೊಂದರೆ ಇರಲಿಲ್ಲ. ಮಧ್ಯಾಹ್ನ ಒಂದಿಷ್ಟು ಕಾಡೇ ಕುಡಿದು ಅವನು ಹಾಗೆಯೇ ನಡುಮನೆಯಲ್ಲಿ ಒಂದು ಬದಿಗೆ ಹೊತ್ತುಕೊಂಡು ಮಲಗಿಬಿಟ್ಟಿದ್ದ. ಅವನಿಗೆ ನಿದ್ದೆ ತಿಳಿದು ಎಚ್ಚರವಾದಾಗ ೨॥-೩ ಗಂಟೆಯ ಸಮಯವಿರಬಹುದು. ಸೀತಕ್ಕ ಅಲ್ಲೇ ಬಾಗಿಲಲ್ಲಿ ಕುಳಿತು ಹರಿದ ಅರಿವೆಗಳನ್ನು ಹೊಲಿಯುತ್ತಿದ್ದಳು. ರಾಮಣ್ಣ ಆಕಳಿಸಿ ಒಂದು ಬದಿಯಿಂದ ಇನ್ನೊಂದು ಬದಿಗಾಗಿ-"ಹುಡೂಗೂರ ಏನ ಹೊರಗ ಹೋಗ್ಯಾವೇನು ! ಸದ್ದs ಇಲ್ಲಾ" ಎಂದು ಕೇಳಿದ.

"ಎಲ್ಲಿ ಹೋಕ್ತಾವ ಬಿಸಲಾಗ. ಇಲ್ಲೆ ಪಡಸಾಲ್ಯಾಗ ಆಡಕೋತ ಕೂತಾವ. ಮಾಧೂನ ಪರೀಕ್ಷಾವ ಮಾತs ಮಾತ ಅವಕ."

"ಹೂಂ. ಇನಾ ೮ -೦ ದಿನಾ ಹುರುಪ ಇಳಿಯೂತನಕಾ ಅವಕೂ ಅಭಿಮಾನ ಅನಸೂ ಸಂಗತೀನs. ಕಚೇರ್ಯಾಗ ನಿನ್ನಿನ ಹಿಡದೂ ಗಂಟs ಬಿದ್ದಾರ. ಕಾಲೇಜದ ತಯಾರೀ ಮಾಡಿ ಇಡ್ರಿ ರಾಮಣ್ಣಾ ಅಂತ. ಇಂಥಾ ಹರಕ ಸ್ಥಿತಿಯಾಗ ಏನ ತಯಾರೀ ಮಾಡುದೂ ಅಂತ ಚಿಂತಿ ಹತ್ತೇದ ನನಗ."

"ಇನ್ನಾ ೨ ವರುಷ ಅದ. ಈಗsಯಾಕ ಅದರ ಚಿಂತೀ ಹುಟ್ಟಿಸೂ ದೇವರೇನ ಹುಲ್ಲ ಮೇಯುಸೂ ಹಾಂಗ ಇಲ್ಲಾ."

"ಇದ್ದs ಪರಿಸ್ಥಿತಿ ನಾಳಿಗಿರತsದಂತ ಯಾತರ ಮ್ಯಾಲಿಂದ? ಕೇಳೀದ್ಯೋ ಇಲ್ಲೋ. ಬಂಗಾಲದಾಗ ಜನಾ ಕೂಳ ಖೊಬ್ಬರ್ಯಾಗಿ ಹುಲ್ಲಾ, ತೊಪ್ಪಲ

ಮ್ಯಾಲ ಬದಕಬೇಕಂತ ಧಡಪಡಸತಾರಂತಽ. ಇಂದ ಬಂಗಾಲಾತು ನಾಳೆ ಇಲ್ಲಿನೂ ಅಂಥಾ ಪ್ರಸಂಗ ಬಂದರಽ ಏನ ಗತೀ ಅಂತ.”

“ದೇವರಽ ಗತಿ ! ಈಗಿನ ರೇಶನ ಕಾಳ ತಿಂದ ಬದಕೇವಲ್ಲಾ ಹಂಗಽ. ಅಂಥಾ ಪ್ರಸಂಗ ಬಂದರ ತಲೀ ಕೊಟ್ಟರಾತು.”

“ಕೊಟ್ಟ ತಲೀ ಉಳದರ ಸಾಕು ಏನ ಪೂರ್ವಜನ್ಮದ ಕರ್ಮೋ, ಯಾರ ಪಾಪೋ. ಈ ಮಕ್ಕಳೂ ಮರೀ ಸುದ್ಧಾ ಅದಕ ಬಲೀ ಆಗಬೇಕಾಗೇದ.”

“ಯಾರದೋ ಪಾಪಾ ಯಾರ ಸುತ್ತೋ ! ನಾವೇನ ಅಂಥಾ ಪಾಪದ ಕೆಲಸ ಮಾಡಿಲ್ಲಾ ಅದರ ಅರಿಷ್ಟ ಒಡಿಯೂ ಕಾಳಜೀನೂ ಬ್ಯಾಡಾ.”

ಮಾತು ಹೀಗೆಯೇ ಸಾಗಿತ್ತು. ರಾಮಣ್ಣನಿಗೆ ಕಾಲು ನೋವಿನ ವ್ಯಥೆ; ಮಾನಸಿಕ ಚಿಂತೆ. ಅರ್ಧ ಪ್ರಜ್ಞೆ; ಅರ್ಧ ನಿದ್ರೆ. ಆಗೀಗ ಹೂಂ ಎನ್ನುತ್ತಿದ್ದ. ನಿದ್ರೆ ತೂಕಡಿಸಿ ಎಚ್ಚರಾದಾಗ ಗಂಡನಿಗೆ ತನ್ನ ಮಾತಿನಿಂದ ಎಚ್ಚರವಾಗಬಾರದೆಂದು ಸೀತಕ್ಕ ಹೊಲಿಗೆಯ ಕೆಲಸದಲ್ಲಿ ಮಾತನಾಡದೆ ಮಗ್ನಳಾಗಿ ಕುಳಿತಳು.

ಮಕ್ಕಳು ಪಡಸಾಲೆಯ ಮೂಲೆಯಲ್ಲಿ ಕುಳಿತು ಮಾತನಾಡುತ್ತಿದ್ದವು. ಅವರು ಇಳಿದನಿಯಲ್ಲಿ ಮಾತನಾಡುತ್ತಿದ್ದಾಗ ಅವರ ಮಾತು ಒಳಗಿನವರಿಗೆ, ಒಳಗೆ ಸೀತಕ್ಕ ರಾಮಣ್ಣ ಆಡುವ ಮಾತು ಇವರಿಗೆ ಅಷ್ಟು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ. ಇದೀಗ ಒಂದು ಕಡೆಯ ಮಾತು ತೀರ ನಿಂತು ಹೋದ ಕಾರಣ ಹೊರಗೆ ಮಕ್ಕಳು ಎಷ್ಟೇ ಇಳಿದನಿಯಲ್ಲಿ ಮಾತನಾಡುತ್ತಿದ್ದರೂ-ಅದು ಒಳಗಿನವರಿಗೆ ಕೇಳಿ ಬರುವಂತಿತ್ತು. ಮಕ್ಕಳಿಗೆ ಗುಪ್ತವಾಗಿ ಏನೂ ಮಾತನಾಡುವದಿರುವದಿಲ್ಲ. ಎಲ್ಲವೂ ರಾಜರೋಷಾಗಿ-ಡಾಣಾ ಡಂಗುರವಾಗಿ ಸಾಗಿತ್ತು. ಇಷ್ಟು ಹೊತ್ತು ಅವರು ಆಮಾತು ಈಮಾತು ಆಡಿ ಮುಗಿಸಿ, ಓ ಲಕ್ಷ್ಮಣಾಽ ಅನ್ನುತ್ತ ತಿರುಗಿ ಸಿನೇಮಾದ ಸುದ್ದಿಗೇನೇ ಬಂದು ನಿಂತಂತೆ ಕಂಡಿತು. ರಂಗ ಮಾಧೂನಿಗೆ ಕೇಳುತ್ತಿದ್ದ : “ಮಾದಣ್ಣಾ, ನೀ ಅಂದ ಒಪಿಗೊಂಡೀ. ೧೦ ರೂ. ಇನಾಂ ಬಂದಽದ. ಇಂದ ನಮ್ಮ ಎಲ್ಲಾರನೂ ಸಿನೇಮಾಕ್ಕ ಕರಕೊಂಡು ಹೋಗಲಿಕ್ಕೇಬೇಕು. ಅವ್ವನ್ನ ನಾ ಒಪ್ಪಸ್ತೇನಿ. ರಾಮಂಣಗ ಹ್ಯಾಂಗೂ ಕಚೇರಿ ಸೂಟಿ ಅದಽ. ಅವನೂ ಏನ ಹೊರಗಹೋಗೂದಿಲ್ಲಾ. ಸಂಜೀ ಊಟದ ಅವಸರನೂ ಇಲ್ಲಾ. ಇಂದಽ ಹೋಗಿ ಬಂದ ಬಿಡೂಣು.”

" ರಂಗಾ, ನನ್ನ ಕರಾರರ ಏನ ಇತ್ತು? ಅರ್ಧಾ ತಿಕೀಟಿನ ಸವಲತ್ತ ಇದ್ರನs ಹೋಗೂದೂ ಅಂತs. ಈಗ ಅದೆಲ್ಲದs "

" ಆಗ ನಿನಗ ಬರೇ ೧೦ ರೂ. ಇನಾಂ ಬಂದ್ರs ಅಂತಿತ್ತು. ಈಗ ಮುಂದಿನ ಎತ್ತೇದ ಪುಸ್ತಕ ಸುದ್ದಾ ಇನಾಂ ಆಗಿ ಸಿಕ್ಕ್ಯಾವ. ದುಪ್ಪಟ್ಟ ಲಾಭ ಆಗೇದ. ಅಂದಮ್ಯಾಲ ಯಾಕ ಈ ಹಿಂಗಾಲಪುಟಿಗಿ? "

" ರಂಗಾ, ನಿನಗ ಬೇಕಾರ ನಾ ರೊಕ್ಕಾ ಕೊಡತೇನಿ. ನೀ ಒಬ್ಬನ ಹೋಗಿ ಬೇಕಾರ ಬಾ. ನಿನ್ನ ಕರಕೊಂಡು ಹೋಗೂದೇನು, ನೀನs ನೋಡಿ ಬರೂದೇನು ಎಲ್ಲಾ ಒಂದನs. "

" ಮತ್ತ ಅವತ್ತ ನೀ ಹೋದೇನಪಾ ನಾ ಹೇಳಿದಾಗ. ನಿನ್ನ ಕಡಿಂದ ನಾ ಯಾಕ ಸಾಲಾ ತಗೋಳ್ಲಿ. ನಿನಗ ಮುಟ್ಟಸೂದರೇ ಎಲ್ಲಿಂದs. "

" ನಮ್ಮ ರಂಗಂಣ ಮರಿ. ಹ್ಯಾಂಗ ಶ್ಯಾಣ್ಯಾ ಇದ್ದಾನ. ನನಗ ಇನಾಂ ಕೊಡೂ ಮುಂದ ಹೆಡ್‌ಮಾಸ್ತರ ಏನ ಹೇಳಿದ್ರು ಗೊತ್ತದs ಏನು? ' ಈ ಹತ್ತ ರೂಪಾಯಿ–ಹ್ಯಾಂಗ ಉಪಯೋಗ ಮಾಡಿದೀ ಅನೂದ್ರ ಮ್ಯಾಲ ಒಂದು ನಿಬಂಧ ಬರಕೊಂಡು ಬಾ. ಶಾಲೆ ಸುರೂ ಆಗೂ ಮುಂದ' ಅಂತ. ಸಿನೇಮಾಕ್ಕ ಉಪಯೋಗಿಸ್ದೆ ಅಂದ್ರ ಛಂದ ಕಾಣಸ್ತದs? "

" ಇಂಥಾ ಛಲೋ ಸಿನೇಮಾ ನೋಡೂದೇನ ಕೆಟ್ಟಕೆಲಸs. ಅದರಾಗೂ ಎಷ್ಟೋ ಕಲಿಯೂದ ಅದs ಅಂತ. ಮತ್ತ ನಿನ್ನ ಮನಿಸಿನ್ಯಾಗ ಹ್ಯಾಂಗ ಅದ— ಅದನ್ನರೇ ಒಡೆದ ಹೇಳು."

ಪಡಸಾಲೆಯ ಬಾಗಿಲು ಮೂಲೆಯಲ್ಲಿ–ಹಳೆಯ ಕೃಷ್ಣಾಜಿನದಂತೆ ಹುಚ್ಚುಚ್ಚು ಮುಖಮಾಡಿಕೊಂಡು, ಉಂಗುಂಟ–ಮೇಲಿನ ಪಟ್ಟಿ–ಕಳಗಿನ ಅಟ್ಟೆ ಹರಿದ–ತಂದೆಯ ಚಪ್ಪಲಿಯ ಕಡೆಗೆ ತೋರಿಸುತ್ತ ಮಾಧೂ ಹೇಳಿದ.

" ಇದ್ನೋಡು ರಂಗಾ, ನಾ ಹೇಳಬಾರದಂತ ಮಾಡಿದ್ದೆ. ಆದ್ರ ನಿನಗೆ ಹೇಳ್ದೇನs ಸಮಾಧಾನ ಆಗೂ ಹಾಂಗಿಲ್ಲ. ಅಲ್ಲದs ನಿನಗೆ ಸಿನೇಮಾದ ಹುಚ್ಚು ಬಿಡಾಂಗ ಇಲ್ಲಾ. ಅದಕs ಹೇಳಿಬಿಡತೇನಿ. ಅಲ್ಲೆನೋಡು. ಅಪ್ಪನ ಚಪ್ಪಲಿ ಹರದ ಚೂರ ಆಗ್ಯಾವ. ಮತ್ತ ಮನ್ನೇ ಕಾಲಾಗ ಶಿಕ್ಕು ಅವಗ ಎಂಥಾ ಪೆಟ್ಟ ಹತ್ತೇದ. ಇನಾ ಏಳ್ಲಿಕ್ಕೂ ಬರೂ ಹಾಂಗಿಲ್ಲ. ಪಗಾರಾದ ಕೂಡ್ಲೇ ಹೊಲಿಸಿಕೋ ಅಂದ್ರ ಅವೇನ ಚಪ್ಪಲಿ ಹೊಲಿಸಿಕೊಂಡನ? ಅವ್ವ

ಎಷ್ಟ ಹೇಳಿದ್ರೂ ಕೇಳ್ಳನ್ನs, ನನಗ, ನಿನಗ, ಪಮ್ಮಿಗೆ ಅರಿವೀ ಹೊಲಿಸಿ ತಂದಾ. ನಾವೇನ ಅರಿವೀ ಹರದಾಂವ ಅಂತ ಅಂದಿದ್ವೇ? ಅವಗ ಕಾಣಿಸ್ತೂ; ತರ ಬೇಕಂತ ಅನಿಸ್ತ್ಯು. ಅವನ ಚಪ್ಪಲಿ ಹರದದ್ದು ನಮಗ ಕಾಣಸಬ್ಯಾಡ್ಡs; ಧೋತ್ರಾ ಹರದದ್ದು ತಿಳೀಬಾರ್ದs? ಅವಗ ಅನಿಸಿದ್ರೂ ತಂದುಕೊಡಾವ್ರು ಯಾರಿದ್ದರಪಾ?"

"ಅಂದ್ರ ನಾವೇನ ಮಾಡಬೇಕಂತೀ ಅದಕ್ಕs?"

"ಅದನ್ನs ಹೇಳಿತೀನಿ. ಹೋದ ವರ್ಷ ನಿನಗ ಜಡ್ಡ ಆಗಿ ತಿಂಗಳಾನ ಗಟ್ಲೆ ಹಾಸಿಗಿ ಹಿಡದಿದ್ದಿ. ರಾತ್ರೀ ಧೋ ಧೋ ಅಂತ ಮಳೀ ಸುರಿತಿದ್ರೂ–ಕತ್ಲ್ಯಾಗs ಹೋಗಿ–ಡಾಕ್ಟರನ ಕರಕೊಂಡು ಬಂದು ತೋರಿಸಿದಾ. ಅಪ್ಪಾ ಬೆಳ್ಳಬೆಳತಕಾ–ನಿನ್ನ ಹಾಸಿಗೆ ಹತ್ತೀಲ್ಲೇ ಕೂಡತಿದ್ದಾ. ಊಟಾ ಉಡಿಗಿ ಇಲ್ಲದ್ದs ನಿನ್ನ ಜಪ್ಪಿಸಿದಾ. ಆಗೇನ ಯಾರರೇ ಅಪ್ಪಗ ಹೇಳಿದ್ರs ನೀ ಹಾಂಗ ಮಾಡ ಅಂತ? ಅವಗs ಮಾಡಬೇಕಂತ ಅನಿಸಿ ಮಾಡಿದನೋ ಇಲ್ಲೋ. ಈಗ ನನಗ ಅನಸತದ–ಅಪ್ಪನ ಕಾಲ ಅಳತೀವು ಒಂಜೋಡ ಚಪ್ಪಲೀ ತರ ಬೇಕು. ಅವನ ಟೊಪ್ಪಿಗೀನೂ ಹರದ ಚೂರ ಆಗೇದ. ಒಂದು ಟೊಪ್ಪಿಗೀನೂ ತರಬೇಕು. ೮–೯ ರೂ. ಹೀಂಗ ಖರ್ಚ ಆಗ್ತಾವ. ಇನಾಂಕೊಟ್ಟಿದ್ದರ–ಉಪಯೋಗ ಛಲೋ ಕೆಲಸಕ್ಕ ಆಗ್ತದ. ಹೀಂಗ ಮಾಡಿದರ ನೋಡು—ನನಗಂತೂ ಸಮಾಧಾನ ಆಗ್ತದ."

೧೪–೧೫ ವರುಷದ ಹುಡುಗ ಮಾಧೂ. ವಯಸ್ಸಿನ ಮಾನದಿಂದ ಬುದ್ಧಿ, ಹೆಚ್ಚಿನ ತಿಳುವಳಿಕೆ ಬೆಳೆದದ್ದು ಅವನಲ್ಲಿ. ಈ ಮಾತನ್ನು ಅವನು ಯಾರಿಗೂ ಹೇಳದೆ–ಸ್ವಯಂಪ್ರೇರಣೆಯಿಂದ ಮಾಡಬೇಕೆಂದು ಗುಣಿಸಿಕೊಂಡಿದ್ದ ಮನಸ್ಸಿನಲ್ಲಿ. ಆ ಮಾತು–ವಿಚಾರ ಈಗ ಹೊರಬಿತ್ತು. ರಂಗ, ಶೀನ, ಪಮ್ಮಿ ಈ ಯೋಜನೆಗೆ ಒಪ್ಪಿದಂತೆ ಮೌನ ಸಮ್ಮತಿ ಬಂತು. ಸಂತ ಜ್ಞಾನೇಶ್ವರನ ಭವಿಷ್ಯದಲ್ಲಿ ಇವರಿಗೆ ದರ್ಶನಕೊಡುವ ಲಿಖಿತವಿರಲಿಲ್ಲವೆಂದು ಕಾಣುತ್ತದೆ.

ನಡುಮನೆಯ ಬಾಗಿಲಲ್ಲಿ ಕುಳಿತು ಹರಿದ ಸೀರೆಗೆ ಹೊಲಿಗೆಯ ಬಂಧನದ ಸೇತುವೆ ಕಟ್ಟುತ್ತಿದ್ದ ಸೀತಕ್ಕ ಮಗನ ಮಾತಿಗೆ ಮರುಳಾಗಿ–ಬುದ್ಧಿಗೆ ಬೆರಗಾಗಿ, ಹಾಗೇ ಕೇಳುತ್ತ ಕುಳಿತಿದ್ದವಳು–ಮಾತು ಮುಗಿದಾಗ— ಮುಖ

ವೆತ್ತಿ ಮಲಗಿದ ಗಂಡನ ಕಡೆಗೆ ನೋಡಿದಳು. ಯಾವಾಗಲೋ ನಿದ್ದೆ ತಿಳಿದೆದ್ದು—ಮಗನ ಮಾತು ಕೇಳುತ್ತ ಆಹ್ಲಾದ ರಾಮಣ್ಣನ ನೋಟವನ್ನು ಇವಳ ನೋಟ ಸಂಧಿಸಿದಾಗ—ಅಲ್ಲಿ ಯಾರಿಗೆ ಏನು ಕಂಡಿತೋ ದೇವರೇ ಬಲ್ಲ. ರಾಮಣ್ಣನ ಕಣ್ಣಿನಿಂದ ನೀರು ಮಾತ್ರ ದಳದಳವಾಗಿ ಹರಿಯುತ್ತಿತ್ತು. ಅದನ್ನು ಸೀತಕ್ಕ ಕಂಡಳು. ರಾಮಣ್ಣನ ಬಾಷ್ಪಪೂರಿತಲೋಚನಕ್ಕೆ ಸೀತಕ್ಕನ ಮುಖ ಗೋಚರಿಸಿತೋ ಇಲ್ಲವೋ ತಿಳಿಯದು.*

---

* ಗಂಡು ಸಂತಾನ 'ಬಯಲ ಬಂಗಾರ'ವಂತೆ! ಹೆಣ್ಣಿನ ಪರಾಧೀನತೆಯಾಗಲಿ, ತೆರೆ-ಮರೆಯಾಗಲಿ ಗಂಡಿಗೆ ಕಾರಣವಿಲ್ಲವೆಂದೇ ಇರಬೇಕು.

—ಸಂ.

# ಶೇಷಪ್ರಶ್ನೆ

‘ಶತಾಯುಷೀಭವ’ ಎನ್ನುವ ಆಶೀರ್ವಚನದಲ್ಲಿ ಸತ್ಯಾಂಶಕ್ಕಿಂತ ಸದಿಚ್ಛೆಯ ಅಂಶ ಹೆಚ್ಚಾಗಿರಬೇಕು. ಜೀವದಾನದ ತಾರಕ ಶಕ್ತಿಯನ್ನು ಕಳೆದುಕೊಂಡರೂ—ಚಿರಂತನವಾದ ಅಮರ ವಾಕ್ಯವದು ಅದರಷ್ಟೇ ಅಮರವಾದ—ಆದರೆ ಸತ್ಯಾಂಶರಹಿತವಾದ ಇನ್ನೊಂದು ವಿಷಯವೆಂದರೆ ರೇಲ್ವೆ ಟಾಯಿಮ್ ಟೇಬಲ್ಲು. ಶತಾಯುಷ್ಯದ ಆಶೀರ್ವಾದವನ್ನು ನಂಬಿ ಬದುಕಲೆತ್ನಿಸುವದೂ—ರೇಲ್ವೆ ವೇಳಾಪತ್ರಿಕೆಯನ್ನು ನಂಬಿ ಗಾಡಿಯ ದಾರಿ ಕಾಯುವದೂ ಒಂದೇ ಗೋತ್ರಕ್ಕೆ ಹೊಂದಿಕೊಂಡಂಥ ಮಾತುಗಳು. ರಾಯಚೂರಿನ ಕಡೆಗೆ ಹೋಗುವ ಮುಂಬೈ–ಮದ್ರಾಸ ಎಕ್ಸಪ್ರೆಸ್ ನಮ್ಮೂರ ನಿಲ್ದಾಣಕ್ಕೆ ಬರುವ ನಿಯತ ವೇಳೆ ರಾತ್ರಿಯ ಎಂಟು ಗಂಟೆ. ಆದರೆ ಇಂದು ೧೦ ಹೊಡೆದರೂ ಅದರ ಪತ್ತೆ ಇಲ್ಲ. ಪ್ಲಾಟಫಾರ್ಮಿನ ಮೇಲೆ ಶತಪಥ–ಸಹಸ್ರಪಥ ಮಾಡಿದೆ. ೪ ಸಲ ಬೆಲ್ಲ ಮಿಶ್ರಿತ ಕರೇ ನೀರು “ಚಾಯ್” ಕುಡಿದೆ. ಮಧುಬಿಂದುವಿನ ೨ ಪಾಕೀಟು ಹಾರಿಹೋದವು. ಏನು ಮಾಡಿದರೂ ನನ್ನ ತಪಶ್ಚರ್ಯಕ್ಕೆ ಫಲ ಸಿಗುವ ದಾರಿ ಕಾಣಲಿಲ್ಲ. ಕೊನೆಗೆ ಬೇಸತ್ತು ನನ್ನ ಹಾಸಿಗೆ–ಸಾಮಾನು ಇಟ್ಟ ಸ್ಥಳದಲ್ಲಿ—ನನ್ನ ತಂಗಿ–ತಾಯಿ ಕುಳಿತಿದ್ದ ಗಿಡದ ಕೆಳಗೆ ಬಂದು ಒಂದು ಹಾಸಿಗೆಯ ಸುರುಳಿಯ ಮೇಲೆ ಸ್ಥಾನಾಪನ್ನನಾದೆ.

ಕೊನೆಗೆ ಹತ್ತೂ ಮುಕ್ಕಾಲು ಗಂಟೆಗೆ–ಹಿಂದಿನ ನಿಲ್ದಾಣದಿಂದ ಗಾಡಿ ಬಿಟ್ ಆದ ಮೊದಲನೇ ಘಂಟಾನಾದ ಗಾಳಿಯಲ್ಲಿ ದುಮುದುಮಿಸಿತು. ಜೀವದಲ್ಲಿ ಜೀವ ಬಂದಂತಾಯಿತು. ಎದ್ದು ನಿಂತು ಸಿಗ್ನಲ್ ಕಂಬದ ಕಡೆಗೆ ಕೃತಜ್ಞತೆಯ ನೋಟ ಬೀರಿ–ಕೈಮುಗಿದರೆ ಅವಲಕ್ಷಣವಾದೀತೆಂದು ಮನಸ್ಸಿನಲ್ಲಿಯೇ, ಆಗಮಿಸಲಿರುವ ನನ್ನ ಭಾಗದ ದೇವರಿಗೆ–ಗಾಡಿಗೆ–ದಂಡವತ್ ಪ್ರಣಾಮವೆಸಗಿದೆ.

ಸಣ್ಣಸಣ್ಣ ನಿಲ್ದಾಣದಲ್ಲಿ ನಿಲ್ಲದೆ ಧಾವಿಸುವ ಈ ಗಾಡಿಯ ಗೊಡವೆಯನ್ನು ಬಿಟ್ಟ ಪ್ಯಾಸಿಂಜರ ಗಾಡಿಯ ಭಕ್ತಾವಳಿ, ಅಖಂಡ ಪ್ಲಾಟಫಾರ್ಮಿನ

ತುಂಬ ಮಲಗಿ ನಿದ್ರೆ ಹೋಗಿತ್ತು. ಕೃಷ್ಣಪಕ್ಷದ ತ್ರಯೋದಶಿ ಅಥವಾ ಚತುರ್ದಶಿಯ ದಿನವಿರಬಹುದು. ನಿಬಿಡ ಅಂಧಕಾರ. Solax Brand ಪೆಟ್ರೋಮ್ಯಾಕ್ಸ್‌ಗಳು ಮುಖಮಾರ್ಜನವಿಲ್ಲದೆ ಮಲಿನ ಕನ್ನಡಿಗಳ ಮೂಲಕ ಅಂಧುಕಪ್ರಕಾಶ ಬೀರುತ್ತಿದ್ದವು. ಭಯ್ಯಾನ ಚಹದಂಗಡಿಯ ಮುಂದೆ ನಾಲ್ಕೈದು ಜನ ಪೋಲಿಸಿನವರು ಅಚ್ಚ ಕರಿಯ ಡಗ್ಲಾ ಧರಿಸಿ–ಒಂದು ಕೈಯಲ್ಲಿ ಸೋಟಾ–ಇನ್ನೊಂದು ಕೈಯಲ್ಲಿ ಚಹದ ಲೋಟಾ ಹಿಡಿದುಕೊಂಡು ಹರಟೆ ಹೊಡೆಯುತ್ತ ಚಹ ಕುಡಿಯುತ್ತ ನಿಂತಿದ್ದರು. ನಿಲ್ದಾಣದ ಸುತ್ತಲೂ ಹರವಿಕೊಂಡ ಅಡವಿಯಿಂದ ನರಿಗಳ ಅಪಸ್ವರ ಕರ್ಕಶವಾಗಿ ಕೇಳಿಬರುತ್ತಿತ್ತು.

ಸರಿಯಾಗಿ ೧೧–೩೦ ಕ್ಕೆ ದೇವದೂತನಂತೆ ಗಾಡಿ ನಿಲ್ದಾಣದಲ್ಲಿ ಪ್ರವೇಶಿಸಿತು. ಪೋರ್ಟರನು ನಿತ್ಯನಿಯಮದಂತೆ ನಿಧಾನವಾದ ದನಿಯೊಳಿದು "ಜಯ–ಪರಾಕ:" ಹೇಳುವಂತೆ—ಗಾಡಿಗೆ ನಿಲ್ದಾಣದ ಹೆಸರು ಹೇಳಿದ. ಆತಿಥ್ಯವನ್ನು ನಿರಾಕರಿಸಿ–ಭಿರಭಿರನೆ ನಡೆದು ಹೋದ ದುರ್ವಾಸನಂತೆ ಒಂದೊಂದೇ ಡಬ್ಬಿಗಳು ಪೋರ್ಟರನನ್ನು ಅವಮಾನಿಸುವಂತೆ ಮಾಡಿ ಮುಂದೆ ಹೋದವು.

ನನ್ನದು ಇಂಟರ ತರಗತಿ. ಪುಣ್ಯವಶಾತ್ ನಾವು ಕುಳಿತಸ್ಥಳದಲ್ಲಿಯೇ ಇಂಟರಿನ ಒಂದು ಡಬ್ಬಿ ನಿಂತಿತು. ಒಳಗೆ ಯಾರ ಸುಳಿವೂ ಇರಲಿಲ್ಲ. ಸಣ್ಣ ಡಬ್ಬಿ. ಅದರಲ್ಲಿ ಈಗ ನಾವೇ ಮೂವರು ಪ್ರವಾಸಿಕರು. ಹಮಾಲ ಎಲ್ಲ ಸಾಮಾನುಗಳನ್ನು ವ್ಯವಸ್ಥಿತವಾಗಿ ಇರಿಸಿ ತನ್ನ ಕೂಲಿಯನ್ನು ಪಡೆದುಕೊಂಡು ಹೋದ. ಮಲಗಲಿಕ್ಕೂ ಬೇಕಾದಷ್ಟು ಸ್ಥಳ. ನಮ್ಮ ಸಾಮಾನುಗಳೆಲ್ಲ ಮೇಲಿನ ಹಂತಿನಲ್ಲಿದ್ದವು. ಒಂದು ಬದಿಗೆ ನನ್ನ ತಂಗಿ–ತಾಯಿ ಕುಳಿತರು. ಇನ್ನೊಂದು ಬದಿಗೆ ನಾನು ಕುಳಿತೆ. ಗಾಳಿ ಹೆಚ್ಚಾಗಿ ಬೀಸಿಬರುತ್ತಿದ್ದ ಕಾರಣ–ಕಿಟಕಿಗಳನ್ನು ಮುಚ್ಚಿ ವಿದ್ಯುತ್ ಬೀಸಣಿಕೆ ಸುರುವುಮಾಡಿದೆ. ಕೋಟನ್ನು ತೆಗೆದು ಅಲ್ಲಿಯೇ ಮೊಳೆಗೆ ತಗಲಿಹಾಕಿದೆ. ಒಂದು "ಮಧುಬಿಂದು" ವನ್ನು ಹಚ್ಚಿ–ಇನ್ನೇನು ಯಾರ–ಯಾವ ತೊಂದರೆ ಇಲ್ಲವೆನ್ನುವ ನಿಃಶಂಕೆಯಿಂದ ಕುಳಿತುಕೊಂಡೆ. ಕೆಲನಿಮಿಷದ ಮೌನವನ್ನು ಭೇದಿಸಿ ನನ್ನ ತಾಯಿ ಕೇಳಿದರು: "ಸೀನಾ, ಸಾಮಾನ ಎಲ್ಲಾ ಬಂಧಾಂಗಾತs. ಕಣ್ಣಾಗ ಬಟ್ಟ ಚುಚ್ಚಿದರೂ ಕಾಣಸದಂಥಾ ರಾತ್ರಿ. ಏನ ಅಪರಾತ್ರಿಗೆ ಬಂತು ಗಾಡೀ

ತಿರಗಣೀ ತಂಬಿಗಿ—ಫರಾಳದ ಡಬ್ಬಿ- ನಿನ್ನ ಕೈಚೀಲಾ ಎಲ್ಲಾ ಬಂದೂವೋ ಇಲ್ಲೋ ! ಕತ್ಲ್ಯಾಗ ಒಂದ ಹೋದರೂ ಪತ್ತೆಹತ್ತಧಾಂಗಿಲ್ಲ."

"ಎಷ್ಟು ಸಾಮಾನ ನಮ್ಮೂ. ಒಟ್ಟ ಆರ ಡಾಗಾs. ಎಲ್ಲಾ ಎಣಿಸಿ ಕೊಂಡ ಮ್ಯಾಲs ಹಮಾಲೀ ಕೊಟ್ಟೆ. ಕತ್ಲಿ ಮಾತ್ರ ಕಿರ್‍ರs ಅಂತsದ. ಖಿಡಿಕ್ಯಾಗಿಂದ ಘುದ್ದಾ ಹಣೀಕಿ ಹಾಕೂ ಸೋಯು ಇಲ್ಲಾ. ಇಂದೇನ ತಿಥಿಯೋ ಏನೋ "

"ಅದ್ಯಾಕ— ನಿನ್ನೆ ಇಲ್ಲ ಮೊನ್ನೆ ಏಕಾದಶೀ. ಇಂದ ತ್ರಯೋದಶಿ. ಅಮಾಸಿ ಏನ ಧೂರ ಅದsನ? ಮಾಲಾ ನೀ ಮಲಕೋ ತಾಯೀ. ಹನ್ನೆರಡಾತ ಕಾಣಸ್ತದ. ಸರಿರಾತ್ರಿ. ಯಾಕ ಹೀಂಗ ಕೂಡತೀದಿ. ಅನಾಯಾಸ ಜಾಗs ಅದ. ಗಡದ್ದ ಮಲಕೊಂಡೇಳು. "

ನನ್ನ ತಂಗಿಗೆ ಮಲಗಿಕೊಳ್ಳಲು ಅಣಿ ಮಾಡಿಕೊಟ್ಟು ನಮ್ಮ ತಾಯಿ ಸೀಟಿನ ಒಂದು ಅಂಚಿಗೆ ಸರಿದು ಕುಳಿತರು.

"ಅವ್ವಾs ನೀನೂ ಇಕಡೆ ಅಡ್ಡಾಗು. ಹತ್ತಿದಷ್ಟು ನಿದ್ದಿಹತ್ತ್ಯ. ಸಾ ಏನ ಮಲಗಾಂವ ಅಲ್ಲಾ ಏನಲ್ಲಾ. ಓದಕೋತ ಕೂಡ್ತೀನಿ. ನನ್ನ ನಿದ್ದೀನೂ ಹಾರಿ ಧಾಂಗ ಆತು. "

ಆಯಾಸ–ಜಾಗರಣೆಯಮೂಲಕ ನನ್ನ ತಾಯಿಯ ಕಣ್ಣು ಭಾರ ವಾದಂತೆ ಕಂಡುಬಂದವು. ಅವರಿಗೂ ನಿದ್ದೆಯ ಗುಂಗು. ನಾನು ಕುಳಿತ ಸೀಟಿನ ಮೇಲೆ ಅವರು ಒರಗಿದರು. ಅವರು ತೆರವು ಮಾಡಿದ ಸ್ಥಳದಲ್ಲಿ ನನ್ನ ತಂಗಿಯ ಕಾಲದೆಶೆಗೆ ನಾನು ಕುಳಿತುಕೊಂಡೆ.

ತಾಯಿ ಅರ್ಧಪ್ರಜ್ಞೆ-ಅರ್ಧ ನಿದ್ರೆಯಲ್ಲಿ ಏನೇನೋ ಮಾತನಾಡು ತ್ತಿದ್ದರು. ಮನೆಯಲ್ಲಿಯ ಮಕ್ಕಳಿಗೆ ಅನ್ನ ನೀರಿನ ವ್ಯವಸ್ಥೆ, ದನ-ಕರಗಳ ಹೈನುಹಾಲಿನ ವಿಚಾರ–ಇವರಿಗೆ (ನನ್ನ ತಂದೆಯವರಿಗೆ) ಇದೆಲ್ಲ ಭಾರವನ್ನು ತೂಗಿಸಿಕೊಂಡು ಹೋಗುವ ತ್ರಾಸು–ಅಲ್ಲಿ ಹೈದ್ರಾಬಾದಿನಲ್ಲಿ ಬೇನೆಯಿಂದ ಬಳಲುತ್ತಿದ್ದ ಅಳಿಯ–ಅವನಿಗಾಗಿ ಕೊರಗುತ್ತಿರುವ ತಂಗಿ–ಮಾತಿನಲ್ಲಿ ಏಕ ಸೂತ್ರತೆ ಇರಲಿಲ್ಲ. ಎಲ್ಲ ವೈಚಾರಿಕ ಗೊಂದಲ. ನಿದ್ರೆಯ ಹಿಡಿತ ಸಡಲಿದಾಗ ಮಾತು; ಮತ್ತೆ ಮೌನ. ಪ್ರತ್ಯುತ್ತರದ ಆಶೆಯಿಲ್ಲದೆ ಆಡುವ ಮಾತುಗಳು ಅವು. ೧೫–೨೦ ನಿಮಿಷದ ಅವಧಿಯಲ್ಲಿ ಅದು ಸಂಪೂರ್ಣವಾಗಿ ನಿಂತಿತು. ನನ್ನ

ತಂಗಿಗೆ ನಿದ್ರೆಯ ಗುಂಗೋ-ಆಯಾಸವೋ-ಚಿಂತೆಯೋ ಏನೋ ಅವಳೂ ತೀರ ಸ್ತಬ್ಧಳಾಗಿ ಮಲಗಿದ್ದಳು.

ರಾತ್ರಿಯ ಒಂದು ಗಂಟೆಯಾಗುತ್ತ ಬಂದಿತ್ತು. ಹೊರಗೆ ಕಿರ್ರೆಂಬ ಕತ್ತಲು. ಆ ಕಾರ್ತಮವನ್ನು ಭೇದಿಸಿ ಧಾವಿಸುತ್ತಿರುವ ಗಾಡಿಯ ಅಂತರಂಗ ದಲ್ಲಿ—ಈ ಡಬ್ಬಿಯ ಒಳಬದಿಗೆ ನಾವು ಮೂವರು ದಾರಿಕಾರರು. ನನ್ನ ಜೊತೆಯ ಇಬ್ಬರ ಸುಷುಪ್ತಿಗೆ ಯಾರ-ಯಾವ ಚಿಂತನೆಯು ಸದ್ಯಕ್ಕಂತೂ ಇಲ್ಲ. ಆ ನಿಶ್ಚಲ ದೀಪ, ಭ್ರಮಿಸುವ ವಿದ್ಯುತ್ ಬೀಸಣಿಗೆ, ಅನಿಶ್ಚಿತನಾದ ನಾನು ಈ ಮೂವರೇ ಅಲ್ಲಿ ಜಾಗರ ಸ್ಥಿತಿಯಲ್ಲಿ ಉಪಸ್ಥಿತರು.

ನನಗೆ ನಿದ್ರೆಬರುವ ಸಂಭವವೇ ಇರಲಿಲ್ಲ. ನಾಲ್ಕೈದು ಸಲ- ಕರೀ ನೀರು ಚಹಕುಡಿದದ್ದರಿಂದ ನಿದ್ದೆ ಮಾಯವಾಗಿತ್ತು. ಮೇಲಾಗಿ-ಇವರನ್ನು ಜೋಕೆಯಾಗಿ ನೋಡಿಕೊಂಡು ಹೋಗುವ ಭಾರವೊಂದು. ಬೆಳ್ಳಂ ಬೆಳಗೂ ಜಾಗರಣೆ ಮಾಡದೆ ಗತಿಯಿರಲಿಲ್ಲ. ನಾನೂ ಮಲಗಿದೆ, ಗಾಡಿನಿಂತ ನಿಲ್ದಾಣ ದಲ್ಲಿ ಮತ್ತೆಯಾರಾದರೂ ನುಗ್ಗಿದರೆ ಏನುಗತಿ ? ಎಷ್ಟೇ ಸ್ಥಳ ಇಂಬು ಇದ್ದರೂ ಬೇರೆಯವರು ಅದರ ಉಪಭೋಗದಲ್ಲಿ ಪಾಲುಗಾರರಾಗ ಕೂಡದೆಂಬ ಸ್ವಾರ್ಥ ಭಾವವೊಂದು ಇಣುಕುತ್ತಿತ್ತು. ಇಂಥ ಭಯಾನಕ ರಾತ್ರಿಯಲ್ಲಿ ಒಂಟಿಯಾಗಿ ಪ್ರವಾಸ ಮಾಡುತ್ತಿದ್ದರೆ ಜೊತೆಯ ಸಹ-ಪ್ರವಾಸಿಗಳ ಅಗತ್ಯವೆನಿಸಬಹು ದಾಗಿತ್ತು.

ಈಗ ಇದ್ದವರು ಮೂವರು. ಒಬ್ಬರಿಗೊಬ್ಬರ ಜೊತೆಯಿದೆ. ಬೇರೆ ಸಹವಾಸಿಗರ ಅವಶ್ಯಕತೆ ಅಷ್ಟೇನು ರುಚಿಸಲೂ ಇಲ್ಲ- ಬೇಕೆನಿಸಲೂ ಇಲ್ಲ. ಮುಂದಿನ ನಿಲ್ದಾಣದಲ್ಲಿ ಬೇರೆ ಯಾರಾದರೂ ಬಂದರೆ—ಬರಲಿ-ಕುಳಿತು ಕೊಂಡಾರು ಆಚೆಯ ಬದಿಯ ಕಂಪಾರ್ಟಮೆಂಟಿನಲ್ಲಿ ಅದರಿಂದ ನನ ಗಾಗುವ ತೊಂದರೆ ಅಷ್ಟರಲ್ಲಿಯೇ ಇದೆ.

ನನ್ನ ಈ ನಿರ್ಧಾರದಲ್ಲಿ ನಿಶ್ಚಿಂತತೆ ಇತ್ತೆಂದು ಮಾತ್ರ ಧೈರ್ಯವಾಗಿ ಹೇಳಲಾರೆ. ಹೃದಯಕುಹರದಲ್ಲಿ ಎಲ್ಲಿಯೋ-ಏನೋ ಅಳುಕಿದಂತಾಗು ತ್ತಿತ್ತು. ನಾಮಮಾತ್ರಕ್ಕೆ ನನ್ನ ಜೊತೆಗಿದ್ದವರೆನಿಸಿದ, ನಿದ್ರೆಯ ಮಡಲಿನಲ್ಲಿ ನಿಶ್ಚಿಂತರಾಗಿ ಪವಡಿಸಿದ-ನನ್ನ ತಾಯಿ-ತಂಗಿ ಜೊತೆಗಿದ್ದರೂ ಇಲ್ಲದಂತಿದ್ದರು. ಅವರ ಜಗತ್ತೇ ಬೇರೆ. ನನ್ನದೇ ಬೇರೆ. ನನ್ನ ಈ ಜಾಗೃತ ಸ್ಥಿತಿ- ಏಕಾಕಿ

ಎಂಬ ಭಾವನೆ ಮೊದಮೊದಲು ಸುಖಾವಹವೆನಿಸಿದರೂ ಕ್ರಮಶಃ ಅಸ ಹನೀಯವಾಗ ತೊಡಗಿತು. ಅಸಹನೀಯತೆ ಕಿಂಚಿತ್ ಭಯಕ್ಕೆ ಎಡೆಮಾಡಿ ಕೊಡುತ್ತ–ಕೆಲ ಅವಧಿಯಲ್ಲಿ ನನ್ನನ್ನು ಸಂಪೂರ್ಣವಾಗಿ ಆವರಿಸಿದಂತಾ ಯಿತು. ಇದರಿಂದ ಬಿಡುಗಡೆ ಪಡೆಯಬಯಸಿ—ಕೈಚೀಲದಲ್ಲಿ ತುರುಕಿದ ಯಾವುದೋ ಒಂದು ಪುಸ್ತಕವನ್ನು ಓದಲು ತೆಗೆದೆ. ಕೈಗೆ ಬಂದ ಪುಸ್ತಕ ಎಂಬ್ರೋಸ ಬಿಅರ್ಸನ "In the Midst of Life", ತೆರೆದ ಪುಟ–"A Horseman in the Sky" ಕಥೆಯೊಳಗಿನ ಯಾವುದೋ ಒಂದು ಪುಟ. ಆಕಾಶದಲ್ಲಿ ಅಶ್ವಾರೋಹಿಯ ಚಲನವಲನ. ಅದೂ ಒಂದು ವಿಚಿತ್ರ ಘಟನೆ,–ಮರೆಯಬೇಕೆಂದಿದ್ದ ಭಯವನ್ನು ತಿವಿದು ಕೆರಳಿಸಿದಂತೆ, ಅದುವಿ ಹಿಡಿದ ವಿಕಲ್ಪನೆ ಚಿಲ್ಲನೆ ಸಿಡಿದಂತಾಯಿತು. ಕಣ್ಣೆದುರು ಅಶ್ವಾರೋಹಿ—ತೀರ ಕಪ್ಪು ಕಲೆಯ ಒಂದು ಅಖಂಡಗೋಲ ಮಿಸುಗಿದಂತೆ ಭಾಸವಾಗತೊಡಗಿತು. ಆ ಚಿತ್ರವನ್ನು ಹೃತ್ಪಟಲದಿಂದ ಅಳಿಸಲೆತ್ನಿಸಿ ವಿಫಲನಾದೆ. ಮತ್ತೆ ಮತ್ತೆ ಕಪ್ಪುಕಲೆ—ಕಣ್ಣ್ ಮುಂದೆ ಸಹಸ್ರಾಕೃತಿಯಾಗಿ ನರ್ತಿಸತೊಡಗಿತು. ಧೈರ್ಯ ಉಡುಗಿತು. ಕೈಕಾಲಿನಲ್ಲಿಯ ಸರ್ವ ಶಕ್ತಿಯೂ ಅಳಿದಂತಾಯಿತು. ನಿಃಸಹಾಯಕನಂತಾಗಿ ಕಿಟಕಿಯ ಕಡೆಗೆ ಮುಖತಿರುವುವ ಎದೆಮಾಡಿದೆ. ಅಲ್ಲಿಯೂ ಅದೇ ಕಪ್ಪುಗುರುತು—ನನ್ನ ನೋಟ ಸ್ಥಿರವಾಗುವ ಪೂರ್ವ ದಲ್ಲಿಯೇ ಉಪಸ್ಥಿತವಾಗಿತ್ತು. ತತ್ಪೂರ್ವದಲ್ಲಿ, ಅಂತರಿಕ್ಷದಲ್ಲಿ ಸ್ಥಿರ ವಾಗಿದ್ದ ಅಶ್ವಾರೋಹಿಯ ಚಿತ್ರ—ಮರೆಯಾಗಿ—ಯಾವುದೋ ಒಂದು ಕರಾಳ ಹಸ್ತ ಈಗ ಆ ಕಿಟಕಿಯ ಮುಂದ—ಮಸಕಿದ ಛಾಯೆಯಲ್ಲಿ ಚಲಿಸ ದಂತಾಗತೊಡಗಿತ್ತು. ನಿಜವಾಗಿಯೂ ಅದು ಯಮಹಸ್ತದಂತೆ ಭಾಸವಾಗ ತೊಡಗಿತು. ಒಂದೆರಡು ನಿಮಿಷದ ಅವಧಿಯಲ್ಲಿ—ಕೈ ಮುಂದೆ-ಮುಂದೆ ಸಾಗಿ—ಅದರ ಹಿಂದೆ ಒಂದು ಮನುಷ್ಯಾಕೃತಿ—ಅದರ ಮುಖ ತೀರ ಕಪ್ಪು—ಮೈದೋರಿತು. ಆಗ ನಾನು ನಾನಾಗಿರಲಿಲ್ಲ. ತೀರ ನಿಶ್ಚೇಷ್ಟಿತನಾಗಿ ಕುಳಿತಿದ್ದೆ. ಏನುಬರುವದೋ ಬರಲಿ ಎನ್ನುವ ಅಲ್ಪ ಧೈರ್ಯವನ್ನೂ ತಂದು ಕೊಳ್ಳುವ ಸ್ಥಿತಿ ಉಳಿದಿರಲಿಲ್ಲ. ಆ ಕಿಟಕಿಯ ಕಡೆಯಿಂದ, ನೋಟವನ್ನು ಕೀಳುವ ಅವಸಾನವೂ ಉಳಿದಿರಲಿಲ್ಲ. ನಾನು ಸತ್ತುಕುಳಿತಿದ್ದೆನೆಂದು ಹೇಳ ದಕೆ ಒಪ್ಪೀತು. ಎಷ್ಟು ಸಮಯ ಸರಿಯಿತೋ ಅರಿಯೆ. ಕಿಟಕಿಯ ಕಾಜಿನ

ಹಿಂದಿನಿಂದ ಒಂದು ಮಾನವಾಕೃತಿ ಸರಿದು ಮುಂದೆ ಹೋಗಿರಬೇಕು. ಈಗ ಅಲ್ಲಿ ಏನೂ ಇರಲಿಲ್ಲ. ಕಿಟಕಿ ಪೂರ್ವವತ್ ಬಿಳಿಛಾಯೆಗೆ ತಿರುಗಿತ್ತು. ಆದರೆ ಅದನ್ನು ನೋಡಿ-ಅನುಭವಿಸಿದ ನೋಟದ ಕಾಳಿಮತೆ ಮಾತ್ರ ಕಡಿಮೆಯಾಗಿರಲಿಲ್ಲ ಬಿಗಿಹಿಡಿದ ಉಸಿರನ್ನು ಬಿಡಲೂ ಅವಕಾಶವಿಲ್ಲ. ನನ್ನ ನೋಟ ಇನ್ನೂ ಕಿಟಕಿಯ ಕಡೆಗೇ ಸ್ಥಿರವಾಗಿ ನಟ್ಟಿತ್ತು.

ಅದನ್ನು ಬೇರೆಡೆಗೆ ತಿರುಗಿಸುವ ಬಲವೇ ಬಂದಿರಲಿಲ್ಲ. ೪–೫ ನಿಮಿಷ ದಾಟಿರಬಹುದು. ಆ ಕಿಟಕಿ—ನನ್ನ ನೋಟದ ನಡುವೆ ಯಾವುದೋ ಒಂದು ಕರಿಯ ಬಣ್ಣದ ಪರದೆ ಇಳಿಬಿದ್ದಂತಾಗಿ— ಇಷ್ಟು ಹೊತ್ತಿನವರೆಗೆ ಅಖಂಡವಾಗಿ ನೋಡುತ್ತಿದ್ದ ನೋಟ ತಟ್ಟನೆ ಕತ್ತರಿಸಿದಂತಾಯಿತು. ನನ್ನ ಜಡವಾದ ನೋಟ ಯಾವ ಆಂತರಿಕ ಶಕ್ತಿಯನ್ನು ಪಡೆದಿತೋ ಏನೋ— ಮೆಲ್ಲನೆ ಕಂಣೆವೆಯೆತ್ತಿ ಆ ಕಪ್ಪು ಪಟವನ್ನು ನೋಡುವ ಧೈರ್ಯ ಮಾಡಿತು. ಅದು–ಆ ಕಪ್ಪು ಕಲೆ ಒಂದು ಪಡದೆಯಂತಿರದೆ ಶುದ್ಧ ಮಾನವಾಕೃತಿಯಾಗಿತ್ತು. ಸುಮಾರು ೬,೬॥ ಅಡಿಯಾಳು ಮಾನವ ಶರೀರ. ಅಮಾವಾಸ್ಯೆಯ ಕಾರ್ತಮದಲ್ಲಿ ಮಿಂದೆದ್ದಂತೆ—ನನ್ನೆದುರು ನಿಂತಿತ್ತು. ನೋಡುನೋಡುವಷ್ಟರಲ್ಲಿ ಆ ಆಕೃತಿ-ನನ್ನೆದುರಿನ ಸೀಟಿನ ಮೇಲೆ ನನ್ನ ತಾಯಿಯ ಕಾಲುದೆಶೆಗೆ—ಸ್ಥಾನಾಪನ್ನವಾಯಿತು. ಅದನ್ನು ನೋಡುವವ ನಾನಾಗಿರಲಿಲ್ಲ. ನನ್ನೆರಡು ಕಂಣು ಗೊಂಬೆ ಮಾತ್ರ ಅದನ್ನು ನೋಡುತ್ತಿರಬೇಕು. ನಾನೆಂದೋ ಸತ್ತು ಶವವಾಗಿದ್ದೆ. ನನ್ನೆದುರು ಕುಳಿತ-ಅಂಗಾಂಗ ಕರೇ ಅರಿವೆಯಿಂದ ಆಚ್ಛಾದಿತವಾದ ಒಂದು ಮನುಷ್ಯಪ್ರಾಣಿ—ಅಥವಾ ಯಾರಿಗೆ ಗೊತ್ತು? ಭೂತಮಾತ್ರವೂ ಇರಬೇಕು—ಆ ಪ್ರಾಣಿಯನ್ನು ನನ್ನ ಕಂಣು ನೋಡದೆ ಗತಿಯಿಲ್ಲವೆಂದು ನೋಡುತ್ತಿದ್ದವು. ಆ ಪ್ರಾಣಿ ಯಾವ ಚಲನವಲನವನ್ನೂ ಮಾಡುತ್ತಿರಲಿಲ್ಲ. ಮುಖದ ತುಂಬ ಕಪ್ಪು ಮುಖವಾಡ (Mask) ವಿದ್ದ ಕಾರಣ ಅದು ನನ್ನನ್ನು ನೋಡುತ್ತಿತ್ತೋ ಇಲ್ಲವೋ ತಟ್ಟನೆ ಹೊಳೆಯಲಿಲ್ಲ. ಭಯದ ಮುದ್ದೆಯಾಗಿ, ಹಿಮವತ್ ಪಿಂಡವಾಗಿ ಕುಳಿತ ನನ್ನ ನಾಲಗೆ ವಾಚಾ ಶಕ್ತಿಯನ್ನು ಎಂದೋ ಕಳೆದುಕೊಂಡಿತ್ತು. ಆ ಭೀಕರಾಕೃತಿಯನ್ನು ನೋಡದೆ ಕಂಣ್ ಮುಚ್ಚುವದೂ ಕೂಡ ನನಗೆ ಅಸಾಧ್ಯವಾಗಿರಬೇಕು. ಫ್ರಾಂಕಿನ್‌ಸ್ಟನ್ನನಂತೆ— ಅಸಹ್ಯವಾದ ಮುಖವಿದೆ ಎನ್ನಲೇ ? ಅದೂ ಗುರುತಿಸಬರದು. ಆಪಾದಮಸ್ತಕ ಮೇಪ

ವರ್ಣದ ಅರಿವೆ, ಕೈಗೆ ಕರಿಯ ಕೈಚೀಲ, ತಲೆ-ಮುಖ ಎಲ್ಲವೂ ಮುಚ್ಚಿ ಹೋಗಿವೆ. ಈ ಭೀಕರ ರೂಪಕ್ಕೆ ಪೂರಕವಾಗಿ-ಕಳಸವಿಡುವಂತೆ-ನಿಶ್ಚಲತೆ-ನೀರವತೆ! ಆ ಆಕೃತಿಯ ಮುಚ್ಚಿದ ಮುಖದಲ್ಲಿ ಕಂಣಿನ ಭಾಗದ ಸುಮಾರಿಗೆ ಎರಡು ತೂತುಗಳು. ಅದಕ್ಕೆ ನೋಡಲು ಬರುವ ವ್ಯವಸ್ಥೆ ಇರಬೇಕು. ಆಳವಾದ ಹಾಳು ಬಾವಿಯಲ್ಲಿಯ ಮುಕ್ಕು ನೀರು ಇಷತ್ ಹೊಳೆಯುವಂತೆ ಆ ಮುಖವಾಡದ ತೂತಿನಲ್ಲಿಯ ತೀರ ಹಿಂಬದಿಯ ಭಾಗದಿಂದ ಆ ವ್ಯಕ್ತಿಯ ಕಂಣುಗೊಂಬೆ ಚಲಿಸುತ್ತಿರಬೇಕು. ಅಹುದು. ಅದು ಇದೀಗ ಗೋಚರಿಸ ತೊಡಗಿತು. ಆ ಆಕೃತಿ ನನ್ನೆದುರು ಸೀಟಿನ ಮೇಲೆ ಎಡಗಾಲಿನ ಮೇಲೆ ಬಲಗಾಲ ಮಂಡೆ ಹಾಕಿ-ಆ ಮಂಡೆಗೆ ಎರಡೂ ಕೈ ಹತ್ತು ಬೊಟ್ಟುಗಳ ಹೆಣಿಕೆಯ ಚೀಲದ ಆಶ್ರಯ ಮಾಡಿದಂತೆ ಮಾಡಿ ತೀರ ನಿಶ್ಚಲ ಸ್ಥಿತಿಯಲ್ಲಿ ಕುಳಿತಿತ್ತು. ಅದು ಚಲಿಸುತ್ತಲೂ ಇಲ್ಲ—ಮಿಸುಗುತ್ತಲೂ ಇಲ್ಲ. ನಾನಂತೂ ನಾಲಗೆ ಕಳೆದುಕೊಂಡು ಎಷ್ಟೋ ಹೊತ್ತು ಆಗಿತ್ತು. ೫-೬ ವರುಷದ ಕೆಳಗೆ ನನಗೆ ಶಸ್ತ್ರಕ್ರಿಯೆ ಮಾಡಿದಾಗ ಕ್ಲೋರೊಫಾರ್ಮ ಕೊಟ್ಟಿದ್ದರು. ಅದರ ನಿಶೆ ಏರಿ ಏರಿದಂತೆ ನನ್ನ ಜೀವಸ್ಪಂದನ ಸ್ತಬ್ಧವಾಗಿ ಒಮ್ಮೆ ಸರ್ವವೂ ಶಾಂತವಾದ ಅನುಭವ ಬಂದಿತ್ತು. ಸತ್ತ ಮೇಲಾಗಬಹುದಾದ ಅನುಭವವನ್ನು ಅಂದು ಪಡೆದಿದ್ದೆ. ಇದೀಗ ಈ ವ್ಯಕ್ತಿಯ ಮುಂದೆ ಕುಳಿತಾಗ ಅದೇ ಬಗೆಯ ಅನುಭವದ ಪುನರಾವೃತ್ತಿಯಾಗತೊಡಗಿತು. ನಾನಲ್ಲ—ನನ್ನ ನೋಟ-ಆ ಆಕೃತಿಯಲ್ಲಿ ನಟ್ಟಿತ್ತು. ಆ ಪ್ರಾಣಿ ಕೂಡ ನನ್ನನ್ನೇ ನೋಡುತ್ತಿರಬೇಕು. ಈ ದೃಷ್ಟಿ ಮಿಲನದಲ್ಲಿ ಭಯ, ಭೀತಿ ಏನೂ ಇರಲಿಕ್ಕಿಲ್ಲ. ಸತ್ತು ಶವವಾದವರಿಗೆ ಇವಾವೂ ತಟ್ಟುವಂತಿಲ್ಲ. ಮೌನದ ಅಸಹ್ಯತೆಯೂ ಅಲ್ಲಿಲ್ಲ. ಇಂಥ ದುರ್ಧರ ಪ್ರಸಂಗ ಎಷ್ಟು ಸಮಯದವರೆಗೆ ಇತ್ತೋ ಏನೋ—ನಾನಂತೂ ಅರಿಯೆ! ಹೈದ್ರಾಬಾದ ಸ್ಟೇಶನ್ನಿನಲ್ಲಿ ನಮ್ಮನ್ನು ಇಳಿಸಿಕೊಳ್ಳಲು ಬಂದ ನಮ್ಮ ಬೀಗರ ಆಳುಮಗನ ಗಡಿಬಿಡಿಯಿಂದ ಎಚ್ಚತ್ತ ನನ್ನ ತಾಯಿ "ಸೀನಾಽ ಏ ಸೀನಾಽ ಏಳೋ—ಇದೆಂಥಾ ನಿದ್ರ್ಯೋ. ತಾಸಾತು ಒದರಲಿಕ್ಕೆ ಹತ್ತೀ" ಎಂದು ಕೂಗುತ್ತಿದ್ದಾಗಲೇ ನನಗೆ ಪ್ರಜ್ಞೆ ಬಂದದ್ದು. ನನ್ನ ಸ್ಥಿತಿಯನ್ನು ಅವರಿಗೆ ವರ್ಣಿಸಿ ಹೇಳುವ ಪರಿಸ್ಥಿತಿಯಲ್ಲಿ ನಾನಿರಲಿಲ್ಲ. ಮನೆಯತನಕ ಬಂದದ್ದು ಹೇಗೋ ಏನೋ. ಮುಂದೆ ೧೦-೮ ದಿನ ಜ್ವರ ಬಂದು ನಾನು ಹಾಸಿಗೆಯಲ್ಲಿದ್ದೆ. ಅದೇ ಬಡಬಡಿಕೆ; ಅವ

ನನ್ನು ಕಂಡ ಧ್ಯಾನ. ಒಂದಿಷ್ಟು ಗುಣಮುಖವಾದ ಮೇಲೆ ನನ್ನ ಬೀಗರು ಕೇಳಿದರು, ಇದರ ಇತಿಹಾಸ. ಅವರಿಗೆ ಇದನ್ನು ವರ್ಣಿಸಿದಾಗ—ನನ್ನಲ್ಲಿ ಧೈರ್ಯ ತುಂಬುವ ದನಿಯಲ್ಲಿ ಅವರು ಹೇಳಿದರು: " ಛೇ, ಅಂಜಬೇಡ್ರೀ. ಅದೆಲ್ಲಾ ಈ ಕಡೆ ರಜಾಕಾರ್ರು-ಕಮ್ಯೂನಿಸ್ಟರು ಮಾಡೂ ಚಾಳಿ. ಅವರೇನ-ಓಡೂ ಗಾಡೀ ಯಾಕ-ವಿಮಾನದಾಗೂ ಹತ್ತತಾರ. ಒಮ್ಮೊಮ್ಮೆ ಅವರ್ನ ಹಿಡೀ ಬೇಕಂತ ಪೋಲೀಸರೂ ಹೀಂಗ ಅಡ್ಡಾಡತಿರತಾರ. "

ಈ ಮಾತಿನಿಂದ ನನಗೇನೂ ಸಮಾಧಾನವೆನಿಸಲಿಲ್ಲ. ಈಗ ಮೇಲಿಂದ ಮೇಲೆ ಆ ಪ್ರಸಂಗದ ನೆನಪಾಗದಿದ್ದರೂ—ತಿಂಗಳು-ಒಂದೂವರೀ ತಿಂಗಳಿಗೊಮ್ಮೆ ಅದು ತಲೆಯೆತ್ತಿ ನನ್ನನ್ನ ಕಾಡದೆ ಇರುವದಿಲ್ಲ. ಭೂತಬಾಧೆಯೆಂದೂ ಕೆಲವರು ಅನ್ನುತ್ತಾರೆ. ಆ ಭೀತಿ ಸಂಚಾರವಾದ ದಿನ ಮನೆಯವರಿಗೆಲ್ಲ ಜಾಗರ. ನನ್ನ ಒಡಬಡಿಕೆಗೆ ಮಿತಿಯೂ ಇರುವದಿಲ್ಲವಂತೆ.

ರಜಾಕಾರ-ಕಮ್ಯುನಿಸ್ಟ-ಸಿ. ಆಯ್. ಡಿ. ಅಲ್ಲದ ಆ ಕರೀ ಆಕೃತಿ ! ಇನ್ನೂ ನನಗೆ ಶೇಷಪ್ರಶ್ನೆಯಾಗಿಯೇ ಉಳಿದಿದೆ !

# ಹೆಬ್ಬೆರಳು-ಕಿರಿಬೆರಳು

ಪ್ಪೂನಾ-ಬೆಂಗಳೂರ ಮೇಲು ಪುಣೆಯಿಂದ ಹೊರಡಲು ಇನ್ನೂ ಒಂದು ತಾಸಿನ ಅವಕಾಶವಿತ್ತು. ಪ್ರಶಸ್ತವಾದ ಸ್ಥಳ ಸಿಗದಿದ್ದರೂ ಇಲ್ಲ— ಕುಳಿತುಕೊಳ್ಳಲು ಒಂದಿಷ್ಟು ಅನುವಾದರೂ ದೊರೆಯಲಿ ಎಂದು ನಾನು ೧-೧॥ ತಾಸು ಮೊದಲೇ ಬಂದಿದ್ದೆ ನಿಲ್ದಾಣಕ್ಕೆ. ಗಾಡಿ ಬಿಡುವದೇ ಅಲ್ಲಿಂದ. ಜನದಟ್ಟಣೆ ಅಷ್ಟಾಗಿರಲಿಲ್ಲ. ಮುಂಬೈಗಾಡಿ ಬಂದನಂತರ ಈ ಗಾಡಿಗೆ ಗದ್ದಲ ತುಂಬುವದು. ಇಂಟರಿನ ಒಂದು ಚಿಕ್ಕ ಡಬ್ಬಿಯಲ್ಲಿ-ಕಿಟಕಿಯ ಹತ್ತಿರ ನನ್ನ ಸಾಮಾನು ಸಡಿ ಇರಿಸಿ-ಮೇಲಿನ ಹಂತಿನಲ್ಲಿ ಹೋಲ್ಡಾಲ್ ಬಿಡಿಸಿ ಇಟ್ಟೆ. ಸಾಧಿಸಿದರೆ ಮಲಗಿಕೊಂಡರಾಯಿತು. ತಗಣಿಯ ಕಾಟ-ಮುಖದ ಮೇಲೆ ಬೇಡವೆಂದರೂ ಕೇಳದೆ ತನ್ನ ಬಿರುಗಣ್ಣು ತೆರೆದು ಬೆಳಕು ಕಾರುವ ಆ ದೀಪದ ಪ್ರಕಾಶ ಇದರಿಂದ ನಿದ್ದೆ ಬರುವ ಮಾತಂತೂ ದೂರೇ! ತೂಕಡಿಕೆಯ ಜಪಮಾಡುವದಕ್ಕಿಂತ ಅಡ್ಡಾಗುವದು ಉತ್ತಮ. ಅದಕ್ಕಾಗಿ-ಈಗಲೇ ಸ್ಥಳ ಹಿಡಿದಿಟ್ಟಿರುವದು ಒಳ್ಳೆಯದೆಂಬ ಮುಂಜಾಗ್ರತೆಗಿಂತ ಸ್ವಾರ್ಥ ಭಾವನೆಯಿಂದ ಹಾಸಿಗೆ ಬಿಡಿಸಿಟ್ಟಿದ್ದೆ. ೧೦ ಗಂಟೆಯಾಗುವ ಹೊತ್ತಿಗೆ ಮುಂಬೈ ಗಾಡಿ ಬಂದು ಕುರಿಹಿಂಡು ನುಗ್ಗಿದಂತೆ ಜನ ಡಬ್ಬಿಯಲ್ಲಿ ನೂಕತೊಡಗಿತು. ೧೦ ನಿಮಿಷದಲ್ಲಿ ಡಬ್ಬಿ ತುಂಬಿ ಕಾಲಿಡಲೂ ಸ್ಥಳವಿಲ್ಲದಂತಾಯಿತು. ಗಾಡಿಬಿಡಲು ೫-೧೦ ನಿಮಿಷದ ಅವಕಾಶವಿರಬೇಕು. ಒಬ್ಬ ವಯಸ್ಕ ಗೃಹಸ್ಥರು, ಚಿಕ್ಕ ಹೋಲ್ಡಾಲ್, ಹಣ್ಣಿನ ಬುಟ್ಟಿ ಹಿಡಿದುಕೊಂಡು ಸ್ಥಳ ಶೋಧನೆಯನ್ನು ಮಾಡಿ— ಕುಳ್ಳಿರಿಸಿ ಹೋಗುವ ಗುತ್ತಿಗೆ ಹೊತ್ತ ರೇಲ್ವೆ ಹಮಾಲನ ಬೆನ್ನುಹತ್ತಿ ಡಬ್ಬಿಯಲ್ಲಿ ನುಗ್ಗಿ ಬಂದರು ಹಮಾಲನ ರೇಲ್ವೆ ಥಾಟಿನ ಗರ್ಜನೆಗೆ, ಬಂದ ಯಜಮಾನರ ದೈನ್ಯಪೂರಿತ ನೋಟಕ್ಕೆ ಜಗ್ಗದೆ ಜನ "ಜಾಗಾ ನಹೀ-ಅಗ್ಗೇ ದೇಖೋ-ಇಂಟರಕಾ ಡಬಾ ಹೈ" ಎಂದು ಕೂಗತೊಡಗಿದರು.

ಬಂದ ಗೃಹಸ್ಥರು ೫೫-೬೦ ವರುಷದ ಮುದುಕರು. ೫॥, ೬ ಅಡಿ ಎತ್ತರವಾಗಿ ಬೆಳೆದ-ಬಾಗದ ದೇಹ; ಉದ್ದನ್ನ ರೇಶಿಮೆಯ ನಿಲುವಂಗಿ—

ತೆಳ್ಳನೆಯ ದೋತರ. ಆ ಬಣ್ಣ— ನಿಲುವು— ವಯಸ್ಸಿಗೆ ಒಪ್ಪುವ ಶುಭ್ರವಾದ ರುಮ್ಮಾಲು, ವಿಶಾಲಫಾಲದಲ್ಲಿ— ಗೀರು ಗಂಧ. ಯಾರಿಗೂ ಆದರ ನಿರ್ಮಾಣ ವಾಗುವಂತಹ ವ್ಯಕ್ತಿ. ಆ ಸೌಮ್ಯರೂಪಕ್ಕೆ, ಆ ಗಂಭೀರ ಮುಖಮುದ್ರೆಗೆ— ಆ ಜಾಗದ ಅಡಚಣಿಯಿಂದ ಒದ್ದಾಡುವ ಕಾರುಣ್ಯಕ್ಕೆ— ಯಾವುದಕ್ಕೋ ಏನೋ ಕರಗಿ— ನಾನವರಿಗೆ— ನಾನು ಕುಳಿತಲ್ಲಿಯೇ ಒಂದಿಷ್ಟು ಸರಿದು ಸ್ಥಳ ಮಾಡಿಕೊಟ್ಟೆ. ಹಮಾಲ ಅವರ ಸಾಮಾನುಗಳನ್ನು ಇಡುವ ಭಾರವನ್ನು ನನ್ನ ಮೇಲೆಯೇ ಹೊರಿಸಿ ತನ್ನ ಕೂಲಿಯನ್ನು ಪಡೆದುಕೊಂಡು ಭರಭರನೆ ನಡೆದುಬಿಟ್ಟ.

ಆ ಹಿರಿಯರ ಸಾಮಾನನ್ನು ವ್ಯವಸ್ಥಿತವಾಗಿರಿಸಿ— ಅವರಿಗೆ ಕುಳಿತು ಕೊಳ್ಳಲು ಎಡೆಮಾಡಿ ಕೊಟ್ಟು— ಕೊಂಚ ಮುಂದುಡಿಕೊಂಡು ನಾನು ಕಿಟ ಕಿಯ ಬಳಿಯ ನನ್ನ ಸ್ಥಳದಲ್ಲಿ ಕುಳಿತೆ. ಯಜಮಾನರು ತೀರ ಸಂಕೋಚ ದಿಂದ ಕುಳಿತಂತೆ ಕಾಣಿಸಿತು. ನಾನು ಹೇಳಿದೆ: “ ಪ್ರಶಸ್ತವಾಗಿ ಕುಳಿತು ಕೊಳ್ಳಿರಿ. ಸಂಕೋಚ ಬೇಡ ! ಗಾಡಿ ಏನು ಯಾರ ಮನೆಯದು? ” ಎಂದು.

“ ಅದೇನೋ ಸರಿ. ಗಾಡಿ ಎಲ್ಲರದೇನೋ ನಿಜ. ತಿಕೀಟ ಕೊಂಡ ನಂತರ— ಅಷ್ಟು ಸ್ಥಳ ನಮ್ಮ ಮಾಲ್ಕೀದಾದಂತ ! ಅದು ನನ್ನ– ನಿಮ್ಮ– ಎಲ್ಲರ ಭಾವನೆಯಾಗಿ ಬಿಡುತ್ತದೆ. ನೀವು ದಯಮಾಡಿ ಸ್ಥಳ ಕೊಟ್ಟಿರಿ— ಅದು ನಿಮ್ಮ ದೊಡ್ಡಮನಸ್ಸು. ಎಲ್ಲರೂ ಹೀಗೇ ಇರುವದು ಸಾಧ್ಯವೇ ? ಇರಲಿ. ನೀವು ಎಲ್ಲಿಗೆ ? ದೂರದ ಪ್ರಯಾಣ ಕಾಣುತ್ತಿದೆ.”

“ ಹೌದು ಒಂದಿಷ್ಟು ದೂರವೇ ! ಹರಿಹರದ ವರೆಗೆ. ಮೈಸೂರ ಕಿರ್ಲೋಸ್ಕರ ಕಂಪನಿಯಲ್ಲಿ ನಾನು ಇಂಜನಿಯರ. ಇಲ್ಲಿ ಕೆಲಸವಿತ್ತು. ಬಂದಿದ್ದೆ. ತಾವು? ”

“ ನಾನು ಧಾರವಾಡಕ್ಕೆ ಈ ವಯಸ್ಸಿಗೆ–ಧಾರವಾಡದ ಅಂತರವೂ ದೊಡ್ಡದೇ. ತ್ರಾಸದಾಯಕ ಪ್ರಯಾಣ. ಮಾಡುವದೇನು ? ಧಾರವಾಡದ ಸರಾಫರಿಗೆ ಮುಂಬೈ ಮುಖ್ಯಪೇಟೆ. ಪ್ರತಿತಿಂಗಳೂ ಖರೀದಿ ವಿಕ್ರಿ ಖಟ್ಟ ಬಾಕೀ ವಸೂಲಿ— ಯೇನಕೇನ ಕಾರಣದಿಂದ ಬಂದು ಹೋಗದೆ ಗತಿಯಿಲ್ಲ. ನನ್ನ ಹುಡುಗರು ಇನ್ನೂ ಅನನುಭವಿಕರು. ಕೈಪಳಗಬೇಕು. ಅಲ್ಲಿಯವರೆಗೂ ಈ ಧಾವತಿ ತಪ್ಪಿದ್ದಲ್ಲ.”

ರಾಯರು ಬಾಗಿ ಹಂಣಿನ ಬುಟ್ಟಿಯನ್ನು ತೆಗೆದರು. ಸಂತ್ರಿ-ಅಂಜೂರ ೧೦-೧೨ ತೆಗೆದು ತಾವು ತಂದ ಯಾವುದೋ ಒಂದು ಪತ್ರಿಕೆಯಲ್ಲಿ ಹಾಕಿ ನನ್ನೆದುರು ಹಿಡಿದರು. ನಾನು "ಹೊಟ್ಟೆ ತುಂಬ ಊಟವಾಗಿದೆ. ಇಷ್ಟು ಹೇಗೆ ಹಿಡಿಸಬೇಕು ತಾವು ಹಸಿದಿರಬೇಕು. ತೆಗೆದುಕೊಳ್ಳಿ" ಎಂದೆ.

"ನಾನಂತೂ ತೆಗೆದುಕೊಳ್ಳುತ್ತೇನೆ ಊಟವಾದರೇನಂತೆ. ಹಂಣು, ಹಾಲು ಪ್ರಕೃತಿಗೆ ಆಪ್ಯಾಯಮಾನ. ಭಿಡೆ ಮಾಡಬೇಡಿರಿ. ತೆಗೆದುಕೊಳ್ಳಿರಿ."

"ಇರಲಿಬಿಡಿ. ಮನೆಯಲ್ಲಿ ಮಕ್ಕಳಿಗೆ ಇರಲಿ. ಊರಿನಿಂದ ಬಂದವರಿಗೆ ಮುಗಿಬೀಳುವದು ಅವುಗಳ ಸ್ವಭಾವ. ನಾನೇ ಎಲ್ಲ ತೀರಿಸಿದರೆ ಹೇಗೆ ?"

"ನೀವು ಅನ್ಯಥಾ ಭಾವಿಸಬೇಡಿ." ನನ್ನ ಹುಡುಗ-ಹುಪ್ಪಡಿ ನೀವು ಎಲ್ಲ ನನಗೆ ಅಷ್ಟೇ! ಮೊಮ್ಮಕ್ಕಳು ಕಿರುಕುಳ ಕೊಟ್ಟರೆ ಹೇಳುತ್ತೇನೆ—ಗಾಡಿಯಲ್ಲಿ ನಿಮ್ಮ ಮಾಮಾನಿಗೆ ಕೊಟ್ಟುಬಿಟ್ಟೆನೆಂದು."

"ಅವರಿಂದ ಬೈಸಿ ಬಿಡುವ ವಿಚಾರವನ್ನೂ ಮಾಡಿದಂತೆಯೇ ಕಾಣುತ್ತದೆ."

ಜಾಗ ಮಾಡಿಕೊಟ್ಟ ನಿಮಿಷದಲ್ಲಿಯೇ ನಮ್ಮಲ್ಲಿ ಸಲಿಗೆ-ಸಖ್ಯ ಬೆಳೆದುಕೊಂಡುಬಿಟ್ಟಿತು. ಅವರು ನನಗಿಂತ ೨೫-೩೦ ವರುಷಕ್ಕೆ ಹಿರಿಯರು. ನನ್ನ ಹಿರಿಯರ ಕೂಡ ಆಡುವಷ್ಟು ಗೌರವದಿಂದ ಅವರ ಕೂಡ ಮಾತನಾಡಬೇಕು. ಆದರೆ ಅವರ ಉಲ್ಲಾಸವೃತ್ತಿ, ಹಸನ್ಮುಖ ಕಂಡು ನನಗೆ ಒಂದಿಷ್ಟು ವಾಚಾ ಸ್ವಾತಂತ್ರ್ಯ ಬಂದಿತ್ತು. ಮಾತನಾಡುವ ಧೈರ್ಯ ಬಂದಿತ್ತು. ಅಲ್ಲದೆ ವೃತ್ತಿಯಿಂದ ವ್ಯಾಪಾರಿಗಳಾದ ಅವರಿಗೆ ಮಾತೇ ಅನ್ನ ನೀರು. ಬದುಕಿಗೆ ಮಾತೇ ತಾಯಿಬೇರು. ಇಬ್ಬರೂ ವೃತ್ತಿ-ಸ್ಥಾನಮಾನದ ಪರಿಚಯ ಪರಸ್ಪರ ಮಾಡಿಕೊಂಡರೂ—ಹೆಸರು ದೆಶೆ ಮಾತ್ರ ಹೇಳಿ-ಕೇಳಿಕೊಳ್ಳುವ ಪ್ರಸಂಗ ಬರಲಿಲ್ಲ. ಅನಾಹೂತವಾಗಿ ಬರಬೇಕಾದ ಮಾತಾದರೂ-ಅಂಥ ಪ್ರಸಂಗ ಬಂದಿರಲಿಕ್ಕೆ ಕಾರಣ-ಅವರಿಗೆ ಮದುವೆಗೆ ನೆರೆದು ನಿಂತ ಹೆಂಣುಮಕ್ಕಳಿರಲಿಕ್ಕಿಲ್ಲ. ನನ್ನ ಮಟ್ಟಿಗೆ ಕೇಳುವದಾದರೆ—ಇಂಗ್ಲಿಷ ಅಭ್ಯಾಸ ಮಾಡಿ ಸ್ಥಾಪತ್ಯ ವಿಶಾರದ ಪದವಿಯನ್ನು ಪಡೆದ ನಾನು ಆಗಂತುಕವಾಗಿ, ಹೆಸರು ದೆಸೆ ಕೇಳುವದು ಅನಾಗರಿಕವೆಂದು ಬಿಟ್ಟೆ. ಆಕಾರಣದಿಂದಾಗಿ ಇಬ್ಬರಲ್ಲಿಯೂ ಮಾತುಕತೆಗಾಗಲೀ ಹರಟೆಗಾಗಲೀ ವ್ಯತ್ಯಯ ಬರಲಿಲ್ಲ. ಗಾಡಿ ಕದಲಿ ಈ ವೇಳೆಗಾಗಲೇ ೧೫-೨೦ ನಿಮಿಷ

ವಾಗಿತ್ತು. ನಾನು ಯಜಮಾನರಿಗೆ ಹೇಳಿದೆ: "ಮೇಲೆ ನನ್ನ ಹಾಸಿಗೆ ಬಿಡಿಸಿ ಇಟ್ಟಿದ್ದೇನೆ. ಬೇಕಾದರೆ ಅಡ್ಡಾಗಿರಿ. ಕೆಳಗೆ ಅಷ್ಟು ನಿಶ್ಚಿಂತವಾಗಿ ಮಲಗಲು ಅನುಕೂಲವಿಲ್ಲ."

"ಛೇ, ಅದೇನೂ ಬೇಡ! ಏನು ಮಹಾ ನಿದ್ದೆ. ನಾನು ಮುದುಕ. ನಿದ್ದೆ ಹಾರುತ್ತ ಬಂದಿದೆ. ನೋಡೋಣ, ಬೆಳಗಿನ ಜಾವಕ್ಕೆ ಜಂಪು ಹತ್ತಿದರೆ ಹಾಗೇ ಒಂದಿಷ್ಟು ಅಡ್ಡಾದರಾಯಿತು. ಬೇಕಾದರೆ ನೀವು ಮಲಗಿಕೊಳ್ಳಿ. ನಾಳೆ ಮತ್ತೆ ನಿಮಗೆ ಕಾರ್ಖಾನೆ ಕೆಲಸ ಬಿಡುವು ಸಿಗಲಾರದು."

"ನನಗೂ ಅಷ್ಟೇ. ಈ ಗಾಡಿಯ ಸೂಕಾಟಕ್ಕೆ ನಿದ್ದೆ ಬರುವದೇ ಇಲ್ಲ. ಕುಳಿತಲ್ಲಿ ಎಷ್ಟೋ ಅಷ್ಟೇ–ಮಾರ್ಜಾರ ನಿದ್ರೆ."

ಆ ಹಿರಿಯರು ತಂದ ಹಿಂದಿಯ ಕಲ್ಯಾಣ ಮಾಸಿಕ ಮರಾಟಿಯ ಒಂದೆರಡು ಮಾಸಿಕ ಪತ್ರಗಳನ್ನು ತಿರುವಿ ಹಾಕುತ್ತಿದ್ದೆ. ಅದನ್ನು ಕಂಡು ಅವರೆಂದರು:

"ಗಾಡಿಯಲ್ಲಿ ವೇಳೆ ಕಳೆಯಲೆಂದು ಇವನ್ನು ತೆಗೆದುಕೊಂಡೆ! ಊರಿಗೆ ಹೋದ ಮೇಲೆ ಇವೆಲ್ಲ ರದ್ದೀ! ಕಲ್ಯಾಣ ಕೂಡ ಮುಂಚಿನಂತೆ ಹೊರಡುವದಿಲ್ಲ."

"ಎಲ್ಲಕ್ಕೂ ರೇಶನ್- ಕಲ್ಯಾಣದ ವಾಚಕರಿಗೆ ಬೀ. ಎಮ್. ದ ಧ್ಯಾಸ. ಶೇಠ ಸಾವಕಾರರು ಅದರ ಉಪಾಸಕರು. ಗಾತ್ರ-ವಿಷಯ ಎಲ್ಲಕ್ಕೂ ಗ್ರಹಣ ಹಿಡಿದಿದೆ ಎಲ್ಲ ಪತ್ರಿಕೆಯ ಹಣೆಯಬರಹವೂ ಇದೇ! ಈಗಂತೂ ಜಾದೂ–ಖೂನಿ–ಪತ್ತೇದಾರಿಯ ಕತೆಗೆ ಭರತಿ ಬಂದಿದೆ. ಭೂತ–ಬೇತಾಳ ಆಗೀಗ ಕಥೆಯಲ್ಲಿ ಕಂಡುಬರುತ್ತವೆ."

"ಎಲ್ಲಾ ಬರಬೇಕು. ಬರಲಿ; ಆದರೆ ಬರವಣಿಗೆ ಜೀವಂತವಿಲ್ಲ ನೋಡಿರಿ. ಅದೇ ನನಗಿರುವ ಸಂಕಟ. ನನ್ನ ಮಗನೂ ಆಗೀಗ ಬರೆಯುತ್ತಾನೆ. ಆದರೇನು? ಅದರಲ್ಲಿ ಅನುಭವವಿಲ್ಲ—ಜೀವವಿಲ್ಲ. ಧಾರವಾಡದ ಪಾಯರೀ ಹಣ್ಣಿನ ರುಚಿ ಬೇರೆ! ಮಲಗೋವಾದ ನಿಃಸ್ಸತ್ವ ಬೇರೆ."

"ಈ ಖಚಿತ ಅಭಿಪ್ರಾಯ ಕೇಳಿದರೆ ನಿಮ್ಮ ಸಾಹಿತ್ಯ ವಾಚನ, ಅಭ್ಯಾಸ ದೊಡ್ಡದಿದೆಯೆಂದು ಕಾಣುತ್ತದೆ. ವಿಮರ್ಶೆಯೂ ಹರಿತ!"

" ಅದು ಸರಾಫರ ದಂಧೆಯಲ್ಲಿ ಕಳೆದ ೪೦ ವರುಷದ ಅನುಭವ. ಬಂಗಾರದ—ಮುತ್ತುರತ್ನದ ಪಾರಖೀ ನಾವು. ನಮಗೆ ಸಾಹಿತ್ಯ ಯಾವ ಗಿಡದ ತೊಪ್ಪಲು ? ಅದಕ್ಕೇ ನನ್ನ ಮಗನಿಗೆ ಹೇಳುತ್ತಿದ್ದೇನೆ. ಬಂಗಾರದ ಒರೆ ಹಚ್ಚುವದನ್ನು ಕಲಿ, ಸಾಹಿತ್ಯ ತಾನಾಗಿ ಬರುತ್ತದೆ-ಎಂದು. ಮೊನ್ನೆ ಯಾವುದೋ ಮಾಸಿಕದಲ್ಲಿ—ಚೇಟಿಮಾಡಿ ಗುಪ್ತ ಧನದೊರಕಿಸುವದರ ಬಗ್ಗೆ ಕತೆ ಬರೆದಿದ್ದ. ಆದರೆ ಅದೆಲ್ಲ ಸತ್ತ ಕತೆ. ಅವನು ತಾನು ಅಂಥ ಕೃತಿಯನ್ನು ಕಂಡೂ-ಇಲ್ಲ. ಕೇಳಿ ಅರಗಿಸಿಕೊಳುವ ತ್ರಾಣವನ್ನೂ ಪಡೆದಿಲ್ಲ. ಆ ಕತೆಯನ್ನು ಓದಿ ನೋಡಿದರೆ ಹಸಿಬಿಸಿ ಬೆಯ್ಸಿದ ಗುಗ್ಗರಿಯಂತಾಗಿ ಬಿಟ್ಟಿತ್ತು."

" ದೆವ್ವಿನ—ಭೂತದ ಅನುಭವ ಏನು ಸತ್ಯವೇ? ಅದು ಬರಿಯ ಆಭಾಸ. ಅಂಜಿಕೊಂಡ ಮನಸ್ಸಿಗೆ ಅಂಟಿದ ಕತ್ತಲೆ. ಆ ಚೇಷ್ಟೆಯನ್ನೇ ನಾವು ಭೂತ ಬಾಧೆ ಎನ್ನುವದು. ನನಗೇನೂ ಅದರಲ್ಲಿ ನಂಬಿಗೆಯಿಲ್ಲ. ಅಂಥ ಬರವಣಿಗೆಯಲ್ಲಿ ವಿಶ್ವಾಸವೂ ಇಲ್ಲ. ಅದರಂತೆ ಈ ಗುಪ್ತ ಧನಶೋಧನೆಯ ಕತೆಯೂ ಅಷ್ಟೆ."

" ನನಗೂ ಇರಲಿಲ್ಲ. ಯಾವ ಹರಿಹರ ಬ್ರಹ್ಮ ಬಂದು ಹೇಳಿದ್ದರೂ ನಾನು ನಂಬುತ್ತಿರಲಿಲ್ಲ. ಆದರೆ ನಂಬಬೇಕಾದ ಪ್ರಸಂಗ ಬಂದಿತು. ಅಂಥ ಪ್ರಸಂಗ ಬಂದಿತು. ಖಚಿತವಾಗಿ ನಂಬಿದೆ. ನಿಮಗೆ ತೋಂದರೆಯೆನಿಸದಿದ್ದರೆ ಬೇಕಾದರೆ ನಂಬಿರಿ ಸಾಕಾದರೆ ಬಿಡಿರಿ-ಹೇಳುತ್ತೇನೆ. ಹೇಗೂ ಹೊತ್ತು ಕಳೆಯಲಂತೂ ಬೇಕಲ್ಲ. ಅದು ನನ್ನ-ನಿಮ್ಮ ನಡುವೆ ಆದ ಮಾತು ಅಷ್ಟೇ-ನಿಮ್ಮನ್ನು ಕಂಡೊಡನೇಯೇ ವಿಶ್ವಾಸವೆನಿಸಿತು. ನನ್ನ ಅನುಭವ ಹೇಳಿ ನಿಮ್ಮನ್ನು ಸಮಾಧಾನ ಪಡಿಸುವದರಿಂದ ನನಗೆ ಆಗುವ ಲಾಭವೂ ಅಷ್ಟರಲ್ಲಿಯೇ ಇದೆ. ಆದರೆ ಯಾಕೋ ಹೇಳಬೇಕೆಂದೆನಿಸುತ್ತದೆ. ಮುಚ್ಚಿಡುವ ಮನಸ್ಸಾಗದ್ದರಿಂದ ಹೇಳುತ್ತೇನೆ. ಈ ಕತೆಗೆ ಅನೇಕ ಕಾಲು-ಕೈ-ತಲೆ ಒಡೆದು ನಾನಾರೀತಿಯಾಗಿ ಜನ ಆಡಿಕೊಳ್ಳುತ್ತಾರೆ. ಆದರೆ ಯಾರಿಗೂ ಅದರ ಮೂಲ ಗೊತ್ತಿಲ್ಲ. ನಾನು ಸ್ವಂತ ಅದನ್ನು ಕಂಡು-ಕೇಳಿ-ಅನುಭವಿಸಿದ್ದೇನೆ. ಅದರಿಂದಲೇ ಅದಕ್ಕೆ-ನನ್ನ ಮಟ್ಟಿಗಂತೂ ಸತ್ಯದ ಆಧಾರವಿದೆಯೆಂದು ನಂಬಿಗೆ."

"ನೀವು ಇಷ್ಟು ಧೈರ್ಯಕೊಟ್ಟು ಹೇಳುವಿರೆಂದಮೇಲೆ ಅದರಲ್ಲಿ ಸತ್ಯಾಂಶವಿರಬೇಕು. ನನಗೇನೂ ತೊಂದರೆ ಯಿಲ್ಲ. ಕೇಳುವ ಔತ್ಸುಕ್ಯವಿದೆ. ನಿಮಗೆ ತೊಂದರೆಯೆನಿಸದಿದ್ದರೆ ಹೇಳಿ."

"ತೊಂದರೆ ಯಾತರದು. ನಿಮ್ಮಂಥ ಶ್ರೋತಾ ದೊರೆಯುವದೇ ಅಲಭ್ಯ. ಜನಮೇಜಯನ ಸಹನೆ ಮಾತ್ರ ಬೇಕು–ಕೇಳಬೇಕಾದರೆ. ನೋಡಿ, ನಾವು ಕುಂದಗೋಳದವರು. ಅಜ್ಜ ಆರುತಲೆ–ಮುತ್ತಜ್ಜ ಮೂರುತಲೆ. ಬಂಗಾರ, ರತ್ನಪಡಿಯ ವ್ಯಾಪಾರ, ನಮ್ಮ ವೃತ್ತಿ. ಮೂಲ ಘರಾಣೇ–ಒಂದರದು ಹತ್ತಾ ದರೂ–ಎಲ್ಲರದೂ ಅದೇ ವ್ಯವಸಾಯ. ಆದಿಲ್‌ಶಹನ ಅರಮನೆಯ ವರೆಗೂ ನಮ್ಮ ಕೀರ್ತಿ. ಅವರು ರಾಜ್ಯವಿಹೀನರಾದ ನಂತರ–ನಮಗೆ ಗತಿ—ಸಂಸ್ಥಾ ನದ ಅಧಿಪತಿಗಳು. ಜಮಖಂಡಿ-ಮುಧೋಳ-ರಾಮದುರ್ಗ–ಸಾಂಗ್ಲಿ–ಕೊಲ್ಹಾಪುರ ಎಲ್ಲ ಕಡೆಗೂ ಮುತ್ತು ರತ್ನದ ಹಸಿಬಿಯನ್ನು ಬಗಲಿಗೇರಿಸಿ ನಾವು ಅಲೆದದ್ದೇ ಅಲೆದದ್ದು. ನನ್ನ ಕಾಲಕೀರ್ತಿಯಲ್ಲಿ ಮಾತ್ರ ಈ ರತ್ನ ಪಡಿಯ ವ್ಯಾಪಾರ ನಿಲ್ಲಿಸಿಬಿಟ್ಟೆ. ಕಾರಣವೆಂದರೆ ಕಲ್ಚರ್ಡ ಮುತ್ತಿನ ಪೇಟೆ ಬೆಳೆದು–ಖರೇ ಮುತ್ತಿಗೆ ಗಿರಾಕಿ ಇಲ್ಲದಂತಾಯಿತು. ಅಲ್ಲದೆ ಅಲೆ ದಾಟದ ತೊಂದರೆಯೂ ವಿಪರೀತ. ಆದರೆ ನಾನು ಈ ವ್ಯವಹಾರ ನಿಲ್ಲಿಸಿದಂತೆ ನಮ್ಮ ದಾಯಾದಿ ಶೀನಪ್ಪನಾಯಕ ನಿಲ್ಲಿಸಲಿಲ್ಲ. ಮನೆಯಲ್ಲಿ ಅವನ ತಂದೆ–ಅಂದರೆ ನಮ್ಮ ಕಕ್ಕ–ಅವನ ೨-೩ ತಮ್ಮಂದಿರು ದುಡಿಯಲಿಕ್ಕಿದ್ದರು. ಊರಿ ನಲ್ಲಿಯ–ಧಾರವಾಡದಲ್ಲಿಯ ಅಂಗಡಿಯ ದೇಖರಖಿ ಮಾಡುತ್ತಿದ್ದರು. ಶೀನಪ್ಪ ನಿಗೆ ಗೋವಾದ ಮಾಲನ್ನು ತರಿಸುವ ಕೈಚಳಕ ಅವಗತವಾಗಿತ್ತು. ಅದರಿಂದ ಅವನು ಅಲ್ಪ ಬೆಲೆಗೆ ಕೊಂಡ ಮಾಲನ್ನು ಬಂಣದ ಮಾತಿನಿಂದ ವ್ಯವಹಾರ ಕುಶಲತೆಯಿಂದ ಹತ್ತು ಪಟ್ಟು ಬೆಲೆ ಹೆಚ್ಚು ಪಡೆದುಕೊಂಡು ಸಂಸ್ಥಾನಿಕರ ಕೊರಳಲ್ಲಿ ಕಟ್ಟುತ್ತಿದ್ದ. ಹೀಗಾಗಿ ಅವನ ವ್ಯಾಪಾರ ಏರುಮುಖವಾಗಿ ನಡೆ ದಿತ್ತು. ಮನೆಯಲ್ಲಿ ಅಕ್ಕಸಾಲಿಗರ ಹಿಂಡು ಇಟ್ಟುಕೊಂಡು ವಸ್ತ ಒಡವೆಯ ಕಾರ್ಖಾನೆಯನ್ನೂ ತೆಗೆದಿದ್ದ. ಅವನ ಭವ್ಯ ವಾಡೆ ಎಂದರೆ ರಾಜಗೃಹದಂತೆ ಕಾಣುತ್ತಿತ್ತು. ಮನೆಯ ತಲೆಬಾಗಿಲನ್ನು ಇಕ್ಕಲು–ತೆರೆಯಲು ನಾಲ್ಕಾಳು ಬೇಕಾಗುತ್ತಿತ್ತು. ಬಾಗಿಲನ್ನು ಇಕ್ಕಿದನಂತರ ಅಗಣಿ ಎಳೆಯಲು ಇಬ್ಬರು ಬೇಕಾಗುತ್ತಿತ್ತು. ೧೦೦–೧೫೦ ಜನ ನಿರಾಯಾಸವಾಗಿ ಊಟಕ್ಕೆ ಕುಳಿತು

ಕೊಳ್ಳಲು ಬರುವಂತಹ ಪಡಸಾಲೆ-ಪಡಸಾಲೆಯ ಮುಂಬದಿಗೆ ಆರು ಅಂಕಣದ ಎರಡು-ಎದುರುಬದುರು ಬಂಕಣ. ಅವನ ಮನೆಯ ಗೋಡೆಗಳು ೧-೧॥ ಮಾರು ಅಗಲು. ತೋಪು ಹಚ್ಚಿ ಹೊಡೆದರೂ ಒಂದು ಕಲ್ಲೂ ಸರಿಯದಂತಹ ಗೋಡೆ. ಆ ಮನೆಯ ವೈಭವ ಇಷ್ಟು ರಭಸದಿಂದ ಏರಲು ಕಾರಣವೆಂದರೆ ಶೀನಪ್ಪನ ಅಜ್ಜ, ಅಂದರೆ ನನ್ನ ಅಜ್ಜನ ಅಣ್ಣ ಬಾಳಿ-ಬದುಕುತ್ತಿದ್ದ ಕಾಲದಲ್ಲಿ-ಒಂದು ದಿನ ಮೂರುಸಂಜೆಯ ಹೊತ್ತಿಗೆ-ಒಬ್ಬ ತುಂಬಿದ ಮುತ್ತೈದೆ ಆ ಮನೆಯಲ್ಲಿ ನಡೆದು ಬಂದಳಂತೆ. ಅದನ್ನು ನಾನು ಕೇಳಿದ್ದು. ಅಂದಿನಿಂದ ಆ ಮನೆ ಬೆಳೆಯುತ್ತ ನಡೆದು ಬಂದಿತು. ಆದರೂ ನೋಡಿರಿ. ಲಕ್ಷ್ಮಿ ಹೀಗೆ ಆಕಸ್ಮಿಕವಾಗಿ ಬರುವದೂ ಸರಿಯಲ್ಲ. ಹೋಗುವದೂ ಸರಿಯಲ್ಲ. ಅವಳ ಆಗಮನ ನಿರ್ಗಮನದ ಚಾಂಚಲ್ಯ ಬಹಳ ವಿಚಿತ್ರ. ಶೀನಪ್ಪನ ಅಜ್ಜ-ತಂದೆಯರ ಕಾಲದಲ್ಲಿ ಈ ಭರಾಭರಾಟಿಗೆ ಏನೂ ವ್ಯತ್ಯಯ ಬರಲಿಲ್ಲ. ಶೀನಪ್ಪನ ಅರ್ಧ ಜೀವಮಾನದ ಕಾಲದಲ್ಲೂ ಅದು ನಡೆದು ಬಂದಿತು. ಮಕ್ಕಳು-ಮರಿ-ಆಳು-ಕಾಳು-ಆಶ್ರಿತರಿಂದ ಆ ಮನೆ ಯಾವಾಗಲೂ ತುಂಬಿ ಗಜಿಬಜಿಸುತ್ತಿತ್ತು. ದಿನಾಲು ಊಟಕ್ಕೆ ೧೦೦ ಎಲೆ. ಸಮಾರಾಧನೆಯಂತೆ ಬೀಳುತ್ತಿದ್ದವು. ಹಂಡೆ ತುಂಬ ಅನ್ನ. ಎದೆಯ ಎತ್ತರ ಥೀಗಾಗಿ-ಚಪಾತಿ-ಭಕ್ಕರಿಯ ರಾಶಿ. ಒಂದು ಹೊತ್ತಿಗೆ ಸಾಕಾಗಬೇಕಾದರೆ ರಾಮಾಯಣ. ಹಣಮಾಯಣ.

"ಶೀನಪ್ಪನ ತಂದೆ ತಾಯಿ ಇನ್ನೂ ಕಲ್ಲಿನಂತೆ ಗಟ್ಟಿಮುಟ್ಟಾಗಿದ್ದರು. ಮನೆಯ ಮೇಲ್ವಿಚಾರಣೆ, ಹೊಲಮನೆಯ-ಊರಿನಲ್ಲಿಯ ಅಂಗಡಿಯ ಎಲ್ಲ ವ್ಯವಹಾರ-ಶೀನಪ್ಪನ ತಂದೆ ನೋಡುತ್ತಿದ್ದರು. ಕಲ್ಲೀಮೀಶೆಯ ಮುದುಕ—ಬಗಲು ಬಂಡಿಯ ಅಂಗಿ-ಅಂಚಿನ ಧೋತರ-ತಲೆಗೊಂದು ಹಿಡಿಗೆ ರುಮ್ಮಾಲು ಸುತ್ತಿಕೊಂಡು-ಬಾಗಿಲ ಮುಂದಿನ ಬಂಕಣದಲ್ಲಿ ಕುಳಿತೇ-ಸರ್ವ ಕಾರುಭಾರ ಸಾಗಿಸುತ್ತಿದ್ದ. ಏಳು ಗೇಣಿನ ಕುದುರೆ ಏರಿ-ತೋಟಪಟ್ಟಿಯ ಕಡೆಗೂ ಒಂದು ಸುತ್ತು ಹಾಕಿ-ಗುಡುಗಿ ಬರುತ್ತಿದ್ದ. ಅವನ ಪತ್ನಿ-ಭೀಮಕ್ಕ ಅಷ್ಟೇ ಖಂಬೀರ ಹೆಂಗಸು. ೧೦೦ ಜನರ ಅಡಿಗೆ ಅಂಬಲಿ ಮನೆಯ ಇಬ್ಬರು ಸೊಸೆಯಂದಿರನ್ನು ಕರೆದುಕೊಂಡು ತಾನೇ ಮಾಡಬೇಕು. ಹತ್ತು ಎಮ್ಮೆಯ ಹಾಲು ಕರೆಯಬೇಕು. ದೊಡ್ಡ ನಾಲ್ಕಾರು ಗಡಿಗೆಗಳಲ್ಲಿ ಮಜ್ಜಿಗೆ ಕಡೆಯಬೇಕು.

ಯಾವುದಕ್ಕೂ ಹಿಂಜರಿಯುವ ಜಾತಿಯಲ್ಲ. ಬೇನೆ ಬೇಸರಿಕೆ ಮರೆತು ಬಂದ ವಳಂತೆ ಇದ್ದಳು. ಮಾವನ ಕಾಲದಿಂದ ನಡೆದು ಬಂದ ವೈಭವದಲ್ಲಿ ರವಷ್ಟಾದರೂ ಕಡಿಮೆಯಾಗಬಾರದೆಂಬ ಬಗ್ಗೆ ಅಷ್ಟು ಚಿಂತೆ; ದಕ್ಷತೆ. ಆದರೆ ಆಗಲೇ ಹೇಳಿದೆನಲ್ಲ-ಲಕ್ಷ್ಮಿ ಬಹಳ ಚಂಚಲೆಯೆಂದು

"ಈ ಮನೆಯಲ್ಲಿ ನಿಂತು ಅವಳಿಗೆ ಬೇಸರವೆನಿಸಿರಬೇಕು. ಕಾಲು ಕಿತ್ತುಕೊಂಡು ಪಲಾಯನ ಬೆಳೆಸುವ ಬೇತಿನಲ್ಲಿ ಇರಬೇಕು. ಕಾರಣಸಿಗುವ ದಾರಿಯನ್ನೇ ಕಾಯುತ್ತಿದ್ದಳೆಂದು ಕಾಣುತ್ತದೆ. ಒಂದು ದಿನ ಎಂದಿನಂತೆ ಚಪಾತಿಯ ರಾಶಿಯನ್ನು ಮಾಡಿ ಒಟ್ಟಿದ್ದರು ಅಡುಗೆಯ ಮನೆಯಲ್ಲಿ. ಊಟಕ್ಕೆ ಇನ್ನೂ ಅವಕಾಶವಿರಬೇಕು. ನಡುಮನೆಯಲ್ಲಿ ಎಲೆ ಬಡಿಸುವ ತಯಾರಿ ನಡೆದಿತ್ತು. ಹುಡುಗರು ಚಿಳ್ಳಿ ಮಿಳ್ಳಿ ಅತ್ತಿಂದಿತ್ತ ಅಲೆಯುತ್ತಿದ್ದವು. ಶೀನಪ್ಪನ ಕಡೆ ಹುಟ್ಟುಮಗು, ೨ ವರುಷದ್ದು, ಅದೇನೋ ಕಾರಣ ಎಲ್ಲರ ಕಣ್ಣು ತಪ್ಪಿಸಿ-ಅಡುಗೆಯ ಮನೆಯಲ್ಲಿಯೇ ಶೌಚಮಾಡಿತು. ಭೀಮಕ್ಕಾ ಆ ಸುಮಾರಿಗೆ ಒಳಗೆ ಬಂದವರು ಇದನ್ನು ಕಂಡು-ಸೊಸೆಗೆ ಬೆದರಿಸಿದರು. ಬೇಗನೆ ಅದನ್ನು ತೆಗೆದುಬಿಡಲು ಹೇಳಿದರು. ಸೊಸೆ ಅತ್ತೆಗಿಂತ ಸುಧಾರಿಸಿದ ವಳು. ಆಲಸ್ಯ ತಾನಾಗಿ ಮೈಗೂಡಿ ಬಂದದ್ದು. ಹೊರಗೆ ಹೋಗಿ ಶಗಣಿ ತರುವ ತೊಂದರೆ ಬೇಡವೆಂದು ಅಲ್ಲೇ ರಾಶಿಯಾಗಿ ಬಿದ್ದ ಚಪಾತಿಯ ಢೀಗಿನಿಂದ ಒಂದು ಚಪಾತಿ ತೆಗೆದುಕೊಂಡು-ಶೌಚವನ್ನು ತೆಗೆದುಹಾಕಿದಳು. ಈ ದುರ್ದೈವೀ ಘಟನೆ ಕಂಡ ಭೀಮಕ್ಕ ನಿತ್ರಾಣಳಾಗಿ ನೆಲ ಹಿಡಿವೇ ಬಿಟ್ಟಳು. ಚಂಚಲಚಿತ್ತೆ ಲಕ್ಷ್ಮಿಗೆ ಇದಕ್ಕಿಂತ ಇನ್ನಾವ ಕಾರಣಬೇಕು-ಕಾಲು ಕಿತ್ತಲು? ಅನ್ನಕ್ಕೆ ಆದ ಅವಮಾನ ತಾಳಲಾರದೆ-ಅವಳು ಈ ಮನೆಯ ನಿರೋಪ ತೆಗೆದುಕೊಂಡಳು. ಮೊದಲನೇ ಯುದ್ಧ ಮುಗಿದವಾರ್ತೆ ಬಂದು-ಬಂಗಾರದ ಧಾರಣಿ ೧೮-೨೦ ಕ್ಕೆ ಇಳಿಯಿತು. ಅದರ ಕೂಡ ಶೀನಪ್ಪನ ದಿವಾಳಿಯೂ ಎದ್ದಿತು. ಇದು ೨-೩ ದಿವಸಗಳಲ್ಲಿ ನಡೆದ ದುರ್ದೈವೀ ಘಟನೆ. ಶೀನಪ್ಪನ ಅವನತಿ ನಾನು ಕಣ್ಣಾರೆ ಕಂಡಿದ್ದೇನೆ. ಶೀನಪ್ಪನ ತಂದೆ-ಆರಡಿ ಆಳು-ಭೀಮಕಾಯದ ಮನುಷ್ಯ ಗುಬ್ಬಿಯಂತಾಗಿ ನೆಲಹಿಡಿದು ಬಿಟ್ಟ. ಮನೆಯಲ್ಲಿ ಕಾಗೆಯಂತೆ ಕವಳಕ್ಕೆ ನೆರೆದ ಆಶ್ರಿತಪರಿವಾರ ಓಡಿ ಹೋಗಿಬಿಟ್ಟಿತು. ಆ ಭವ್ಯ ವಾಡೇ ಬಿಕೋ ಎನ್ನತೊಡಗಿತು. ಇದ್ದುಬಿದ್ದ ಆಸ್ತಿ-ಪಾಸ್ತಿ ಮಾರಿ

ಶೀನಪ್ಪ ಪತ್ತು ಉಳಿಸಿಕೊಂಡ. ಅವನ ತಂಮಾಂದಿರು ಶಾಪಕೊಡುತ್ತ ಕೈಗೆ ಸಿಕ್ಕಿದ್ದನ್ನು ತೆಗೆದುಕೊಂಡು ಬೇರೆಯಾಗಿಬಿಟ್ಟರು. ಶೀನಪ್ಪನ ಹೆಂಡತಿಗೆ-ಸಾಧಾರಣವಾಗಿ ಹುಚ್ಚೇಹಿಡಿಯಿತು. ನಿರ್ಜೀವರಾದ ತಂದೆ ತಾಯಿ-ಹುಚ್ಚು ಹೆಂಡತಿ ೫-೬ ಜನ ಮಕ್ಕಳನ್ನು ಕಟ್ಟಿಕೊಂಡು-ಶೀನಪ್ಪ ಆ ಮನೆಯಲ್ಲಿ ಗೂಗೆಯಂತೆ ಯಾವುದೋ ಮೂಲೆಯಲ್ಲಿ ವಾಸಿಸುತ್ತಿದ್ದ.

"ಭೂತ ಬೆಂತರ ಚಮತ್ಕಾರದ ಕಥೆ ಹೇಳಹೊರಟವರು ಇದೇನು ಅವನತಿಯ ಕತೆ ಹೇಳುತ್ತಿದ್ದೀರಿ-ಎನ್ನಬೇಡಿ ! ಇದು ಅದಕ್ಕೆ ಪೂರ್ವಪೀಠಿಕೆ. ಪ್ರಸ್ತಾನ.

"ಶೀನಪ್ಪನ ಮನೆಯೂ-ನಮ್ಮ ಮನೆಯೂ ತೀರ ಬದಿಗೆ ಬದಿಗೆ. ಒಂದೇ ಗೋಡೆಯೆಂದರೂ ಸರಿಯೇ ! ಆದರೆ ನಮ್ಮ ನಮ್ಮಲ್ಲಿಯ ದಾಯಾದವಾದ-ಆಗೋಡೆಗಿಂತಲೂ ಹಿರಿದಾಗಿತ್ತು. 'ಅವರೂ-ನೀವೂ ಸಂಬಂಧಿಕರೇ' ಎಂದಾಗ ಅಂಣತಮ್ಮಂದಿರು-ಎನ್ನುವದರ ಬದಲಿಗೆ '೧೦ ದಿನದ ಸಂಬಂಧಿಕರು, ಭಾಗಾದಿಗಳು' ಎಂದು ಕೀಳಾಗಿ ಹೇಳುತ್ತಿದ್ದೆವು.

"ಭೀಮಕ್ಕಾ-ಈ ಘಟನೆಯಿಂದ ಸೋತುಹೋಗಿದ್ದಳು. ಬಡಬಡಿಕೆ-ಕನವರಿಕೆ ಹೆಚ್ಚಾಗಿಬಿಟ್ಟಿತ್ತು. ಎಲ್ಲರೂ-ಉನ್ಮಾದ ಭ್ರಮೆ ಎಂದು ಹೆಸರಿಡತೊಡಗಿದ್ದರು. ಆ ಉನ್ಮಾದದ ಭರದಲ್ಲಿ ಅವಳು ಏನೇನೋ ಕೂಗುತ್ತಿದ್ದಳಂತೆ.

" ಲಕ್ಷ್ಮೀ ಹೋಗಿಲ್ಲಾ. ಅಕ್ಯಾಕ ಹೋಗತಾಳ. ಈ ಮನ್ಯಾಗ ಸೆರೀ ಆಗ್ಯಾಳ. ಅಕಾ ಆ ಗೋಡ್ಯಾಗs ಇದ್ದಾಳ. ಬೇಕಾರ ನೋಡಿರಿ." ಇವೇ ಅವಳು ಆಡುತ್ತಿದ್ದ ಮಾತು. ನಮ್ಮ ಮನೆಯ ಮತ್ತು ಶೀನಪ್ಪನ ಮನೆಯ ನಡುವಿನ ಒಂದು ಗೋಡೆಯಲ್ಲಿ-ರಬಕವ್ವನ ಮೂರ್ತಿ ಮಾತ್ರ ಇದೆ. ಮೂಲರಾಮದೇವರು ನಮ್ಮಲ್ಲಿ-ಅಲ್ಲಾ ನಮ್ಮಲ್ಲಿ—ಅಂತಾ ಬಡಿದಾಡುವ ಉತ್ತರಾದಿಮಠ-ರಾಯರ ಮಠದವರಂತೆ—ರಬಕವ್ವನ ಮುಖ ನಮ್ಮ ಮನೆಯಲ್ಲಿ, ಬೆನ್ನು ನಿಮ್ಮ ಮನೆಯಲ್ಲಿ ಎಂದು ಇಂದಿಗೂ ನಾವು ವಾದಿಸುತ್ತಿದ್ದೇವೆ. ಇಬ್ಬರೂ ಅಮಾಸ್ಯೆಗೊಮ್ಮೆ—ಆ ಮುಖ ನಮ್ಮಲ್ಲಿದೆಯೆಂದು ಭಾವಿಸಿ ಪೂಜೆ ಪುನಸ್ಕಾರ ಮಾಡುತ್ತೇವೆ. ಈಗ ಆ ಮನೆ ನನ್ನ ತಾಬೇದಲ್ಲಿದ್ದ ಕಾರಣ ಬಡಿದಾಟದ ಪ್ರಸಂಗ ತಪ್ಪಿದೆ.

"ಭೀಮಕ್ಕ ರಾತ್ರಿಯೆಲ್ಲ ಬಡಬಡಿಸುತ್ತಿದ್ದಾಳೆ–ಆ ಮನೆಯನ್ನು ಬಿಟ್ಟು ಹೋದ ಲಕ್ಷ್ಮಿಯ ಧ್ಯಾಸದಿಂದ ಅವಳಿಗೆ ಹೀಗಾಗಿದೆ. ಆ ಬಡಬಡಿಕೆ ಶುದ್ಧ ಉನ್ಮಾದ. ಅದರಲ್ಲಿ ಯಾವ ತಥ್ಯಾಂಶವೂ ಇಲ್ಲವೆಂದು ಜನ ಆಡಿಕೊಳ್ಳು ತ್ತಿದ್ದರು. ನನ್ನ ಮನೆಯ ಪರಿಸ್ಥಿತಿಯೂ ಕೂಡ ಆ ಕಾಲದಲ್ಲಿ ಬೇತಿನದೆ. ಅಷ್ಟು ಏರಿಕೆಯದು ಇಳಿತರದ್ದು ಇರದೆ ಇತ್ತು, ಸರ್ವ ಸಾಮಾನ್ಯವಾಗಿ. ವ್ಯಾಪಾರದಲ್ಲಿಯೂ ಕೂಡ ನಾನೇನೂ ಧಾಡಸೀತನ ಮಾಡುತ್ತಿದ್ದಿಲ್ಲ. ಠರಾವಿನ ಗಿರಾಕಿ, ನಿಶ್ಚಿತ ವ್ಯಾಪಾರ. ಹೀಗಾಗಿ ನಾನು ತೀರ ಮಧ್ಯಮ ತರಗತಿಯ ಒಬ್ಬ ವ್ಯಕ್ತಿಯೆಂದೇ ಗಣಿಸಲಾಗುತ್ತದೆ. ಅದರಲ್ಲಿ ನನಗೆ ಸಮಾಧಾನವೂ ಇತ್ತು ಎನ್ನಿರಿ ಬೇಕಾದರೆ. ಶೀನಪ್ಪನ ಮನೆಯ ಅತಿ ವೈಭವ–ಅಕಸ್ಮಾತ್ ಅವನತಿ ಕಂಡ ನನಗೆ ದುಡ್ಡೆಂದರೆ ಭಯ ಭೀತಿ ಎನಿಸುತ್ತಿತ್ತು. ಚಟ್ನಿ ಭಕ್ಕರಿಗೆ ದದಾತಿಯಾಗದಿದ್ದರೆ ಸಾಕು. ಅದಕ್ಕೆ ಮಾತ್ರ ಚಕ್ರ ಬರದಿರಲಿ ಎಂದು ಬೇಡಿಕೊಳ್ಳುತ್ತಿದ್ದೆ.

"ಒಂದು ದಿನ ಸಂಜೆಯ ೮–೮॥ ಗಂಟೆಯ ಸುಮಾರಿಗೆ ಅಂಗಡಿಯಿಂದ ತಿರುಗಿ ಬರುವಾಗ ಸುದ್ದಿ ಹತ್ತಿತು: ಸೀನಪ್ಪನ ತಾಯಿಗೆ ಅತಿ ಜೇರು ಎಂದು. ದಾಯಾದವಿದ್ದರೇನಾಯಿತು ಅದನ್ನು ಯಾವ ಕಾಲಕ್ಕೂ ಸಾಧಿಸುವದೇ ಎಂದು ಭಾವಿಸಿ ಮನೆಗೆ ಹೋಗುವದಕ್ಕಿಂತ ಮುಂಚೆ ಸಹಜವಾಗಿ ಅವರ ಮನೆಯ ಕಡೆಗೆ ಹೋದೆ. ಆ ದೊಡ್ಡ ಮನೆಯ ಪಡಸಾಲೆಯ ಒಂದು ಮೂಲೆಯಲ್ಲಿ ಮಿಣಿಮಿಣಿಯೆಂದು ದೀಪ ಉರಿಯುತ್ತಿತ್ತು. ಬೆಳಕಿನ ಬದಲು–ಕತ್ತಲೆಯೇ ಹೆಚ್ಚು ರಾಹು ಹೊಡೆಯುತ್ತಿತ್ತು ಆ ದೀಪದ ಅಂಧುಕ ಬೆಳಕಿನಿಂದ.

ಪಡಸಾಲೆಯಲ್ಲಿ ದೀಪದ ಸುತ್ತಲೂ ಮನೆಯ ಮಂದಿ ಒಂದುಗೂಡಿ ಕುಳಿತಿದ್ದರು. ಶೀನಪ್ಪ, ಅವನ ಮುಪ್ಪಿನ ತಂದೆ, ದುರ್ದೈವೀ ಭೀಮಕ್ಕ, ಚಿಕ್ಕ ಮಕ್ಕಳು ಎಲ್ಲರೂ ಗುಂಪಾಗಿ ನೆರೆದಿದ್ದರು. ನನ್ನನ್ನು ಕಂಡು ಅವರಿಗೆ ಆಶ್ಚರ್ಯವೆನಿಸಿರಬೇಕು. ಶೀನಪ್ಪ ನನ್ನನ್ನು ಆದರದಿಂದಲೇ ಬರಮಾಡಿಕೊಂಡ. ಭೀಮಕ್ಕ ಒಂದು ಸಲ ನನ್ನನ್ನು ಕಣ್ಣು ತುಂಬ ನೋಡಿ— ಕಣ್ಣು ಮುಚ್ಚಿಕೊಂಡಳು. ಶೀನಪ್ಪನ ತಂದೆ–ಎಷ್ಟಾದರೂ ನನಗೆ ಹಿರಿಯರು. ಅವರಿಗೆ ಗೌರವದಿಂದ ನಮಸ್ಕರಿಸಿದೆ. ನಮ್ಮ ಘರಾಣೆಗೆ ಅವರೇ ಈಗ ಉಳಿದ ಹಿರಿ

ಯರು. ಕೈಯನ್ನೇ ತಲೆದಿಂಬಿನಂತೆ ಮಾಡಿಕೊಂಡು ಮಲಗಿದ್ದ ಅವರು ಎದ್ದು ಕುಳಿತರು. ತೀರ ಸೋತು ಹಂಣಾಗಿಪ್ಪರು. "ಬಾ ರಾಮಂಣ, ಬಾಳ ದಿನಕ ಹಾದಿ. ಇದ ನೋಡಿದೆಪಾ ಈ ಮನೀ ವೈಭವಾ. ಅಪಾ, ನಿನಗ ಶ್ರೀಮಂತಕಿ— ಬರಲಿಲ್ಲ, ಬರಲಿಲ್ಲ ಯಾಕ ಅಂತ ನೀ ಹಳಹಳಿಸಲಿಲ್ಲ-ಹೋಗ ಲಿಲ್ಲ-ಹೋತಂತ ದುಃಖಪಡಲಿಲ್ಲ. ಆ ನರಕದ ಅನುಭವ ಈಗ ಜೀವಂತನs ಅನುಭೋಗಿಸಲಿಕ್ಕೆ ಹತ್ತೀವಿ. ಮುಂದೇನವಾ ಗತಿ ಅಂತೀನಿ" ನಿಟ್ಟುಸಿರು ಬಿಟ್ಟು ಹೇಳಿದರು. ಸಾಂತ್ವನದ ಯಾವ ಮಾತು ಹೇಳಲಿ ಅವರಿಗೆ. ಅವರ ಆ ನರಕ ಜೀವನ ನೋಡುತ್ತಿದ್ದೇನೆ. ಕೈಯೆತ್ತಿ ನನ್ನದಲ್ಲವೆಂದು ಏನಾದರೂ ಸಹಾಯ ಮಾಡಿದೆನೇ— ಬಿದ್ದಾಗ ನಗುವ ಯತ್ನ ಮಾಡುತ್ತಾನೆ ಎಂಬ ಮಾತು ಬರಬಹುದು. ಬಿಟ್ಟೆನೇ— ತನ್ನ ಸೊಕ್ಕಿನಲ್ಲಿ ನಮ್ಮನ್ನು ಮರೆತು ಕಡೆಗಣಿಸಿದನೆಂಬ ಹರಲಿಯೂ ತಪ್ಪಿದ್ದಲ್ಲ. ಉಭಯ ಸಂಕಟ ನನಗೆ. ಆ ಮಾತು ಬಿಟ್ಟೇ ಕೇಳಿದೆ. "ಕಕ್ಕಿಗೆ ಹ್ಯಾಂಗ ಅದs? ಏನ ಆಗೇದ ಅಂತಾರ ಡಾಕ್ಟರರು ?"

ಶೀನಪ್ಪ ಹೇಳಿದ: "ಅದೇನು ಡಾಕ್ಟರಿಗೆ ಹಣಿಯೂ ಜಪ್ತ ಅಲ್ಲಾ. ಹಂಗ ಆಕೀಗೆ ಜಡ್ಡs ಇಲ್ಲ— ಅನ್ನು; ಬರೀ ಭ್ರಮಾ."

ಭೀಮಕ್ಕ ನಡುವೆ ಬಾಯಿ ಹಾಕಿ ತಾನೇ ಹೇಳಿದಳು. "ಶೀನೂ ಅದೂ ಭ್ರಮಾ ಅಲ್ಲಪಾ ಅಲ್ಲಾ. ಭ್ರಮಾ ಹ್ಯಾಂಗ ಆದೀತು? ಕಂಣಾರೆ ಕಾಣತೀನಿ. ಕಂಣಿಗೆ ಕಂಣ ಹಚ್ಚಿಗೊಡವಲ್ಲದು ನನ್ನ ಕಾಡೂ ಇದಿ."

"ರಾಮಂಣಾ, ಅದೇನು ಇದಿಯದನೋ ದೇವರೀ ಬಲ್ಲ. ಆಕೀಗೆ ಈ ಮನ್ಯಾಗ ದುಡ್ಡ ಅದ. ಅದು ಅಕೀ ಕಂಣಿಗೆ ಬೀಳತದಂತ. ತುಂಬಿದ ಕೊಡಾ, ಅದನ್ನ ಕಾಯೂ ಮನಸ್ಯಾ ರಾತ್ರ್ಯಾಗ ಬಂದ ಕೇಳತಾನಂತ "ಹೂಂ ಲಗೂ ಹೇಳು. ನಾ ಬೇಕೋ ಬ್ಯಾಡೋ" ಅಂತ. ನೋಡು, ಕುಬೇರನ ವೈಭವಾ ಉಂಡು ಅನುಭೋಗಿಸಿದ ಜೀವಾ ಒಲ್ಲೇ ಅಂತ ಹ್ಯಾಂಗ ಅಂದಾಳು. ನಿನ್ನೆ ಅಮಾವಾಸಿ ಅದರ ಕಾಟ ಒಂದಿಷ್ಟು ಹೆಚ್ಚು ಆತು. ಕಾಯೀ ಕರ್ಪೂರಾ ಎಲ್ಲ ಆತು ರಬಕವ್ವಗ. ಅಂದ್ರೂ ರಾತ್ರಿ ಏನ ಕಂಣಿಗೆ ಕಂಣ ಹಚ್ಚಲಿಲ್ಲಾ ಪ್ರಾಣಿ. ಒಂದೇಸವನ ಕೂಗೂದು. "ಬೇಕೇನು ಹೇಳು, ಬೇಕೇನು ಹೇಳು, ಬಾ ಅಂತ

ಒಪಕೋ." ಇದೇ ಬಡಬಡಿಕಿ. ಹುಡುಗರು ಹುಪ್ಪಡಿ ಅಂಜಿ ಮುದ್ದಿ ಆಗ್ಯಾವ ಈ ಮನೀ ಬಿಟ್ಟೇನs ಬ್ಯಾರೀ ಕಡೆ ಇರೂ ತ್ರಾಣಯಿಲ್ಲ. ಮಾರೀನ್ಸ-ಅನಿಷ್ಟ ಮನೀ ಯಾರ ತಗೋಬೇಕು? ನನಗ ದಿಕ್ಕ ತಪ್ಪಿಧಾಂಗ ಆಗೇದ."

ಬರಲಿರುವ ಈ ಭಾಗ್ಯ, ಕೇಳುವ ಮಾತಿನಿಂದ ನನಗೂ ಆಶ್ಚರ್ಯವೆನಿಸಿತು. "ನಮ್ಮ ಚರಂತೀ ಮಠದ ಅಯ್ಯಾಗೋಳಿಗೆ-ಇಂಥಾವೆಲ್ಲಾ ತಿಳೀತದಂತ. ಅವರ್ನ ಇಷ್ಟು ಕೇಳಿ ನೋಡೂಣು. ನಾಳೆ ಬೇಕಾರ ಮುಂಜಾನೇನs ಹೋಗೂಣು." ಎಂದೆ ನಾನು. ಶೀನಪ್ಪ ಆ ಮಾತಿಗೆ ಒಪ್ಪಿದ. ನಾನು-ಅವನು ಇಬ್ಬರೂ ಎದ್ದು ತಲೆಬಾಗಿಲಿನವರೆಗೆ ಬಂದೆವು. ಶೀನಪ್ಪ ನನ್ನನ್ನು ನಿಲ್ಲಿಸಿ ಹೇಳಿದ: "ರಾಮಣ್ಣಾ ಅಯ್ಯಾನಿಗೇನು ಕೇಳುವದು. ಭೀಮಕ್ಕನ ಮೈಮೇಲಿ ಸಂಚಾರವಾದಾಗ ಅದೇ ಮನುಷ್ಯ, ಕನಸಿನಲ್ಲಿ ಬರುವವ ಹೇಳಿಕೊಂಡಿದ್ದಾನೆ. ಬಲೀ ಕೊಡು, ಜೀವದ ಬಲೀ ಕೊಡು ಅಂತ ಅವಾ ಕೇಳತಾನ. ಹೆಬ್ಬಟ್ಟರಿ ಕೊಡು, ಕಿರಿಬಟ್ಟರಿ ಕೊಡು ಅಂತ. ಅದರ ಅರ್ಥ ಮಾತ್ರ ಆಗವಲ್ಲದು."

"ಅಯ್ಯಾ ಶಾಣ್ಯಾ ಇದ್ದದ್ದೇನ ಸುಳ್ಳಲ್ಲಾ. ಅಲ್ಲದs ಅಂವಗ ಇರೂ ಆಶಾನೂ ಅಷ್ಟರಾಗs ಅದs. ಟೆಂಗಿನಕಾಯೀ, ಐದ ದುಡ್ಡು ಆದ್ರs ಆತ ಅವನ ದಕ್ಷಿಣಿ. ನಮಗ ಮಾತು ಪಟಾಸಿದರ ಸಾಕು. ಇಲ್ಲದಿದ್ದರ ಇಲ್ಲ. ಒಟ್ಟ ನಾಕ ಅಣೇದ ಪ್ರಶ್ನಿ. ನಾಳೆ ಮುಂಜಾನೆ ಲಗೂನs ಹೋಗೂಣು. ಒಮ್ಮೆ ನಿಕಾಲೆ ಆಗಲಿ ಇದರ ಕಂತ್ರಾಟs."

ಗೊತ್ತಾದಂತೆ ನಾವಿಬ್ಬರೂ ಮರುದಿನ ಅಯ್ಯನವರ ಮಠಕ್ಕೆ ಹೋದೆವು. ಶೀನಪ್ಪನ ಅವಸತಿಯ ಬಗ್ಗೆ ಅಯ್ಯಾನಿಗೂ ಬಹಳ ಕೆಡಕೆನಿಸಿತ್ತು. ಅದನ್ನು ಪ್ರಾಸ್ತಾವಿಕವಾಗಿ ಮುಗಿಸಿ, ಅವನು ನಾವು ಬಂದ ಕೆಲಸದ ಕಾರಣವನ್ನು ತಾನಾಗಿಯೇ ಒಡೆನುಡಿದ. ೫-೧೦ ನಿಮಿಷ ಸುಮ್ಮನೇ ಕುಳಿತು ನಂತರ ಹೇಳಿದ: "ಶೀನಪ್ಪಾ, ದುಡ್ಡ ದುಡ್ಡ ಅದs. ಒಂದು ದೊಡ್ಡ ತುಂಬಿದ ಕೊಡಾ. ಬರೀ ಭಂಗಾರದ ನಾಣ್ಯ! ನಿನ್ನ ಮನೀ-ರಾಮಣ್ಣನ ಮನೀ ನಡುವಿನ ಗ್ವಾಡ್ಯಾಗ-ಅಡ್ಡಗ್ವಾಡೀ ಮ್ಯಾಲಿನ ದೀಪಧಾಂಗ-ಕೂತsದ. ಆದರ ಕೇಳೂ ಬಲೀ-ನೀ ಅಂಥಾಂಗ ಹೆಬ್ಬಟ್ಟು ಕಿರಬಟ್ಟು-ಭಾಳ ದೊಡ್ಡದು. ನಿಮ್ಮ ಅವ್ವಾ ತಾನಾಗಿ ಕೊಡೂ ಬಲೀ ಅಲ್ಲಾ ಅದು. ಹೆಬ್ಬಟ್ಟಂದರ ನಿನ್ನ ಮುಪ್ಪಿನ ತಂದಿ; ಕಿರಬಟ್ಟಂದರ ಖುದ್ದ ನೀನs. ಯಾ ಹೆಂಗಸು ಇಂಥಾ ಕೃತಿ ಮಾಡ್ಯಾಳು.

ಮಾಡಿಕೊಂಡ ಗಂಡನ್ನ-ಹೊಟ್ಟೀಲೆ ಹುಟ್ಟಿದ ಮಗನ್ನ ಬಲೀ ಕೊಡೂದು. ಮನೀ ಹಿತದ ದಶಿಂದ ನೀ ಕಬೂಲಾದ್ರೂ- ಆ ಮಾತು ಅಕೀ ಬಾಯಲೇ ಬರಲೀ ಅಂತದ ವಿಧಿ. ಅದನ್ನ ಹ್ಯಾಂಗ ಅಕೀ ಅಡ್ಯಾಳು? ಈ ಮಾತೂ ಅಕೀಗೆ ಗೊತ್ತದ. ಆದ್ರ ಆಡದ ಸುಮ್ಮನs ಇದ್ದಾಳ. ಆ ಮನೀ ನೀ ಬಿಟ್ಟ ಬಿಡು. ಅಂದ್ರs ನಿಮ್ಮ ತಾಯಿ ಸುಧಾರಸತಾಳ." ಅಯ್ಯನಿಗೆ ಇಂಥದನ್ನು ಕಾಣುವ ದಿವ್ಯ ದೃಷ್ಟಿ-ಭೂತದೃಷ್ಟಿ ಇತ್ತೆಂದು ಜನವೇನೋ ಆಡಿಕೊಳ್ಳುತ್ತಿದ್ದರು. ಅದು ಇದೀಗ ನಿದರ್ಶನಕ್ಕೆ ಬಂದಿತು. ನಾವು ಅಯ್ಯನ ನಿರೋಪ ತೆಗೆದುಕೊಂಡು ಹೊರಟು ಬಂದೆವು. ಶೀನಪ್ಪ ನೇರವಾಗಿ ತನ್ನ ಮನೆಗೆ ಹೋಗದೆ-ನಮ್ಮ ಮನೆಗೆ ಬಂದ. ನನ್ನೆರಡೂ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಹೇಳಿದ: "ರಾಮಣ್ಣಾ, ಈ ನರಕದಿಂದ ಪಾರಾಗಲಿಕ್ಕೆ ಒಂದೇ ಹಾದಿ. ನೀ ದೊಡ್ಡ ಮನಸ್ಸಮಾಡಿ ಆ ಮನೀ ಖರೀದಿಗೆ ತಗೊ. ಆದರ ಪುಣ್ಯಾ ಎಂದೋ ತೀರೀದ. ಇಂಥಾ ಮುಪ್ಪಿನ ಕಾಲದಾಗ ಹಡದ ತಂದಿ ತಾಯ್ಗೆ ದುಃಖ ಕೊಡಲಾರೆ. ಎಲ್ಲರೆ ಹೊಗದೇಶಿ ಹೋಗತೇನಿ, ಆ ದುಡ್ಡಿನ ಪೀಡಾ ಬಿಟ್ಟರ ಸಾಕಂತ. ಆ ಕೊಡಾ ಅದರ ವೈಭವಾ ನನಗೇನೂ ಬ್ಯಾಡಾ. ಸಾಯೂ ಮುಂದ ರವರವ ನರಕ ತಂದಾ ಮಗಾ ಅನೂ ಶಾಪ ಬ್ಯಾಡ. ನನ್ನ ಬೆನ್ನಿಗೆ ಹುಡುಗರೂ ಹುಪ್ಪಡಿ ನಾ ಇರೂತನಕಾ ಬಾಳ್ಯಾವು. ನಶೀಬನs ಖಟ್ಟಿಸಿದ ಮ್ಯಾಲs ಯಾತರಾಗ ಏನ ಉಳದೀತು. ನಾ ಏನ ಮಾಡೂಹಾಂಗ ಇದ್ದೀನಿ. ವಿಧಿ ವಿರುದ್ಧ ಆ ಮನೀ ನನಗ ಬರಷಣ ಆದ್ರೂ—ನಿನಗೆ ಆಗೂ ವಂಶಿಲ್ಲ. ಇಂದs ನನಗ ಅದರ ಕಿಮ್ಮತ್ತೂ ಬ್ಯಾಡಾs. ತಿಂಗಳಾ ನೂರಿನ್ನೂರ ಕೊಟ್ಟರೂ ನನ್ನ ಗಾದೀ ಸಾಗೂ ಹಾಂಗ ಅದs. ಯಾವದರೇ ಒಂದು ಹಳ್ಯಾಗ ಹೋಗಿ ಇದ್ದ ಬಿಡತೀನಿ. ಇಂಥಾ ಕೆಟ್ಟ ಕಾಲದಾಗ ಇಬ್ಬರ ತಮ್ಮಂದಿರು ಕೈಬಿಟ್ರೂ, ನೀ ಅಂಣನ್ಹಾಂಗ ಇದ್ದೀ-ನೀನರ ನಮ್ಮನ್ನ ಉದ್ಧಾರ ಮಾಡು. ಆ ಪುಣ್ಯಾ ನಿನಗ ಬರಲಿ."

ಶೀನಪ್ಪನ ಆರ್ತ, ದುಃಖದ ಅರಿವು ನನಗಾಗಿತ್ತು. ಅವನಿಗೆ ನೆರವಾಗುವದೊಂದೇ ನನ್ನ ಉದ್ದೇಶ. ಮನೆಯನ್ನು ಖರೀದಿಗೆ ತೆಗೆದುಕೊಂಡರೆ ಜನ ಏನೆಂದಾರು-ಭೀಮಕ್ಕ ಎಷ್ಟು ನೊಂದುಕೊಂಡಾಳು ? ಆ ಮನೆಯ ಮಕ್ಕಳ ಶಾಪ ಎಷ್ಟು ಹತ್ತೀತು. ನಾನು ಅದೆಲ್ಲವನ್ನೂ ವಿಚಾರಿಸಿ ಶೀನಪ್ಪನಿಗೆ ಹೇಳಿದೆ:

"ಮಾರಾಟದ ವಿಚಾರ ಬೇಡ. ಆ ಮನೆ ನಿನ್ನ ಹೆಸರಿನಲ್ಲಿಯೇ ಇರಲಿ. ಕುಂದಗೋಳದಿಂದ ನಾಲ್ಕು ಮೈಲಿನ ಅಂತರದಲ್ಲಿ ನನ್ನ ತೋಟ ಇದೆ. ಅದರಲ್ಲಿ ಒಂದು ಚಿಕ್ಕ ಮನೆಯೂ ಇದೆ. ಬೇಕಾದರೆ ಅಲ್ಲಿ ನೀನೇ ಮಾಲಕನಾಗಿ ಇದ್ದು ಬಿಡು. ಮನೆಯ ಬೆಲೆಯನ್ನು ನೀನು ಮಾಡುವದು ಬೇಡ–ತೋಟದ್ದು ನಾನು ಮಾಡುವದಿಲ್ಲ. ಅದು ಪರಸ್ಪರ–ವಿಶ್ವಾಸ. ನಿನಗೆ ಬೇಕಾದಾಗ ಬಂದರೂ ನಿನ್ನ ಮನೆ ನಿನಗಿದ್ದದ್ದೇ. ಹಾಗೆ ಬೇಕಾದರೆ ಬರೆದೂ ಕೊಡುತ್ತೇನೆ." ಗಂಡನ, ಮಗನ ಬಲಿಯಾಗದೆ–ಈ ನರಕದಿಂದ ಪಾರಾದೆನೆಂಬ ಸಮಾಧಾನ ಭೀಮಕ್ಕನಿಗೆ, ಮಗನ ಕೈಯ ಕಾಕಪಿಂಡ ಪಡೆಯುವ ಭಾಗ್ಯ ದೊರಕಿತೆಂದು ಶೀನಪ್ಪನ ತಂದೆಗೆ ಸಮಾಧಾನ. ಅಲ್ಲಿಯ ವೈಭವಕ್ಕಲ್ಲದಿದ್ದರೂ–ಆ ಮನೆಯ ಋಣ ತೀರಿತಲ್ಲ–ತಾನು ಜೀವಂತನಿರುವಾಗಲೇ ಅಲ್ಲಿ ದೀಪ ಹಚ್ಚುವವರಿಗೂ ದಿಕ್ಕಿಲ್ಲದಂತೆ ಆಯಿತಲ್ಲವೆಂದು ಮಾತ್ರ ಶೀನಪ್ಪ ನೊಂದುಕೊಂಡ. ಒಂದು ದಿನ ಬೆಳಗು ಹರಿಯುವದರೊಳಗಾಗಿ ಈ ನಿರ್ಗತಿಕ ಸಂಸಾರ–ನನ್ನ ತೋಟದಲ್ಲಿಯ ಮನೆಗೆ ವಸತಿ ಹೋಯಿತು. ಅದರ ಕಾರಣ ಶೀನಪ್ಪ, ಅವನ ತಂದೆ, ತಾಯಿ, ಅಯ್ಯ, ನನ್ನ ವಿನಾ ಮಾತ್ರ ಯಾರಿಗೂ ಗೊತ್ತಿಲ್ಲ. ಆ ಮನೆ ಇನ್ನೂ ನನ್ನ ತಾಬೇದಲ್ಲಿಯೇ ಇದೆ."

"ಶೀನಪ್ಪ, ಅವರ ತಂದೆ-ತಾಯಿ ಎಲ್ಲಿ? ಇನ್ನೂ ಜೀವಂತರಾಗಿದ್ದಾರೆಯೋ" ಎಂದು ಕೇಳಿದೆ.

"ಛೇ. ಅವರೆಲ್ಲ ಎಂದೋ ಅಳಿದರು. ಅವರು ಮನೆಬಿಟ್ಟು ಹೋದದ್ದೇ ಸರಿ. ಅವರಿಗೆ ಸಮಾಧಾನವೆನಿಸಿರಬೇಕೆಂದಿದ್ದೆ. ಅದು ಸ್ಮಶಾನ ಸಮಾಧಾನ. ತೋಟದ ಆ ಮನೆಯಲ್ಲಿ ಇದ್ದಷ್ಟು ದಿನವೂ ಸೂತಕದವರಂತೆ ದಿನ ಕಳೆದರು. ಶೀನಪ್ಪನ ಬೀಗ—ಹೆಂಡತಿಯ ಅಣ್ಣ—ಅವನ ಮಕ್ಕಳನ್ನು ಮಾತ್ರ ಕರೆದುಕೊಂಡು ಹೋದ—ಮಕ್ಕಳಾದರೂ ಹಾದಿಗೆ ಅನ್ನಕ್ಕ ಹತ್ತಲೆಂದು. ೧೦–೧೫ ವರುಷದ ಅವಧಿಯಲ್ಲಿ–ಶೀನಪ್ಪ–ಅವನ ತಂದೆ ತಾಯಿ ತೀರಿಕೊಂಡು ಬಿಟ್ಟರು. ಇದ್ದಷ್ಟು ದಿನ ಬಹಳ ಕಷ್ಟಬಟ್ಟರು. ಶೀನಪ್ಪ ಆ ಮನೆಯನ್ನು ನನ್ನ ಹೆಸರಿಗೆ ಬರೆಸಿಬಿಟ್ಟಿದ್ದ ರಜಿಸ್ಟ್ರಾರ ಕಚೇರಿಯಲ್ಲಿ. ತೋಟದ ಮೇಲೂ ಅಧಿಕಾರವಿಲ್ಲವೆಂದು ಮೃತ್ಯುಪತ್ರ ಮಾಡಿಬಿಟ್ಟಿದ್ದ. ಅಂಥ ದೊಡ್ಡ ಜೀವನ ಸಿಗುವದು ದುರ್ಲಭ. ಅವನು ದೇವತಾ ಮನುಷ್ಯ."

"ಅದಾಯಿತಲ್ಲ. ಆ ಕೊಡದ ವಿಚಾರವೇನು ? ಅದು ಅಲ್ಲೇ ಇದೆಯೋ? "

" ಅದು ಮುಂದೆ ಎಷ್ಟೋ ದಿನ ಅಲ್ಲಿತ್ತು. ಭೀಮಾಕ್ಕನಂತೆ ನನಗೂ ಕನಸು. ಆದರೆ ಬಲಿ ಬೇಡುತ್ತಿರಲಿಲ್ಲ ನಾನು ಬರುತ್ತೇನೆ–ನಾನು ಬರುತ್ತೇನೆ ಎಂದು ಕೇಳೇ ಕೇಳುತ್ತಿತ್ತು. ಸೀನಪ್ಪನಿಗೆ ದೊರೆಯುವ ಸೌಭಾಗ್ಯ ನಾನೇಕೆ ಅನುಭೋಗಿಸಲೆಂದು ಕತವಾಯಿಸಿ ಒಂದು ದಿನ ಹೇಳಿಬಿಟ್ಟೆ: ನೀನು ಬರ ಬೇಡ ! ಬಂದರೂ ನಾನು ಸ್ವೀಕರಿಸುವದಿಲ್ಲವೆಂದು. ಅಂದಿನಿಂದ ಆ ಕೊಡ ಸರಿಯುತ್ತ ಸರಿಯುತ್ತ–ನಮ್ಮ ಗೋಡೆಯಿಂದ ದೂರವಾಗಿ ಮಗ್ಗಲು ಮನೆಯ ಸೆಟ್ಟರಲ್ಲಿ ಪ್ರಕಟವಾಯಿತು. ನನಗೆ ಅದರ ಸಹವಾಸ—ಸಂಪರ್ಕ ಬೇಡ ವಾಗಿತ್ತು. ಶೀನಪ್ಪ ಅವನ ತಂದೆ-ತಾಯಿ ಜೀವಂತವಿರುವಾಗಲೇ ಇದು ನಡೆ ದಿತ್ತು. ಅವರು ಇದರಿಂದ ಬಹಳ ನೊಂದುಕೊಂಡರು ತಾವು ಅನುಭವಿಸಿದ ಸುಖ ನನಗಾದರೂ ದೊರಕಬೇಕಾಗಿತ್ತೆಂದು ಕಳವಳಪಟ್ಟರು. ಕೊನೆಗೂ ನನ್ನ ಋಣ ಬೇಡವೆಂದು ಆ ಮನೆ, ತೋಟ, ನನ್ನ ಹೆಸರಿನಲ್ಲಿ ಮಾಡಿಯೇ ತೀರಿಕೊಂಡರು. ಪಾಪ! ನಿರ್ಗತಿಕಳಾದ ಸೀನಪ್ಪನ ಹೆಂಡತಿ ಅಣ್ಣನ ಮನೆ ಸೇರಿಕೊಂಡಳು. ನೋಡಿರಿ, ಅನಂತರ ಅವರ ಸುದ್ದಿಯೇ ಇಲ್ಲ. ಮಕ್ಕಳು ಮರಿ ಗಾಳಿ-ಗರಿಯಾಗಿ ಎಲ್ಲಿ ಅಲೆಯುತ್ತವೆಯೋ ಏನೋ ? ಅವರ ಪತ್ತೆ ಮಾಡಲು ಪ್ರಯತ್ನಿಸಿದೆ. ಆದರೇನೂ ಲಾಭವಾಗಲಿಲ್ಲ. ಮಕ್ಕಳಿದ್ದರೆ ೨೫-೩೦ ವರುಷದವರಿರಬೇಕು. ಹಿರಿಯ ಹುಡುಗ—ಊರು ಬಿಟ್ಟಾಗ ೭–೮ ವರುಷ ದವನಿದ್ದ. ನನ್ನ ಎರಡನೆಯ ಮಗನದೂ ಅವನದೂ ಸುಮ-ಸುಮಾರು ಅದೇ ವಯಸ್ಸು. ಓರಿಗೆಯವರು. "

ಈ ಕಥನದಿಂದ ಅವರಿಗೆ ಆ ಅಳಿದು ಹೋದ ಕಾಲ–ಚಿತ್ರ ಕಣ್ಣು ಮುಂದೆ ಕಟ್ಟಿರಬೇಕು. ಆ ಅಗತಿಕ ಕುಟುಂಬ ಪಟ್ಟ ಪಾಡಿನ ದಾರುಣ ಕತೆ ಮರುಕಳಿಸಿರಬೇಕು. ಎಷ್ಟೋಹೊತ್ತು ವಿಚಾರತಂದ್ರಿಯಲ್ಲಿ ಕುಳಿತವರಂತೆ ಕಣ್ಣು ಮುಚ್ಚಿಕೊಂಡು ಕುಳಿತುಬಿಟ್ಟರು. ತೀರ ನಿಶ್ಚಲರಾಗಿದ್ದರು. ಆ ವಿಶಾಲ—ಪ್ರಶಾಂತ ಮುಖದಲ್ಲಿ ನನಗೆ ಯಾವುದೋ ದೈವಿಕತೇಜ ಶುಕ್ರ ತಾರೆಯಂತೆ ಹೊಳೆಯುತ್ತಿರುವದು ಕಂಡು ಬಂದಿತು. ಕೈ ಗಡಿಯಾರ

ನೋಡಿಕೊಂಡೆ. ಬೆಳಗಿನ ೩-೩೦ ಕ್ಕೆ ಗಾಡಿ ಕಿರ್ಲೋಸ್ಕರ ವಾಡಿಯನ್ನು ಸಮೀಪಿಸುತ್ತಿತ್ತು. ಕೂಡಲಾರದೆ ಕೂತಿದ್ದೆ. ಹರಿಹರದ ಆಸೆಬಿಟ್ಟು ಇಲ್ಲೇ ಇಳಿದು ಬಿಡಬೇಕು. ಈ ತೇಜೋವಲಯದ ಜೊತೆಗೆ ಸಹಪ್ರವಾಸ ಮಾಡುವ ಶಕ್ತಿಯೂ ನನ್ನಲ್ಲಿ ಉಳಿದಿರಲಿಲ್ಲ. ಅವರು ಯಾರ ಮನೆಯ ಕತೆಯನ್ನು ಹೇಳಿದರು ? ಯಾರ ಬಗ್ಗೆ ಇಂಥ ದಿವ್ಯತ್ಯಾಗಮಾಡಿದರು ? ಅವರನ್ನು ಯಾವ ಮುಖದಿಂದ ಸಂಧಿಸುವದು ? ಚಟ್ಟನೆದ್ದು ಹಾಸಿಗೆ ಸುತ್ತಿದೆ. ಕೋಟು ಹಾಕಿಕೊಂಡೆ. ಅಷ್ಟು ಹೊತ್ತಿಗೆ ಅವರಿಗೂ ಎಚ್ಚರ ತಿಳಿದಿತ್ತು. ನನ್ನ ಚಲನ-ವಲನ ಕಂಡು ಇದೇನು ಹರಿಹರವೇ—ಯಾಕೆ ಗಡಿಬಿಡಿ ? ಗಂಟೆ ಎಷ್ಟು ? ಎಂದರು.

“ಇದು ನಮ್ಮ ಕಂಪನಿಯ ಮುಖ್ಯ ಕಚೇರಿ. ಅಧಿಕಾರಿಗಳನ್ನು ಕಂಡು-ಸಂಜೆಯ Expressಗೆ ಬರುತ್ತೇನೆ. ಒಂದಿಷ್ಟು ಕೆಲಸವೂ ಇದೆ. ನಿಮಗೆ ರಾತ್ರಿಯ ನಿದ್ದೆ ಕೆಡಿಸಿದೆ. ಕ್ಷಮಿಸಬೇಕು.”

“ಅದೇನು ಕ್ಷಮಿಸುವದು ? ಯಾರು ಯಾರಿಗಾದರೂ ಇಂಥ ಆತ್ಮೀಯ ಕಥೆ ಹೇಳುತ್ತಾರೆಯೋ ? ನಿಮ್ಮನ್ನು ಕಂಡೆ; ಹೇಳಬೇಕೆನ್ನಿಸಿತು. ಅದು ಯಾಕೋ ಗೊತ್ತಿಲ್ಲ ನೋಡಿರಿ. ನೋಡಿದೊಡನೆ ಆತ್ಮೀಯತೆ ಎನ್ನಿಸಿತು. ನೀವೂ ಆದರದಿಂದ ಸ್ಥಳಕೊಟ್ಟಿರಿ. ಮಾತಿಗೆ ಮಾತು ಬಂದಿತು. ಅನುಭವಪಟ್ಟ ಕತೆ. ಅದನ್ನು ಮರೆಯುವದು ಸಾಧ್ಯವೆ ? ಹೇಳಿದೆ.”

ಕಿರ್ಲೋಸ್ಕರವಾಡಿ ನಿಲ್ದಾಣದಲ್ಲಿ ಗಾಡಿ ನಿಂತಿತು. ಸಾಮಾನು ಇಳಿಸಿಕೊಂಡೆ-ಕಿಡಕಿಯಲ್ಲಿ ಬಾಗಿ ಆ ಹಿರಿಯರು ನನ್ನ ನಿರೋಪವನ್ನು ತೆಗೆದುಕೊಳ್ಳುವವರು. ನನ್ನೆರಡೂ ಕೈಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಗಟ್ಟಿಯಾಗಿ ಅದುಮುತ್ತ ಕೇಳಿದರು: “ಏನು? ತಾವು ಹೆಸರು-ದೆಸೆ-ವಿಳಾಸ ತಿಳಿಸಲಿಲ್ಲವಲ್ಲ? ಮಾತಿನ ಭರದಲ್ಲಿ ನಾನೂ ಕೇಳಲಿಲ್ಲ. ಪರಿಚಯ ಇಷ್ಟಕ್ಕೆ ಮುಗಿಯಬಾರದಲ್ಲ.”

ನನಗೆ ಏನೋ ಹೇಳುವ ಆತುರ. ಗಾರ್ಡನ ಸೀಟಿಯಾಯಿತು. ಗಾಡಿಯೂ ಕೂಗಿತು. ಇನ್ನೇನು ಗಾಡಿ ಹೊರಟಿತು. ಅವರೂ ಹೋಗುತ್ತಾರೆ. ಮುಂದೆ ಸಾಗುವ ಗಾಡಿಯ ಜೊತೆಗೆ ನಾನೂ ಓಡುತ್ತ ಹೇಳಿದೆ: “ನಾನು—

ನಾನು ನಿಮ್ಮ ಕಥೆಯ ದುರ್ದೈವೀ ಶ್ರೋತಾ—ಬೇರೆ ಯಾರೂ ಅಲ್ಲ—ಶೀನಪ್ಪನ ಹಿರಿಯಮಗ ರಂಗ—ಕ್ಷಮಿಸಿರಿ." ಎಂದು. ಅವರ ಕೈ ಇನ್ನೂ ನನ್ನ ಕೈಯಲ್ಲಿರುವಾಗಲೇ ಗಾಡಿ ಧಾವಿಸಿ-ಅವರನ್ನು ನನ್ನಿಂದ ಅಗಲಿಸಿ ಕೊಸರಿಕೊಂಡು ಹೋಯಿತು. ಕಿಟಕಿಯಿಂದ ಅರ್ಧ ದೇಹ ಹೊರಗ್ಗೆ ತೆಗೆದು ಅವರು ಕೂಗುತ್ತಿದ್ದರು:

" ರಂಗಾ—ರಂಗಣ್ಣಾ............ "

ಬೀಸಿಬಂದ ಗಾಳಿಯಲ್ಲಿ ಆ ಕೂಗು ಮಾಯವಾದರೂ—ಅವರ ಆ ನೋಟ-ಕೂಗಿನ ಆರ್ತವಾಣಿ ನಿರಂತರವಾಗಿ ಇನ್ನೂ ಕೇಳುತ್ತಿದೆ.

# ಒಂದೇ ದೇಟಿನ ಕಾಯಿಗಳು

> ಒಂದೇ ದೇಟಿನ ಕಾಯಿಗಳು
> ಎಲ್ಲಾ । ಒಂದೇ ದೇಟಿನ ಹೂವುಗಳು
> ಸಂಪ್ರೀತಿಯ ಸುಶಿಲರು । ರೊಟ್ಟಿನ ರಕ್ಕಸರು ।
> ಎಲ್ಲಾs । ಎಲ್ಲಾss । ಎಲ್ಲಾsss । ಒಂದೇ ದೇಟಿನ ಕಾಯಿಗಳು ''
>
> —ಮಧುರಚೆನ್ನ

೧

ನಾಡಗೌಡ ಅಪ್ಪಣ್ಣಪ್ಪ ಎಂಬತ್ತು ವರುಷದ ಪೂರ್ಣ ಜೀವನವನ್ನು ಬಾಳಿ ಮೊನ್ನೆ ಮೊನ್ನೆ ಕಾಲವಶರಾದರು. ಮೊನ್ನೆಯೆಂದರೂ ೫-೬ ವರುಷವಾಗಿರಬೇಕು. ಅವರು ' ಜೀವೇಮ ಶರದಃ ಶತಂ ' ಎಂಬ ಮಂತ್ರದ ಗಾಯಿತ್ರಿಯನ್ನು ಬಾಯಲ್ಲಿ ಗುಣಗುಣಿಸುತ್ತಲೇ ಅಖಂಡ ಶತಮಾನದ ಆಯುಷ್ಯವನ್ನು ಬದುಕಿ ಬಾಳುವ ಪಣತೊಟ್ಟು ಅವತರಿಸಿರಬೇಕು. ನಮ್ಮೂರಿನ ಇತಿಹಾಸದಲ್ಲೇ ಇಷ್ಟು ದೀರ್ಘಾವಧಿ ಬದುಕಿ ಜೀವನ ಮಾಡಿದವರು ಬೇರೆ ಯಾರೂ ಇರಲಿಲ್ಲ. ಇಂಥ ಐತಿಹಾಸಿಕ ಮಹಾಜೀವಿಯ ಅವಸಾನ ಸಮಾಪ್ತಿಯಾದುದಕ್ಕೆ ಜನ ಹಳಹಳಿಸಿ ಊರಿಗೆ ಊರೇ ನೆರೆದು ಅಂತ್ಯಕ್ರಿಯೆಯಲ್ಲಿ ಭಾಗಿಯಾಗುವ ಪುಣ್ಯಪಡೆಯಿತು. ಅವರು ಗತಿಸಿ ೫-೬ ವರುಷವಾದರೂ ತೀರ ಮೊನ್ನೆ ಮೊನ್ನೆ ಕಣ್ಮರೆಯಾದಂತೆ ಭಾಸವಾಗುತ್ತಿದೆ.

ಅವರಿಗೆ ಮೂರು ಜನ ಮಕ್ಕಳು. ಹಿರಿಯಾಕೆ ಭಾಗವ್ವ, ಅವಳ ಬೆನ್ನ ಮೇಲೆ ರಾಘಣ್ಣ, ಅವನ ತರುವಾಯ ಕಿರಿಯವಳು—ರಿಂದಕ್ಕ. ರಿಂದಕ್ಕ ೫-೬ ತಿಂಗಳ ಕೂಸಿರುವಾಗಲೇ ಅಪ್ಪಣ್ಣಪ್ಪನವರ ಕುಟುಂಬ ಗಂಡನ ಮುಂದೆಯೇ ಕಂಣು ಮುಚ್ಚಿದ ಪುಣ್ಯ ಪಡೆಯಿತು. ತಾಯಿಯಿಲ್ಲದ ತಬ್ಬಲಿಗಳನ್ನು ಅಪ್ಪಣ್ಣಪ್ಪ ಸವತಿಯ ಕೈಗೆ ಕೊಡಬಯಸದೆ-ಹೇಗೋ ದೊಡ್ಡವರನ್ನಾಗಿ ಮಾಡಿ, ಮದುವೆ-ಮುಂಜಿವೆ ಒಗೆ ಹರಿಸಿದ್ದರು. ಆದರೆ ಅವರ ರತ್ನದ್ವಯ ಹೆಂಣುಸಂತಾನ ತಾಳಿಯು ಪುಣ್ಯಕ್ಕೆ ಮದುವೆಯಾದ ವರುಷೆರಡು

ವರುಷದಲ್ಲಿಯೇ ಎರವಾಗಿ-ನಿಃಸ್ಸಂತಾನವಾಗ—"ಓ ಲಕ್ಷ್ಮಣಾ" ಎಂದು ಹಡೆದ ಮನೆಯು ನೆರಳಿಗೆ ಆಶ್ರಯಪಡೆದಿತು. ಅತ್ತ ಪಡೆದ ಗಂಡನ ಸೌಭಾಗ್ಯವಿಲ್ಲ-ಇತ್ತ ಹಡೆದ ತಾಯಿಯ ಆಸರವಿಲ್ಲ. ವಿಧುರನಾದ ಅಪ್ಪಣ್ಣಪ್ಪ ಮಕ್ಕಳ ವಿಧಿಗೆ, ತನ್ನ ದುರ್ದೈವಕ್ಕೆ ನೊಂದು ನಿರ್ಗತಿಕರಾದ ಮಕ್ಕಳಿಗೆ ತಾಯಿ-ತಂದೆ ತಾನೇ ತಾನಾಗಿ ಸಾಕಿ ಸಲಹುತ್ತಿದ್ದ. ಅವನ ಆಸರೆಯ ಆಶೆಯ ಮೇಲೆ ಈ ಜೀವ ಬದುಕಿಕೊಂಡಿದ್ದವು. ಅಲ್ಲದೆ ನಾಡಗೌಡರ ಕುಬೇರ ಸಂಪತ್ತಿನ ತುಂಬಿದ ಬಂಡಿಗೆ ಈ ಎರಡು ಬರಡು ಜೀವನಗಳೇನು ಹೊರದ ಭಾರವೇ ?

ಮನೆಯ ಒಳ ಆಡಳಿತವನ್ನು ತಮ್ಮದೇ ಎನ್ನುವ ವಿಶ್ವಾಸದಿಂದ ಸಾಗಿಸುತ್ತಿದ್ದ ಎರಡು ಪುಕ್ಕಟೆ ಗಿರಾಕಿಗಳು ಒಂದು ಹೊತ್ತಿನ ಊಟದ ಋಣದಲ್ಲಿ ಸಿಕ್ಕಿರುವಾಗ ರಾಘಂಣನ ಹೆಂಡತಿ ಜಾನಕಿಗಾದರೂ ಇವುಗಳಿಂದ ಬೇಸರವೇಕೆನಿಸಬೇಕು ? ಬಸಿರು-ಬಾಣಂತಿತನ, ಹಬ್ಬ-ಹರಿದಿನಗಳಲ್ಲಿ ದನದಂತೆ ದೇಹ ತೇಯುವ ಈ ದಿಂಡೆಯರಿರುವಾಗ ಜಾನಕಿಗೆ ನಾಡಗೌಡತಿಯೆಂದು ಅಭಿಮಾನದಿಂದ-ದರ್ಪದಿಂದ ಮೂಗು ಮೇಲೆತ್ತಿ ಊರತುಂಬ ಅಲೆಯಲು ಅವಕಾಶದೊರೆಯುತ್ತಿತ್ತು. ಅಪ್ಪಣ್ಣಪ್ಪನ ಜೀವಮಾನದುದ್ದಕ್ಕೂ ಜೋಳದ ಪಾಳಿಗೆ ಎರಡು ಬಗೆಯದೆ ಈ ಜೀವದ್ವಯುಗಳು ಹಗಲಿರುಳೆನ್ನದೆ ದುಡಿಯುತ್ತಿದ್ದವು. ಅವಕ್ಕೇನು ಅರಿವೆ-ಅಂಚಡಿ, ವಸ್ತ್ರ-ಒಡವೆಯ ಆಡಂಬರ ಬೇಕೇ? ಊಟದಲ್ಲಿ ಸವಿ-ಸಪ್ಪಗಿನ ರುಚಿ ವೈಚಿತ್ರ್ಯ ಬೇಕೇ? ವಿಧಿ ಉಡಿಯಲ್ಲಿ ಕಟ್ಟಿದ ಬೆಂಕಿಯನ್ನು ತಾಳ್ಮೆಯಿಂದ ಧಾರಣಮಾಡಿ, ಬಾಳಿನ ಮುಳ್ಳು ದಾರಿಯನ್ನು ಅವು ತುಳಿಯುತ್ತಲಿದ್ದವು. ಭಾಗವ್ವನಿಗೆ ಒಂದಿಷ್ಟು ಪೋಟಿಗ ಬರುತ್ತಿತ್ತು. ಅಲ್ಲದೆ ಅವಳು ಈ ಮನೆಯಲ್ಲಿ ಹಿರಿಯವಳಾಗಿ, ಜಾನಕಿಯ ಕಿರಿ ವಯಸ್ಸಿನ ಲಾಭಪಡೆದು, ಅಧಿಕಾರ ಸೂತ್ರ ಆಗೀಗ ಚಲಾಯಿಸಿ ಕಳ್ಳಗಂಟನ್ನೂ ಮಾಡಿಕೊಂಡಿದ್ದಳು.

ಅಪ್ಪಣ್ಣಪ್ಪ ಜೀವಂತನಿರುವ ಮಟ್ಟಿಗೂ ರಾಘಂಣನ ಕೈಯಲ್ಲಿ ಅಧಿಕಾರ ಸೂತ್ರ ಬರದೆ, ಅವನು ಯುವರಾಜ ಪಟ್ಟದಲ್ಲಿ ಎಂಣೆಯ ಗುಂಡಿಯಾಗಿಯೇ ಉಳಿಯಬೇಕಾಯಿತು. ಮನೆಯ ಯಜಮಾನ ಅರುವತ್ತರ ಅಂಗಳ ದಾಟಿದ್ದರೂ ಕಾಕದೃಷ್ಟಿ ಬೀರಿ, ಸರ್ವ "ದೇಖು-ರಖಿ"ಯನ್ನು

ಆಲ್‌ಬೇಲಾಗಿ ಮಾಡುತ್ತಿದ್ದ. ಮಗನಿಗೆ ಮನೆ ನಡೆಯಿಸುವ ಶಕ್ತಿ-ಸಾಮರ್ಥ್ಯ ಬರಬೇಕೆಂದು ಮುದುಕ ಬಯಸುತ್ತಿದ್ದರೂ ಆ ಭಾರವನ್ನು ಸಂಪೂರ್ಣವಾಗಿ ಒಪ್ಪಿಸಲು ಅವನಿಗೆ ಎದೆಯಾಗುತ್ತಿದ್ದಿಲ್ಲ. ಅದು ಅವನ ದುರಾಶೆಯಲ್ಲ. ಸಾಯುವ ವರೆಗೆ ತಾನೇ ಅಧಿಕಾರ ನಡೆಯಿಸಬೇಕೆಂಬ ಹಂಬಲವೂ ಅಲ್ಲ. ಮಗನ ಮುಂಗೋಪಿ ಬುದ್ಧಿಯ ಪರಿಚಯ ಅವನಿಗೆ ಅವಗತವಿತ್ತು. ತಾಯಿ ಸತ್ತ ಮಗನೆಂದು ಅಚ್ಚೆಯಿಂದ ಬೆಳಿದು, ಓದು-ಬರೆಹಕ್ಕೆ ಪೂಜಿ ಎಳೆದು, ಊರಲ್ಲಿ ಉಂಡಾಡಿಯಾಗಿ ಅಂಡಲೆಯುವ ಬೇಜವಾಬ್ದಾರಿ ಮನುಷ್ಯನಿಗೆ ನಾಡಗೌಡಿಕೆಯ ಹಿರಿಯ ವೈಭವ ಹೇಗೆ ಒಪ್ಪಿಸಬೇಕು ? ಅದನ್ನು ನಿರ್ವಹಿಸುವ ತಾಕತ್ತೂ ಅವನಲ್ಲಿ ಇರಲಿಲ್ಲ

ಒಂದು ಸಲ ರಾಘಂಣನಿಗೆ ಮುದುಕ ಹೇಳಿದ್ದ — ಮಾವಿನ ತೋಪಿನ ಹೊಲ ಹರಗುವದಾಗಿದ್ದರೆ ನೋಡಿಕೊಂಡು ಬಾ, ಎಂದು. ಪಿತೃವಾಕ್ಯಪರಿಪಾಲನಾಶೀಲನಾದ ಮಗ ಕೂಡಲೇ ಏಳು ಗೇಣಿನ ಕುದುರೆಯ ಸವ್ವಾರನಾಗಿ ಹೊಲಕ್ಕೆ ಹೋದ. ಎಪ್ರಿಲ್ ಮೇ, ತಿಂಗಳ ರಣರಣ ಬಿಸಿಲು ಬಡಿಯುವ ದಿನದಲ್ಲಿ ಹೊಲದಲ್ಲಿ ಏನು ಮಣ್ಣು ಬಿಳಿಯಿರಬೇಕು ? ರಾಶಿ ಎಂದೋ ಮುಗಿದುಹೋಗಿತ್ತು. ಅಲ್ಲಲ್ಲಿ ಮಿಡಚಿ-ರವದೆ-ನಟ್ಟಿನ ದೊಡ್ಡ ದೊಡ್ಡ ಫಾಲಿ ಅದರ ವಿನಾ ಬೇರೆ ಏನೂ ಇರಲಿಲ್ಲ. ಹೆಸರಿಗೆ ಮಾವಿನ ತೋಪಿನ ಹೊಲವಾದರೂ ನಲವತ್ತು ಎಕರೆಯ ಆ ಭೂಮಿಯಲ್ಲಿ ಒಂದೆರಡು — ಕಡು ಬೇವಿನ ಗಿಡದ ವಿನಾ ಬೇರೊಂದು ಕಂಟಿಯೂ ಇರಲಿಲ್ಲ. ಊರಿನ ಕುರುಬ, ಸಿಂಗ ತನ್ನ ಕುರಿಮಂದೆಯನ್ನು ಹೊಲದಲ್ಲಿ ಇದ್ದು ಬಿದ್ದ ರವದೆ ಸೇವನೆಗೆ ಬಿಟ್ಟು ತಾನು ಗಿಡದ ತಂಪಿಗೆ ಗೊಂಗಡಿ ಒಗೆದು ಮಲಗಿದ್ದ. ಕುರುಬನ ಈ ಅನಧಿಕೃತ ಅವ್ಯಾಪಾರ ವ್ಯಾಪಾರದಿಂದ ರಾಘಂಣನ ಸಿಟ್ಟು ಕುದಿಯಿತು. ಯಾರ ಹೊಲ ? ಯಾರಪ್ಪಣೆಯಿಂದ ಇವನಿಲ್ಲಿ ಕುರಿ ಬಿಟ್ಟಿದ್ದಾನೆ ? ಇಡಿಯ ಕುರಿಮುಂದೆಯನ್ನು ಊರ ಕೊಂಡವಾಡೆಗೆ ತಿರುಗಿಸಿಬಿಟ್ಟ. ನೂರಿನ್ನೂರು ಕುರಿ. ಕುರುಬ ನಿಂಗನಿಗೆ ಅದೇ ಜೀವನಾಧಾರ. ಊರಿನ ನಾಡಗೌಡರೇ ಅವನ ಹೊಟ್ಟೆಗೆ ಹೊಡೆದರೆ ಬೇರೆ ಯಾರು ಬದುಕಿಸಬೇಕು ? ನಿಂಗ ಗ್ರಾಮ ಪಂಚಾನನರಲ್ಲಿ ಮೊರೆಯಿಟ್ಟು ಬೇಡಿಕೊಂಡ. ಕರಣಿಕ-ಪೋಲಿಸ ಗೌಡ ಬಂದು ಅಪ್ಪಣ್ಣಪ್ಪನಿಗೆ ಈ ಮಾತು ತಿಳಿಸಿದರು — ಕುರುಬನಿಗೆ ದಂಡಕಟ್ಟಿ

ದರೆ ಕುರುಬರ ಓಣಿಯೋ ಎದ್ದು ಎರಗೀತು, ಊರಿನ ಶಾಂತಿ ಕದಡೀತು, ಬೆಳೆಯಿಲ್ಲದ ಭೂಮಿಯಲ್ಲಿ ಕುರಿಬಿಟ್ಟದ್ದು ತಪ್ಪಲ್ಲವೆಂದು. ಅಪ್ಪಣ್ಣಪ್ಪ ತಿಳಿದವರು. ಮಗನ ಮೂರ್ಖತನಕ್ಕೆ ಮಂಗಳಾರತಿ ಮಾಡಿ ಕುರಿ ಬಿಡಿಸಿದರು. ಅಂದಿನಿಂದ ರಾಘಂಣನಿಗೆ ಅವರು ಕೆಲಸ ಹೇಳುವದು ನಿಂತು ಹೋಯಿತು. ತಂದೆಯ ‘ ಅಲಗರ್ಜಿ ’ ತನ ರಾಘಂಣನನ್ನು ಕೊರೆಯಿತು. ಅವನು ಮನೆಯ ಉಸಾಬರಿಗೆ ಬರದೆ—ಊರಿನ ಆಂಜನೇಯ ಸನ್ನಿಧಿಯಲ್ಲಿ ನೆರೆಯುವ “ ಇಸ್ಪೇಟ-ಕೂಟ ”ದಲ್ಲಿಯೇ ಹೊತ್ತುಕಳೆಯ ತೊಡಗಿದ.

೨

ತಂದೆಯ ನಿರ್ಗಮನದ ದಾರಿಕಾಯುತ್ತಿದ್ದ ರಾಘಂಣ ಅವರ ನಿರ್ವಾಣದ ನಂತರ ಒಮ್ಮೆ ನಾಡಗೌಡಿಕೆಯ ಪಟ್ಟಕ್ಕೆ ಬಂದು ಅಧಿಕಾರ ಪದದ ಛತ್ರ-ಚಾಮರ ಹಿಡಿಸಿಕೊಂಡ. ತಡೆಗಟ್ಟಿ ನಿಂತ ಮಳೆಗಾಲದ ಹೊಳೆಗೆ ಹುಚ್ಚು ರಭಸ ಬಂದು, ಕಾಡು-ನಾಡನ್ನು ದೋಚಿಕೊಂಡು ಹೋಗುವಂತೆ ಇಷ್ಟು ದೀರ್ಘಾವಧಿಯವರೆಗೂ ಅದುಮಿ ಹಿಡಿದ ಅವನ ಆಶೆ-ಆಕಾಂಕ್ಷೆ, ಸುಖ-ಸಂಭ್ರಮ ಮೇರೆದಪ್ಪಿ ಹರಿಯತೊಡಗಿತು. ಹುಚ್ಚುಹವ್ಯಾಸ, ಹಿಂದೆ ಕಲ್ಪಿಸಿದ-ಕಟ್ಟಿದ ಮನೋರಥವನ್ನು ಸಾಕಾರವಾಗಿ ಮಾಡಿಕೊಳ್ಳಲು ಉದ್ಯುಕ್ತವಾಯಿತು. ಮನೆಯಲ್ಲಿ ಯಾವುದಕ್ಕೂ ದದಾತಿಯಿಲ್ಲ. ತುಂಬಿದ ವೈಭವವಿತ್ತು. ದನ-ಕರ, ಆಳು-ಕಾಳು ಕೈ ಕಾಲಿಗೊಂದರಂತಿತ್ತು. ಮುದುಕ ಮಾಡಿದ ಧಡೆ ಬಂಗಾರದ ಆಸ್ತಿಯಿತ್ತು. ರಾಘಂಣ ಮನೆಯ ಸ್ವರ್ಗಕ್ಕೆ ಕಿಚ್ಚು ಹಚ್ಚಿ ತ್ರಿಶಂಕು ಸ್ವರ್ಗ ಸ್ಥಾಪಿಸಿದ.

ಒಂದು ರೀತಿಯಲ್ಲಿ ನೋಡಿದರೆ ಅವನು ಕಿಡಿಗೇಡಿ, ಧೂರ್ತ, ಲಂಪಟ-ಏನೂ ಅಲ್ಲ. ಶುದ್ಧ ಮೊದ್ದು. ಅವನಿಗಿದೆ-ನನಗೇಕೆ ಬೇಡ ! ಅವನು ಹೆಚ್ಚು, ನಾನೇತರಲ್ಲಿ ಕಡಿಮೆ-ಎನ್ನುವ ಹುಚ್ಚು ಹವ್ಯಾಸ ಮಾತ್ರ ಅವನಲ್ಲಿ ಅತೀತವಾಗಿತ್ತು. ಊರ ಗೌಡರ ಮಗ ಮನೆತನದ ರೂಢಿಯಂತೆ ಪಾತರ ಕಾಶಿಯಲ್ಲಿ ಅನುರಕ್ತ. ಆಕೆ ಅವನ ಜೀವನ ಸಖಿ. ಅವಳ ತಾಯಿ-ಹಿರಿಯ ಗೌಡನ ಗೆಣತಿ! ಜಾಗೀರಿ ಇರುವಂತೆ-ಈ ತಂದೆ-ಮಗನ-ಮೊಮ್ಮಗನ ಪರಂಪರೆಯಲ್ಲಿ—ಪಾತರದವರ ವಂಶಪರಂಪರೆಯೂ ಸಮಾಂತರವಾಗಿ ಜೀವನ ಮಾಡಿಕೊಂಡು ಬರಬೇಕು. ಆ ಕಾಶಿಯಲ್ಲಿ ರಾಘಂಣನ ಪ್ರೀತಿ

ಏಕೋ ಅಂಕುರಿಸಿ, ಅವಳ ಸಹವಾಸ ಬಯಸಿತು. ಮನೆಯಲ್ಲಿ ಇವನ ಕೂಡ ೧೦–೧೫ ವರುಷದ ಬಾಳುವೆ ಸಾಗಿಸಿ, ನಾಲ್ಕು ಮಕ್ಕಳ ತಾಯಿಯಾದ ಜಾನಕಿ ಜೀವಂತವಿದ್ದರೂ ರಾಘಣ್ಣನಿಗೆ ಹೊರಗಿನ ಈ ರುಚಿಯನ್ನೂ ನೋಡುವ ತಲುಬು ತಲೆದೋರಿತು. ಕಾಶಿ, ತಾನು ನೆಚ್ಚಿಕೊಂಡ ಕಿರಿಯ ಗೌಡನನ್ನು ಬಿಡುವ ವಿಚಾರ ಮಾಡಲಿಲ್ಲ. ರಾಘಣ್ಣನಿಗೆ ಇದು ಊರಿನ ಮಾಲು, ಸಾರ್ವಜನಿಕ ಸೊತ್ತು, ಗೌಡನಿಗೇ ಏಕೆ ಮೀಸಲು ? ತಾನು ಗೌಡನಿಗಿಂತ ಯಾತರಲ್ಲಿ ಕಡಿಮೆ ? ಅವನನ್ನು ಲಿಲಾವು ಮಾಡಿಸುವ ತ್ರಾಣ ತನ್ನಲ್ಲಿರುವಾಗ ಕಾಶಿ ಅವನನ್ನೇ ಯಾಕೆ ನಂಬಿಕೊಂಡಿರಬೇಕು ? ಅವಳಿಗೆ ಮಧ್ಯಸ್ತರಿಂದ ಹೇಳಿಸಿದ. ' ಉಂಡಮನೆಯ ಅನ್ನಕ್ಕೆ ಎರಡು ಬಗೆಯಲಾರೆ. ವೃತ್ತಿಯಿಂದ ತನ್ನ ಯೋಗ್ಯತೆಯನ್ನು ಅಳೆಯ ಬಾರದು. ಧರ್ಮ ದೊಡ್ಡದು ' ಎಂದು ಕಾಶಿ ಹೇಳಿಕಳಿಸಿದಳು. ಅವಳೂ ಹುಲಿಯ ಹಾಲನ್ನು ಮೆದ್ದವಳು. ಗೌಡ ಊರ ಹಿರಿಯ-ಮಹಾರಥಿಯಂತೆ ತನಗೆ ಆಧಾರವಾಗಿರುವಾಗ ಅಳ್ಳಿಟ್ಟಿನ ಹಾರುವನಿಗೆ ಬೆದರುವಳೇ ಆಕೆ ? ರಾಘಣ್ಣನ ಅಭಿಮಾನ ಮುಕ್ಕಾಗುವ ವೇಳೆ ಬಂದಿತು. ಅವನೂ ಓಸಿಹೋಗಿ, ಪಟ್ಟಣದಿಂದ ಒಂದು ಕಾಯಂ ಗಿರಾಕಿಯನ್ನೇ ಹಿಡಿದು ತಂದ. ಕಾಶಿಯ ಮುಖದ ಮೇಲೆ ಹೊಡೆಯುವಂತೆ—ಅವಳ ಮನೆ ಎದುರಿನ " ದುಮ್ಮಜಲೀ ಇಮಲಾ " ಒಂದನ್ನು ಖರೀದಿಗೆ ತೆಗೆದುಕೊಂಡು, ಅಲ್ಲಿ ತನ್ನ ಅರಗಿಳಿಯನ್ನು ಇರಿಸಿ, ಮೀಸೆಯನ್ನು ಹುರಿಮಾಡಿದ. ಎದುರು-ಬದುರು ಮನೆಗಳಲ್ಲಿ ಕಾಶಿ, ರಾಘಣ್ಣನ ಗಿರಾಕಿ ತಾರಾ ಸ್ಪರ್ಧೆಗೆ ನಿಂತಂತೆ ನಿಂತರು. ಊರಿಗೆ ಊರೇ ಈ ಹುಂಜು ಕಾಳಗದ ಮೋಜು ನೋಡುತ್ತಿತು.

ರಾಘಣ್ಣನ ಸರ್ವ ವೇಳೆ ತಾರಾ ನಿವಾಸದಲ್ಲಿಯೇ ಕಳೆಯುತ್ತಿತ್ತು. ತ್ರಿಶುಪರ್ಣದ ಆಟ, ಚಾ-ಪುರಿಯ ಫಳಾರ ಬೆಳಗಿನಿಂದ ಸಂಜೆಯವರೆಗೆ ಅಖಂಡವಾಗಿ ಸಾಗುತ್ತಿತ್ತು. ಹುಣ್ಣಿಮೆಯ ದಿನ ಬಿಸಿಲು ಮಚ್ಚಿಗೆಯ ಮೇಲೆ ಶ್ರೀಖಂಡ-ಪುರಿಯ ಮೇಜವಾನಿ, ತಾರಾಮತಿಯ ಕೋಕಿಲ ಕಂಠದ ಗಾಯನ! ಇಸ್ಪೇಟಿನ ಅಡ್ಡೆ ಬಿದ್ದರೆ ಹಗಲಿರುಳಿನ ಅಂತರ ತಿಳಿಯುತ್ತಿರಲಿಲ್ಲ. ತಾರಾಮತಿ ಈ ಯಜ್ಞದಲ್ಲಿ ಪುಣ್ಯಭಾಗಿಯಾಗದಿದ್ದರೂ ತಾಂಬೂಲ-ಪೇಯಗಳ ಸರಬರಾಯಿ ಮಾಡಿ, ಆಟಕ್ಕೆ ರಂಗು ತರುತ್ತಿದ್ದಳು. ತಾರಾಮತಿಯ ತಾಯಿ

೫೦-೫೫ ವರುಷದ ಗಂಗಾ ಇಂಥ ಕಲೆಯಲ್ಲಿ ಪಳಗಿದ ಹೆಂಣು. ಮಗಳಿಗೆ ದಾರಿ ದೀಪವಾಗಿ, ರಾಘಂಣನ ಕುಬೇರ ಸಂಪತ್ತು ಸರಾಗವಾಗಿ ಹರಿದು ಬಂದು ತನ್ನ ಮಹಲಿನಲ್ಲಿ ವಿಲೀನವಾಗುವಂತೆ ಮಗಳಿಗೆ ಕಾವಲಿ ತೋಡುವ ಕಲೆಯಲ್ಲಿ ನೆರವಾಗುತ್ತಿದ್ದಳು. ಕಾಶಿಗಿಂತ ತಾರಾಮುಖಿ ಬೆಡಗಿನಲ್ಲಿ, ಚೆಲುವಿನಲ್ಲಿ, ಗಂಡು ಮೀನವನ್ನು ಬಲೆಗೆಳೆಯುವ ಕಲೆಯಲ್ಲಿ ನುರಿತ ಧೀವರೆ. ತಾಯಿಯ ಗರಡಿಯಲ್ಲಿ ಅಖಂಡ ಸಾಧನೆ ಮಾಡಿದ ಸತ್‌ಪುತ್ರಿ. ರಾಘಂಣನ ಸವಿ-ರುಚಿ, ಬೇಕು-ಬೇಡುಗಳನ್ನು ಅರಿತು ಅದರಂತೆ ಎಲ್ಲವನ್ನೂ ಅಣಿಯಾಗಿಸಿ ಅವನ ಈಪ್ಸಿತ ಪೂರ್ತಿ ಮಾಡಿ ಸನ್ಮಾನಿತೆಯಾಗುತ್ತಿದ್ದಳು. ಏನಾದರೂ 'ಶಾರಿ' ನ ಗಾಳಿ ನೀರು ಕುಡಿದು ಬೆಳೆದು ಬಾಳಿದ ಹೆಂಣು ಆಕೆ. ಕಾಶಿ ಇವಳ ಮುಂದೆ ಯಾವ ಗಿಡದ ತೊಪ್ಪಲು?

ತ್ರಿಶುಪರ್ಣದ ರಾಜ್ಯದಲ್ಲಿ ರಾಘಂಣನಿಗೆ ಮನೆ ಮಾರಿನ ಮರೆವಾಯಿತು. ಆಟ ಮುಗಿಸಿ, ಇವನನ್ನು ಸುಲಿದು ಸೂರೆಗೊಂಡು, ಆಟಗಾರರ ಮೇಳ ಹೊರಬಿದ್ದು ಮನೆಯ ದಾರಿಯನ್ನು ಹಿಡಿದಿತೆಂದರೆ-ತಾರಾ ಒಯ್ಯಾರದಿಂದ ಬಾಗಿ-ಬಳುಕಿ ರಾಘಂಣನ ಕೊರಳ ಸುತ್ತಲೂ ತನ್ನ ಕರಮಾಲೆ ಹೆಣೆದು ನೇತ್ರ ಪಲ್ಲವಿ-ಕರಪಲ್ಲವಿಯ ಸೂತ್ರವಾಡಿಸಿ, ಹುಸಿ ಮುನಿಸಿನ-ನಸುನಗೆಯ ಪುಂಗಿಯೂದಿ, ಬೇಟೆಯನ್ನು ಬಲಿಗೆ ಬೀಳಿಸಿ, ತಾಂಬೂಲ ಸಮರ್ಪಣ ಮಾಡುತ್ತಿರುವಾಗಲೇ ಗೃಧ್ರಗಂಗೆಯ ಅವತರಣವಾಗಿ ತಾರೆಯ ಆಶೆ ಆಕಾಂಕ್ಷೆಯ ಬಯಕೆ-ಬೇಡಿಕೆಯ ವಿಸ್ತೃತ ಪುರಾಣಪಠಣವಾಗುತ್ತಿತ್ತು. "ಪೊಟ್ಟ ಗೌಡನ ಕಾಶಿಗೆ ವಂಕಿ ಸರಿಗೆಯ ಸಿಂಗಾರವಿರುವಾಗ, ಬಂಗಾರ ಡಾಬಿನ ಭಾಗ್ಯವಿರುವಾಗ ತನ್ನ ಕೂಸು — ರಾಘಂಣನಂಥ ಕುಬೇರನ ಆಶ್ರಿತೆಯಾದರೂ ಭಿಕಾರಿಯಂತೆ ಇರಬೇಕಾಗಿದೆ. ಇಲ್ಲಿ ಬರದೆ ಶಾರದೂರಿನಲ್ಲಿಯೋ ಅಂಗಡಿ ಹೂಡಿದ್ದರೆ— ದುಮ್ಮುಜಲೀ ಇಮಲಾ ಕಟ್ಟಿಸಿ, ಮೋಟಾರ ಕೂಡ ಮಗಳು ಇಡಬಹುದಾಗಿತ್ತು. ಇಲ್ಲಿ ಬಂದು ಏನು ಸೌಭಾಗ್ಯ ಕಾಣುವಂತಾಯಿತು." ಇತ್ಯಾದಿ ಇತ್ಯಾದಿ! ಇದು ನಿತ್ಯದ ಹಾಡು. ನಾಳೆ ಸೂರ್ಯಾಸ್ತದೊಳಗಾಗಿ ನಿನ್ನ ಆಶೆ ಪೂರೈಸುತ್ತೇನೆಂದು ರಾಘಂಣ ಕರ್ಣ-ಭೀಷ್ಮರ ವಾಣಿಯಲ್ಲಿ ಅಭಯ ನೀಡಿದನಂತರ ಅವನಿಗೆ ಬಿಡುಗಡೆ; ಈ ಸಿಂಹ-ಶಾರ್ದೂಲದ ಗವ್ಹರದಿಂದ ಹೊರಬಿದ್ದು ಬರಬೇಕಾದರೆ ಅವನಿಗೆ ರಾತ್ರಿಯ ೧೧ ಗಂಟೆ.

ಮನೆಗೆ ಬಂದು ಉಂಡು ಅಡ್ಡಾಗಬೇಕಾದರೆ ಸರಿ ರಾತ್ರಿ ಮೀರಿ ಹೋಗುತ್ತಿತ್ತು.

ಒಂದೆರಡು ವರುಷ ಅವನ ಈ ಹೊರಚಟ ಯಾರಿಗೂ ಚಿಟುಕು ಮುಳ್ಳೆನಿಸಲಿಲ್ಲ. ನಾಲ್ಕೇ ಬಾಣಂತಿತನದ ಬವಣೆ ಅನುಭವಿಸಿದ ಜಾನಕಿಗೆ ಆ ಘೋರ ದಿವ್ಯ ಮತ್ತೆ ಬೇಡವೆನಿಸಿತ್ತು ಗಂಡ ಹತ್ತಿರ ಸುಳಿಯುತ್ತಿಲ್ಲ; ಅಷ್ಟೇ ಸುಖವೆಂದು ತೆಪ್ಪಗಿದ್ದಳು. ತನ್ನ ಮೈಮೇಲಿನ ವಸ್ತ್ರ-ಒಡವೆ ಮಾಯವಾಗುವಾಗ ಒಂದೆರಡು ಸಲ ಎದುರು ನುಡಿದು ಪ್ರಸಾದ ಗ್ರಹಿಸಿಯೂ ಇದ್ದಳು. ಗಂಡನ ಅಂದಾದುಂದಿಯ ಕಡೆಗೆ ಕುರುಡುಗಣ್ಣು ಮಾಡಿ ಕುಳಿತಿದ್ದಳು. ಅಲ್ಲದೆ ಮನೆಮಾರಿನ ಚಿಂತೆ ತೊರೆದ ಗಂಡ ಅತ್ತ ಕಡೆಗೆ ಕಣ್ಣೆತ್ತಿ ನೋಡದಾಗ ಹೊಲಮನೆಯ ಭಾರ ತನ್ನ ಮೇಲೆಯೇ ಬಿದ್ದು-ಅನಪೇಕ್ಷಿತ ಅಧಿಕಾರಸೂತ್ರ ಕೈಗೆ ಒಂದು ಅಕಲ್ಪಿತ ಸುಖ ಕಣ್ಣು ತೆರೆದ ಮದವೂ ಅವಳಿಗೇರಿತ್ತು. ಹರವಿಯ ಪಲ್ಯ, ಹಳಿಜೋಳದ ನುಚ್ಚುಂಡು, ಅಪ್ಪಣ್ಣಪ್ಪನ ಕಾಲಮಾನದಲ್ಲಿ ದಿನಗಳೆದ ಅವಳಿಗೆ ಈಗ "ಶಿರಾ-ಪುರಿ"ಯ ವ್ಯಾಧಿ ಬಾಧಿಸಿತ್ತು. ಭಾಗವ್ವನ ಸಹಕಾರ ಪ್ರಚೋದನೆಯಿಂದ ನಾಡಗೌಡಿತಿ ಇರಬೇಕಾದ ರೀತಿಯಲ್ಲಿ ಬಾಳುವ ಸಾಹಸ ಪಡುತ್ತಿದ್ದಳು. ಸಣ್ಣಕ್ಕಿಯ ಅನ್ನ, ಕೇಸರಿಯ ಹಾಲು, ಹಿಡಿದರೆ ತುಪ್ಪ ತೊಟ್ಟಿಕ್ಕುವ ಶಿರಾ-ಇಲ್ಲದ ದಿನವಿಲ್ಲದಾಗಿತ್ತು, ರಾಘಣ್ಣನ ಮನೆಯಲ್ಲಿ. ಹೀಗೆ ಈ ಮನೆಯ ಒಳಗೆ, ಹೊರಗೆ ಭಾಗ್ಯಲಕ್ಷ್ಮಿಯ ಹಗಲು ದರೋಡೆ ನಡೆದರೂ, ಲಕ್ಷ್ಮಿ ನಿರ್ವಾಹವಿಲ್ಲದೆ ಇನ್ನೂ ಸ್ಥಾವರ ಆಸ್ತಿಯಲ್ಲಿ ಟುಕುಟುಕು ಹಿಡಿದುಕೊಂಡು ಸೆರೆಯಾಗಿದ್ದಳು.

ನಾಡಗೌಡರಿಗೆ ತಲೆತಲಾಂತರದಿಂದ ಬಂದ ಇನಾಮೀ ಜಮೀನು. ಮಾರಲು ಬರುವಂತಿಲ್ಲ. ಒತ್ತೆ ಹಾಕುವದೊಂದೇ ಗತಿ! ಅಡುವಿನ ಅಂತರಾಳದಲ್ಲಿಯೇ ಕೊಳೆಯಬೇಕು. ಅಡವಿಟ್ಟ ವ್ಯಕ್ತಿ ಸತ್ತನೆಂದರೆ, ಅಡವಿನ ಮೇಲಿನ ತಾರಣ ತಾನೇ ತಾನಾಗಿ ವಜಾಯವಾಗಿ ಬಿಡುತ್ತದೆ. ಸಾಲ ಕೊಟ್ಟ ಧನಕೋ ಎಷ್ಟು ದಿನ ಹೊಲದ ಫಲ ಉಂಡನೋ ಅಷ್ಟೇ "ಶಿವಾ" ಎಂದು ಸುಮ್ಮನಿರಬೇಕು. ಅದರಿಂದಾಗಿ-ದೇಸಾಯಿ-ದೇಶಪಾಂಡೆ-ಜಾಗೀರ ವತನದಾರರ ಮನೆಯ ವಾಸ್ತವ್ಯವೆಂದರೆ ಲಕ್ಷ್ಮಿಗೆ ಆಜನ್ಮ "ಕಾಳಾಪಾಣೀ" ಇದ್ದಂತೆ!

೩

ತಾರಾಮತಿಯ ಸಾಜಶೃಂಗಾರಕ್ಕೆ ಒಂದು ಗುಂಜಿತೂಕದ ಬಂಗಾರವನ್ನೂ ಬಿಡದೆ ರಾಘಣ್ಣ ಮನೆಯನ್ನು ಬರಿದು ಮಾಡಿದ. ಶ್ರಾವಣದ ಗೌರಿಯಂತೆ ಅಲಂಕೃತೆಯಾಗುತ್ತಿದ್ದ ಜಾನಕಿ ಈಗ ತಾಳಿಯಲ್ಲಿ ಇದ್ದಷ್ಟು ಬಂಗಾರದ ಮೇಲೆ ಸಮಾಧಾನಪಡಬೇಕಾಗಿದೆ. ಮದುವೆಯಲ್ಲಿ ಮಾವ ಉಡಿಸಿದ ತೆನೆ ತಿರುವಿದ ಪೀತಾಂಬರವೂ–ತಾರೆಯ ಪೆಟ್ಟಿಗೆಯನ್ನು ಸೇರಿತ್ತು. ಕೈಯಲ್ಲಿರಡು ಕಾಜಿನ ಬಳೆ–ಕೊರಳಲ್ಲೊಂದು ತಾಳಿ–ಹರಿದ ಸೀರಿಗೆ ಹೊಲಿಗೆಯ ಬಂಧನ ಹಾಕಿ–ಮೈ ಮುಚ್ಚಲೆರಡು ಸೀರೆ–ಇಲ್ಲಿಗೆ ಬಂದು ನಿಂತಿತು ಅವಳ ಸ್ಥಿತಿ! ಅವಳೂ ಇದ್ದಾಗ–ಸುಖಸಲಿಲದಲ್ಲಿ ಮಿಂದೆದ್ದಿದ್ದಳು. ಈಗ ಆಡಿದರೆ ತನಗೇ ಮಾತು ತಿರುಗೀತೆಂದು ಸುಮ್ಮನಿದ್ದಳು. ಭಾಗವ್ವ, ಅತ್ತೆಯ ಮನೆಯವರಲು ಹರಿದುಕೊಂಡು ಬರುವಾಗ ತಂದ ಅಷ್ಟಿಷ್ಟು ವಸ್ತ ಒಡವೆಯನ್ನು ಜೋಪಾನವಾಗಿ ಕೃಷ್ಣಾಜಿನದ ಪೆಟ್ಟಿಗೆಯಲ್ಲಿರಿಸಿ, ದೊಡ್ಡ ದೇವರ ಬಳಿಯಲ್ಲಿ–ದೇವರ ಮನೆಯಲ್ಲಿ ಇರಿಸಿದ್ದಳು. ವೈಷ್ಣವರ ಮನೆಯ ದೇವರ ಕೋಣೆಯೆಂದರೆ Safe deposit Vault ಇದ್ದಂತೆ! ಅಲ್ಲಿಗೆ ಸಾರಿ ಕೈಹಚ್ಚುವ ಧೈರ್ಯ ಸಾಕ್ಷಾತ್ ಶ್ರೀಪತಿಗೂ ಅಸಾಧ್ಯ. ರಾಘಣ್ಣನ ಆಶೆಗಂಣಿಗೆ ಈ ಗುಪ್ತ ಧನ ಬಿದ್ದಿರಲಿಲ್ಲ. ಭಾಗವ್ವ ಕೃಷ್ಣಸರ್ಪದಂತೆ ಅದನ್ನು ಕಾಯುತ್ತಿದ್ದಳು. ಎಲ್ಲರಿಗೂ ಆ ಗಂಟಿನ ಗುರುತು, ಅರಿವಿದ್ದರೂ ಅದರ ಬಗ್ಗೆ ಚಕಾರ ಶಬ್ದವೆತ್ತಿ ಭಾಗವ್ವನ ಫಣಾ ಪ್ರಹಾರ ತಾಳುವ ಎದೆ ಯಾರಿಗೂ ಇರಲಿಲ್ಲ.

ಈ ಮನೆಯಲ್ಲಿ ಅಗತಿಕ ದುರ್ದೈವಿ ಜೀವನವೆಂದರೆ ರಿಂದಕ್ಕನದೊಂದೇ! ಆಕೆ ಮಂಗಳಸೂತ್ರದೊಂದಿಗೆ ತನ್ನ ಪಾಲಿನ ಆಸ್ತಿಯನ್ನೂ ಗಂಗಾರ್ಪಣ ಮಾಡಿ ಬಂದಾಕೆ. ತೌರಿಗೆ ತಲೆಭಾರವಾಗಿ ಬಾಳುತ್ತಿದ್ದ ಜೀವನ ಈ ಮನೆಯಲ್ಲಿ ಅದೊಂದೇ! ತನ್ನ ದುರ್ದೈವದ ನ್ಯೂನತೆಯನ್ನು ಅರಿತುಕೊಂಡು ಅವಳು ಯಾರ ಕಾಲಕಸವಾದರೂ ಸರಿ, ಅನ್ನಋಣದ ಮುಕ್ತಿಗಾಗಿ ದುಡಿದು ದೇಹ ಸವೆಸುತ್ತಿದ್ದಳು. ವ್ಯಾಘ್ರಜೀವಿಗಳಾದ ಅಕ್ಕ-ಅತ್ತಿಗೆಯರ ಮಾತು-ನಿಂದೆಯ ಶಲ್ಯಕ್ಕೆ ತಲೆಕೊಟ್ಟು ಸಾಗುತ್ತಿದ್ದಳು. ಈ ಮನೆಯ ದುಂದುಗಾರಿಕೆಯಲ್ಲಿ ಎಂದೂ ಭಾಗಿಯಾಗದ ನಿರ್ಭಾಗ್ಯೆ ಅವಳೊಬ್ಬಳೇ.

ಮನೆಯಲ್ಲಿಯ ಕಸ-ಮುಸುರೆ, ಹಿಟ್ಟು-ನುಚ್ಚು, ದನಕರದ ಆರೈಕೆ, ಹಾಲು-ಹೈನ ಎಂದನಿಂದಲೂ ರಿಂದಕ್ಕನ ಪಾಲಿಗೇ! ಅವಳು ಇದನ್ನೆಲ್ಲ ಮುಗಿಸಿ-ಒಂದು ತುತ್ತು ಅನ್ನ ಉಂಡು ಏಳಬೇಕಾದರೆ ಮಧ್ಯಾಹ್ನದ ಮೂರು ಗಂಟೆಯಾಗುತ್ತಿತ್ತು. ಒಂದೇ ಹೊತ್ತು ಉಂಡ ಊಟ-ಕುಡಿದ ನೀರು—ಮರುದಿನ ಮತ್ತೆ ಅಷ್ಟುಹೊತ್ತಿನವರೆಗೆ ಜೀವನಾಧಾರ. ಇಷ್ಟು ಮಾಡಿದರೂ ಉಳಿದವರ ಅಂದಾದುಂದಿಯಲ್ಲಿ ಭಾಗಿಯಲ್ಲವೆಂಬ ಆರೋಪ, ಬೇಡಿ ಬರದ ಅಭಾಗಿಯೆಂಬ ಅವಹೇಳನೆ ಅವಳಿಗೆ ತಪ್ಪುತ್ತಿದ್ದಿಲ್ಲ. ಅಕ್ಕ ಬಿಟ್ಟ ಸೀರೆ, ಅಣ್ಣ ಬಿಟ್ಟ ಧೋತರ. ಅಷ್ಟೇ ಅವಳ ಮೈಮುಚ್ಚಲು ಆಧಾರ. ಗಂಡನ ಸೌಭಾಗ್ಯ, ಅತ್ತೆಯ ಮನೆಯ ಆಶ್ರಯಕ್ಕೆ ಹೊರತಾಗಿ ತೌರಿನಲ್ಲಿ ತಂದೆಯ ನಂತರ ಅಣ್ಣನ ನೆರಳಿಗೆ ನಿಲ್ಲಬೇಕಾದ ಗತಿ ಅವಳಿಗೆ ಬಂದರೂ—ಅಂದು ಇಲ್ಲಿ ಬಂದಾಗ ಇದ್ದ ರೀತಿ, ಇಂದಿಗೂ ಹಾಗೇ ಇದೆ. ದೇವರಿಗೇ ತನ್ನ ಸುಖ ಬೇಡವೆನ್ನಿಸಿ ಕಿತ್ತುಕೊಂಡಾಗ ತಾನತ್ತು ಸಂಕಟಪಟ್ಟರೆ ಏನು ಬಂತು? ತನ್ನ ಹಣೆಯಲ್ಲಿ ಯಾವ ಸುಖವನ್ನೂ ಅವನು ಬರೆಯಲಿಲ್ಲ. ಈಗ ತಾನೇನು ಅದನ್ನು ಗೀಚಿಕೊಳ್ಳಬೇಕಾಗಿದೆ? ಇಲ್ಲಿಯ ತುತ್ತು ಕವಳದಿಂದ ಪಿಂಡ ಪೋಷಿತವಾಗುತ್ತಿದೆ. ಅದರ ಋಣ ತೀರಿಸಿದರೆ ಸಾಕು, ಮುಕ್ತಿಯಾದಂತೆ—ಎಂಬ ನಿವೃತ್ತಿ ಜೀವನ ನಡೆಸಿದ್ದಳು. ಅವಳ ನಿರ್ಗತಿಕ-ಅನಾಥ ಬಾಳಿಗೆ ನೊಂದ ಅಪ್ಪಣ್ಣಪ್ಪ ಸಾಯುವಾಗ ಮಗನಿಂದ ಕೊನೆಯವರೆಗೂ ಆಕೆಯನ್ನು ಸಂಬಾಳಿಸುತ್ತೇನೆಂದು ವಚನ ತೆಗೆದುಕೊಂಡು ಸತ್ತಿದ್ದ. ರಿಂದಕ್ಕನನ್ನು ಪೋಷಿಸುವ ಭಾರ ತನ್ನ ಮೇಲೆ. ಅದಕ್ಕೆ ತಪ್ಪಲಾರೆನೆಂದು ರಾಘಣ್ಣ ಹೇಳಿ ನೀರು ಬಿಟ್ಟೊಡನೆ ಅಪ್ಪಣ್ಣಪ್ಪನಿಗೆ ಕಾಕಪಿಂಡವಾಯಿತು. ಆ ಮಾತುಕೊಟ್ಟ ಋಣ ರಿಂದಕ್ಕನನ್ನು ಈ ಮನೆಯಲ್ಲಿ ಜೀತಕ್ಕಿರಿಸಿಕೊಂಡು ಟುಕುಟುಕು ಜೀವ ಹಿಡಿಯುವ ಮಟ್ಟಿಗೆ ಅನ್ನದಾನ ಮಾಡುತ್ತಿತ್ತು.

ಉಳಿದವರಂತೆ ರಿಂದವ್ವನಾದರೂ ಹಾಲು ತುಪ್ಪದಲ್ಲಿ ಕೈಅದ್ದಿ ಸುರ್ರಿದ್ದರೆ-ರಾಘಣ್ಣನೇನೂ ಬೇಡವೆನ್ನುತ್ತಿರಲಿಲ್ಲ. ಪ್ರತಿಯಾಗಿ ಅವಳ ಸಂನ್ಯಸ್ತ ಜೀವನದಿಂದ ಅದೆಷ್ಟೋ ಸಲ ಅವನು ಕಿಡಿಕಿಡಿಯಾಗಿದ್ದಾನೆ. ಒದ್ದೆಯ ಅರಿವೆಯನ್ನು ಅಡ್ಡ ಹಚ್ಚಿಕೊಡು ಸೀನೀರಿನ ಬಾವಿಯಿಂದ ಅವಳು ಕೊಡ ಹೊತ್ತುಕೊಂಡು ಬಂದಾಗ ನಾಡಗೌಡರ "ಘರಾಣೇಕ್ಕ ಬಟ್ಟಾ" ತಂದೆ ಎಂದು

ಕೂಗಿಕೊಂಡ ! ಊರಿನ ನಾಕು ಜನದ ಮುಂದೆ ತನ್ನ ಮಾನವನ್ನು ಮುಕ್ಕಾಗಿಸಿದೆಯೆಂದು ರೋಸಿಕೊಂಡ ! ಅವಳ ಹರಕು ವಸನದ ವೈಭವ ನೋಡದೆ ಒಮ್ಮೆ ಕೆಂಪು ಅಲವಾನ ತಂದಾಗ ‘ ಯಾವ ಸೌಭಾಗ್ಯಕ್ಕೆ ಇದನ್ನು ತಂದ್ಯ, ರಾಘಣ್ಣಾ—ಅವರ ಕೂಡೇ ನನ್ನ ಸುಖ-ಸಮಾಧಾನ ಅಳಿದು ಹೋಗಿದೆ. ಇನ್ನು ಯಾವ ಮುಖದಿಂದ ಈ ವಸ್ತ್ರ ಉಟ್ಟು ಮೆರೆಯಲಿ ? ’ ಎಂದು ಅವಳು ನುಡಿದಾಗ, ಕರಳು ಕಿವುಚಿದರೂ ಬಾಯಿಂದ ಆಡದೆ—“ ಮುಕಾಟ್ಲೆ ಉಟಕೋ. ಮನೀ ಮಾನಾ ಮರ್ಯಾದಿ ಅನ್ನೂದೊಂದಿಷ್ಟು ಉಳಿಸು ” ಎಂದು ರೇಗಿ ಹೇಳಿದ್ದ. ಅಂಣನ ಮಾತಿಗೆ ತಂಗಿ ಎರಡು ನುಡಿಯದೆ, ಅನ್ನದ ಋಣ ತೀರಿಸುವ ನಿರ್ವ್ಯಾಜ ಬಯಕೆಯಿಂದ ಎಲ್ಲ ಮಾತನ್ನೂ ಶಿರಸಾಮಾನ್ಯಮಾಡಿ, ಆ ಮನೆಯಲ್ಲಿ ಕೊನೆಯ ಗಳಿಗೆಯನ್ನು ಎಣಿಸುತ್ತ ದಿನ ಹಾಕುತ್ತಿದ್ದಳು.

೪

ರಾಘಣ್ಣನ ಕೈಯಲ್ಲಿ ಕಾಸು ಕುಣಿಯುವವರೆಗೂ ಅವನು ಮಾಡಿದ್ದೆಲ್ಲ ಒಪ್ಪಾಗಿ ಕಾಣುತ್ತಿತ್ತು. ಊರಲ್ಲಿ ನೂರು ಬಾಯಿ ನಾನಾ ರೀತಿಯಾಗಿ ಮೊರೆಯುತ್ತಿದ್ದರೂ ನಾಲಗೆಯ ಚಾಪಲ್ಯ ತೋರಿಸುತ್ತಿದ್ದರೂ ಅವನೆದುರು ‘ ಬ್ರ ’ ಎನ್ನುವ ಎದೆ ಮಾಡುತ್ತಿರಲಿಲ್ಲ. ರಾಘಣ್ಣನ ಎಲ್ಲ ಸ್ಥಾವರ ಮಿಳಕತ್ತು ಈಗಾಗಲೇ ಬೆಳಗಾಂವಿ ಸಾವುಕಾರರಲ್ಲಿ ಒತ್ತಿ ಬಿದ್ದಿತ್ತು. ಬಡ್ಡಿಯನ್ನೂ ತೆರುವುದಾಗುವದಿಲ್ಲವೆಂದು ಹೊಲ ಉಂಣಲು ಅವರಿಗೇ ಬಿಟ್ಟಿದ್ದ. ಇದ್ದ ಮನೆಯೂ ಅವರಿಗೇ ಅಡುವಾಗಿತ್ತು. ಸಾಲದ ವಾಯದೆ ಮುಗಿದು ಮನೆ ಇನ್ನೇನು ಅವರ ಗಂಟಲಲ್ಲಿ ಅನಾಯಾಸವಾಗಿ ಇಳಿದು ಬಿಡುತ್ತದೆ. ರಾಘಂಣನಿಗೆ ನಂತರ ಗಿಡದಡಿಗೆ ಅಸುವನ್ನು ನೀಗುವ ಪ್ರಸಂಗ ಬರುವದರಲ್ಲಿ ಸಂದೇಹವಿಲ್ಲವೆಂದು ಜನ ನುಡಿಯುತ್ತಿತ್ತು. ಮನೆಯಲ್ಲಿಯ ಹೆಂಣು ಪಾಳ್ಯದ ತಿನಿಸು, ಸುಖಲೋಲುಪತೆಯ ಮದ ಇದೀಗ ಏನೂ ಇಲ್ಲದ್ದರಿಂದ—ಇಳಿಮುಖವಾಗಿ ಅವಕ್ಕೆ ತಮ್ಮ ಪರಿಸ್ಥಿತಿಯ ಅಲ್ಪಪರಿಚಯವಾಗತೊಡಗಿತ್ತು. ಜಾನಕಿ ಸಂತಾನ ನಿಯಂತ್ರಣ ಮಾಡಬೇಕೆಂದು ಹಾಕಿದ್ದ ಬೇಕು ಮೂಲೆಗುಂಪಾಗಿ ಕೈ, ಕಂಣು ತಪ್ಪಿ ಅವಳಿಗೆ ಐದನೆಯ ಬಾಣಂತಿತನ ಇದೀಗ ಪ್ರಾಪ್ತವಾಗಿತ್ತು. ಅವಳು ಹಡೆದ ಕೂಸು ಒಳ್ಳೇ ನಕ್ಷತ್ರದಲ್ಲಿ ಅವತರಿಸಿರಲಿಲ್ಲವಂತೆ ! ಶಾಂತಿ

ಯಾಗಬೇಕು. ಶಾಂತಿಯನ್ನು ಯಾರು ಮಾಡಬೇಕು ? ಏತರಿಂದ ಮಾಡು ವದು? ಕುಬೇರನ ಸಂಪತ್ತನ್ನು ಗಳಿಸಿ, ಈ ಮನೆಗೆ ಹೊನ್ನ ಕಲಶವಿಟ್ಟ ಅಪ್ಪಣ್ಣಪ್ಪನ ಶ್ರಾದ್ಧವೇ ಕೈಗಡದ ಸೀದಾದ ಮೇಲೆ ನಡೆದಾಗ ಇದೀಗ ಕಂಣು ತೆರೆದ ಕೂಸಿನ ಶಾಂತಿಯನ್ನು ಮಾಡಿ, ಅರಿಷ್ಟವನ್ನು ಹೇಗೆ ನೀಗಿಸಿಕೊಳ್ಳ ಬೇಕು ? ಜಾನಕಿ ಇಪ್ಪತ್ತು ದಿನದ ಹಸೀ ಬಾಣಂತಿ ! ಮನೆಯಲ್ಲಿ ರಾಮರಕ್ಷ! ಕಟ್ಟಿನೆ ಕಡಿದೇನೆಂದರೆ ಒಂದು ಕಾಳು ಜೋಳವಿಲ್ಲ. ಇದ್ದ ೫-೬ ಚೀಲ ಹೋದ ತಿಂಗಳವೇ ಇಸ್ಪೇಟಿನ ಆಟಕ್ಕೆ ಹಣದ ಬದಲಿಗೆ ಹಚ್ಚಿ ಕಳೆದು ಕೊಂಡದ್ದಾಗಿತ್ತು. ಮೊನ್ನೆಯಂತೂ-ರಾಘಂಣ-ಕೈನಡ ಎಮ್ಮೆಯನ್ನೇ ಆಟಕ್ಕೆ ಮೀಸಲು ಮಾಡಿದ್ದ. ದವಸ-ಧಾನ್ಯವಿಲ್ಲದೆ-ಕಲಗಚ್ಚಿನಲ್ಲಿ ಕೂಡ ಮುಸುರೆ ಮಿಶ್ರಿತ ನೀರಿಲ್ಲದೆ ಹಿಡಿ ಕಣಿಕೆಯ ಮೇಲೆ ಬದುಕುವ ಒಂದು "ಸುರಭೀ ವೈಷ್ಣವೀ ಮಾತಾ" ದಿನಾಲು ಥಾಲಿ ಹಾಲು ಕೊಡುತ್ತ, ಒಣ ದಂಟು ತಿಂದು ನಿಂತಿತ್ತು. ಅದರ ಅಷ್ಟೇ ಹಾಲನ್ನು ಪ್ರೋಲಿಮೆಮಾಡಿ, ಮಕ್ಕಳ ಕಂಣು ಕೈಯಿಂದ ತಪ್ಪಿಸಿ, ರಿಂದಕ್ಕ ಗಿಂಡಿಯಲ್ಲಿಟ್ಟು ಬಾಣಂತಿಯ ಕರಳುಶಾಂತಿಗೆ ಹನಿಸುತ್ತಿದ್ದಳು. ತುತ್ತುಪ್ಪ, ವಾಸನೆಯ ಬೆಜವಾಡದ ಸಂಣಕ್ಕಿಯಲ್ಲಿ ದೇಹ ಪಿಂಡ ಬೆಳೆಸಿದ ಜಾನಕಿ, ಈಗ ಒಂದು ಹೊತ್ತಿಗೆ ಹಿಡಿ ಅನ್ನ ಕಾಣಬೇಕಾದರೆ ಸಾಕುಬೇಕಾಯಿತು. ನೆತ್ತಿಗೆ ಎಂಣೆಯಿಲ್ಲ; ಹೊಟ್ಟೆಗೆ ತುಂಬ ಸವಿ-ಸಪ್ಪಗಿಲ್ಲ; ಹೀಗೆ ಏಕೆ ಎಂದು ಕೇಳಿ ನೆರವುಗೈ ಚಾಚುವ, ನಾಲ್ಕು ಸಂತಸದ ನುಡಿಯ ನ್ನಾಡುವ ಬಂಧುಬಳಗವೂ ಅವಳಿಗಿಲ್ಲ. ತನ್ನ ಹಿಂದಿನ ದರ್ಪ, ಅಧಿಕಾರ ಮರೆತು-ಇಂದು ಬಂದ ಪರಿಸ್ಥಿತಿಯನ್ನು ನೆನೆದು, ರಿಂದಕ್ಕನ ಮುಂದೆ ಅವಳು ಆಗೀಗ ಮುಳುಮುಳು ಅತ್ತಾಗ ರಿಂದಕ್ಕನ ಕರುಳು ಕಚ್ಚುತ್ತಿತ್ತು. ಆದರೇನು ? ತಾನೇ ನಿರ್ಗತಿಕಳಾಗಿ-ಈ ಮನೆಯ ನೆರಳಿನನಾಶ್ರಯಕ್ಕೆ ಬಂದ ವಳು. ಸಮಾಧಾನಪರವಾದ ನಾಲ್ಕು ಮಾತಿನ ವಿನಾ ಬೇರೆ ಏನು ಮಾಡ ಬಲ್ಲಳು ? ಆ ಒಂದು ಜೀವ ಕೊಡುವ ಸಂತಸ-ಸಮಾಧಾನದ ನೆರವಿನ ಮೇಲೆ ಜಾನಕಿ ಬದುಕಿಕೊಂಡಿದ್ದಳು.

ರಿಂದವ್ವನಿಗೆ ಧೇನಿಸಿ-ಧೇನಿಸಿ-ವಿಚಾರಿಸಿದಾಗ ಭಾಗವ್ವನ ನೆರವಿನ ಕಿರಣ ಅವಳಿಗೆ ಹೊಳೆಯಿತು. ಭಾಗವ್ವ ಒಂದಿಷ್ಟು ದುಡ್ಡಿದ್ದಾಕೆ. ಈ ಸಮ ಯದಲ್ಲಿ ನೆರವಾಗದೆ ಬೇರೆ ಯಾವಾಗ ನೆರವಾಗಬೇಕು. ತನ್ನ ಅಕ್ಕನಿಗೆ

ಬೇಡಿಕೊಂಡರೆ ಅವಳ ಆ ಗುಪ್ತ-ಗಂಟಿನಿಂದ ಒಂದಿಷ್ಟು ಬಿಡಿಕಾಸಾದರೂ ಬಿಚ್ಚೀತೆಂದು ಬಗೆದಳು. ಇದೊಂದು ಬಾಣಂತಿತನ ಹೇಗಾದರೂ ಮುಗಿದರೆ ಸಾಕು-ಮುಂದೆ ದೇವರಿದ್ದಾನೆ. ಅಕ್ಕ ಇಲ್ಲವೆನ್ನಲಿಕ್ಕಿಲ್ಲ. ಕೇಳಿಯಾದರೂ ನೋಡೋಣವೆಂದು ಗುಣಿಸಿಕೊಂಡಳು.

ಮರುದಿನ ಆಷಾಢ ಏಕಾದಶಿ. ತನ್ನ ಊಟದ ಚಿಂತೆಯಿಲ್ಲ. ಬಾಣಂತಿಗಿಷ್ಟು ಅನ್ನಮಾಡಿ ಬಡಿಸಿದರೆ ಆಯಿತು. ಅಕ್ಕನಿಗೆ ಹಸಿವು ತಾಳದು. ಅವಳು ಹಣ್ಣು-ಹಾಲು ತೆಗೆದುಕೊಂಡಾಳು. ಬಿಸಿಲೇರುವದರೊಳಗಾಗಿ ಎರಡುಕೊಡ ಸೀನೀರು ತಂದು, ಬಾಣಂತಿಗೆ ಎರೆದು, ಅವಳ ಊಟ, ಮುಗಿಸಿಬಿಡೋಣವೆಂದು ಭರಭರನೆ ಹೋಗಿ ನೀರು ತಂದು ಇಟ್ಟಳು. ಅಡಿಗೆಯ ಆಡಂಬರವಿಲ್ಲ. ಇದ್ದಲಿ ಒಲೆ ಹೊತ್ತಿಸಿ-ಚಿಕ್ಕ ಗಿಳಲಿನಲ್ಲಿ ಸೆರೆ ಅಕ್ಕಿ ಹಾಕಿ ಅನ್ನಕ್ಕಿಟ್ಟಳು. ಹಸಿದ ಬೆಕ್ಕಿನಂತೆ ಅರ್ಧೋನ್ಮೀಲಿತ ನಯನಳಾಗಿ ಅಕ್ಕ ಅಡುಗೆಯ ಮನೆಯಲ್ಲಿ ಅಡ್ಡಾಗಿದ್ದಳು. ಬಾಣಂತಿ ಕೂಸನ್ನು ಮಗ್ಗುಲಲ್ಲಿ ಮಲಗಿಸಿಕೊಂಡು ತನ್ನ ಕತ್ತಲು ಕೋಣೆಯಲ್ಲಿ ಪವಡಿಸಿರಬೇಕು. ಇದೇ ಸಮಯವೆಂದು ರಿಂದಕ್ಕ ಮೆಲ್ಲಗೆ—

"ಭಾಗೂ-ನಿದ್ದಿ ಹತ್ತೇದೇನs ? ಏಕಾದಶಿ ಇಷ್ಟಲಗೂನ ಬಾಧಿಸಿತೇನು? ಒಂದ ಮಾತ ಕೇಳಬೇಕಂತೀನಿ. ಎಚ್ಚರಿದ್ದೀ ಏನು? "

"ಏನ ನಿನ್ನ ಪುರಾಣಾ ? ಅಶನಯಿಲ್ಲದ ಹೊಟ್ಟಿ-ನಿದ್ದಿ ಯಾಕ ಸುಡುಗಾಡ ಹತ್ತೀತು. ಏನದು ಮಾತು ?"

"ಮನೀ ಭವಣೀ ನೋಡಕೀದಿ. ಕೂಸು-ಭಾಣಂತೀ-ಕೂಳಿಲ್ಲದ ಏಲಿವಿಲಿ ಅಂತಾವs. ರಾಘುಂಣಂತೂ ತರೂ ಬರೂ ಆಶ್ಯಾ ಮುಗೀತು. ಇದೊಂದು ಬಾಣಂತೆನಾ ಹ್ಯಾಂಗಾರ ಪಾರಗೆಡವು. ಮೊನ್ನೆ ನಿನ್ನ ಪೋಟಗೀ ರೂಪಾಯಿ ಬಂದೂ ಅಲಾ. ಒಂದ ಹತ್ತಿಪ್ಪತ್ತು ರುಪಾಯ್ನರಾ ಕೊಡು. ಕಂಣಲೇ ಪಾಪಾ ನೋಡಬ್ಯಾಡಾ."

"ಹೂಂ. ತಗೊಂಡೀ ಅವ್ವಾ ರುಪಾಯೀ. ನಿನ್ನ ಅಂಣಗೇನ ರಂಡ್ಯಾರ್ನ ಮಾಡಲಿಕ್ಕೆ ನಾ ಹೇಳಿದ್ನೆ ? ಇಂವಾ ಹೊರಗ ಚೈನೀಮಾಡಿ ಮಕ್ಕಳ ಮರೀ ಕೈಯಾಗ ಪರಟೀ ಕೊಡೂದು ಖರೇ ಅಂತ ಎಂದೋ ಗ್ವಾಡೀವಳ್ಯಾಲ ಸುಂಣಾದ ಬಟ್ಟ ಇಟ್ಟಿದ್ದೆ. 'ಇದು ಪೂರಸೂ ಧಂದೆ ಅಲ್ಲಾ ರಾಘೂ' ಅಂತ

ಹೇಳಿದ್ರ–'ನಮ್ಮ ಸುಖಾ ಇವರಿಗೆ ಸಹನಾಗೊಲ್ಲದು' ಅಂತ ಹೇಳಿದಳು, ಒಳಗ ಮಲಗಿದ ಆ ಚದರೀ ಈಗ ಉಣತಾಳ ಸುಖಾ ಎರಡೂ ಕೈಲೇ ಬಳಕೊಂಡು. ಘಳಸೂ ಘುಸ್ತರಸೂ ಚಿಂತಿ ಇದ್ರ ತಿಳೀತಿತ್ತು ನಿಮ್ಮ ಅಂಣಗ. ಮರಾಮರಾ ಮರಗಿ, ದುಡದು ಸಾಯೂ ತನಕಾ ಮುದುಕ ಘಳಿಸಿದ ದುಡ್ಡಿಗೆ ಹೆಗ್ಗಣ ಹತ್ತಿಧಾಂಗ ಹತ್ತಿ ಮನೀ ಕೆಡರಿ ಒಗದಾ. ಈಗ ಭೋಗಸನ್ನು. ನಾಳೆ ಮನೀನೂ ಲೀಲಾವಿಗೆ ಬಂದ್ರ ಹಾದೀ ಹೆಣಾ ಆಗಬಾರದು ಅಂತ ನಾಕ ದುಡ್ಡ ಇಟಗೊಂಡೀನಿ. ಅದನ್ನೂ ಈಡ ಮಾಡ್ಲೇನು ನಿಮಗ ?"

"ಭಾಗೂ. ಮೆಲ್ಲಗ ಮಾತಾಡು. ಕರಳಿಗೆ ಒಂದು ತುತ್ತ ಕೂಳಿಲ್ಲದಽ ಬಾಣಂತಿ ಒಳಗ ಮಲಗ್ಯಾಳ. ಮೊದಲೇ ಸಂಕಟ ಇಟ್ಟದಽ. ಮ್ಯಾಲ ಬರೀ ಕೊಡಬ್ಯಾಡಾ."

"ಹೌದಽ, ನನ್ನ ಮಾತು ಈಗ ಬರೀ ಆದೂ ಏನ ನಿಮಗ. ಆ ಬೋಕಾಣೀನ ಅಲ್ಲಽ ರಾಘೂನ್ನ ಅಡ್ಡ ಹಾದೀ ಹಿಡಿಸಿದಾಕಿ. ತಾನಽ ಸಡ್ಲ ಬಿಟ್ಟಿದ್ದಕ್ಕ ಈಗ ಭೋಗಸ್ತಾಳ. ತಾಳಿ ಒಂದ ಉಳದಽದ. ಅದರಾಗಿನ ಚೂರ ಭಂಗಾರ್ನೂ ಈಡ ಮಾಡನ್ನು ಅವಗಽ. ಮುದುಕ ಸತ್ತು ನಾಕ ವರ್ಷದಾಗ ಮನೀ ಅನ್ನೂದು ಜಲದೊಳದ ಹೋತು."

"ವೈಂಸಽ, ನನ್ನ ತಾಳೀ ಮಾತು ತಗೀ ಬ್ಯಾಡ್ರಿ, ನಾ ಏನ ನಿಮಗ ದುಡ್ಡುಬೇಡಲಿಕ್ಕೆ ಬಂದಿದ್ದಿಲ್ಲಾ. ಭೋಗದಾಗ ಇದ್ದದ್ದನ್ನ ಅನಭೋಗಸ್ತೀನಿ. ಇರೂ ತನಕಾ ನೀವೂ ಏನ ಈ ಮನ್ಯಾಗ ಸುಖಬಟ್ಟದ್ದು ಸುಳ್ಳ ಅಲ್ಲಾ. ಅತ್ತೀ ಮನೀ ಆಧಾರಿದ್ರ ಇಲ್ಯಾಕ ಬಂದ ಸೇರತಿದ್ರಿ ? ನಿಮ್ಮ ಖುದ್ದರಗೇಡಿ ಸ್ವಭಾವ ಎಲ್ಲ್ಯಾರೆ ನಿಮ್ಮನ್ನ ನಿಂದರಿಸಿ ಕುಡತ್ತಿತ್ತಽ. ಈ ಮನೀ ಅಂತ ಇಷ್ಟದಿನಾ ಅರೀ ನಿಂತಿರಿ. ಕಣ್ಲೆ ನೋಡಲಿಕ್ಕೆ ಆಗದಿದ್ದರ ಝಾಡಿಸಿ ಕೊಂಡು ಹೋಗಬೇಕಾಗಿತ್ತು—ಯಾರ ಅಡ್ಡನಿಂತ ನಿಮ್ಮನ್ನು ತರಬಿದ್ರೂ?"

ಅಡುಗೆಯ ಮನೆಯ ಬಾಗಿಲಿಗೆ ಬಂದು ಜಾನಕಿ ಗರ್ಜಿಸಿದಳು. ತನ್ನ ಮನೆ,'ತನ್ನ ಸೌಭಾಗ್ಯ, ನಿಂದಿಸಿದ್ದಕ್ಕೆ ಅವಳ ಕೋಪ ನೆತ್ತಿಗೇರಿತ್ತು. ಎಲ್ಲಕ್ಕೂ ದದಾತಿಯಾದಾಗ ಸಿಟ್ಟಿಗೆ ನೆರೆ ಬರುತ್ತದೆ. ರಿಂದಕ್ಕ ಚಟ್ಟನೆದ್ದು ಜಾನಕಿಯನ್ನು ಬಾಣಂತಿ ಕೋಣೆಗೆ ಕರೆದೊಯ್ದಳು ಅವಳನ್ನು ಹೊರಸಿನ ಮೇಲೆ ಕುಳ್ಳಿರಿಸಿ ಬಾಗಿಲು ಮುಂದೆ ಮಾಡಿಬಿಟ್ಟಳು. ಆದರೇನು ? ಭಾಗವ್ವನ ಅಭಿಮಾನ

ವನ್ನು ಜಾನಕಿ ತಿವಿದಿದ್ದಳು. ಆ ಗಾಯದ ನೆತ್ತರ ಇನ್ನೂ ಪುಟಿಯುತ್ತಿತ್ತು. ಅಡುಗೆಯ ಮನೆಯ ಛಾವಣಿ ಹಾರುವಂತೆ ಅವಳು ಅಲ್ಲಿಂದಲೇ ಕೂಗಿದಳು–

" ಇದನೋಡ ಜಾನಕೀ, ಹಂಗ ಹರದವರಿಗೆ ನಿಂಗಸ ಪರಿವಿ ಏನೂ ಅಂತs. ನಾ ಏನ ಈ ಮನೀ ಕೂಳಿಗೆ ಬಂದ ಬೀಳಲಿಲ್ಲಾ. ನಿನ್ನ ಗಂಡಾ ಇರೂ ಅಂತ ಅಂಗಲಾಚಿ ಬೇಡಿಕೊಂಡಲ್ಲೇ ನಿಂತೆ! ನಾಕ ವರಷರೇ ಈ ಮನೀ ನೋಡಕೊಂಡೆ. ಅದೂ ಇರದಿದ್ರ–ಎಂದೋ ಹಾಳಾಗಿ ಹೋಗತ್ತಿತ್ತು. ಅಕಡೆ ರಾಘ್ಯಾ ತಾರೀ ಮನೀ, ಇಕಡೆ ನೀ ತೌರಮನೀ ತುಂಬಿದ್ರಂತೇ ಹಿಂಥಾ ಪರಿಸ್ಥಿತಿ ಬಂತೂ. ನಿಮ್ಮ ಅಪ್ಪಾ ಅಂಣಾ ತಿಂದ ಕೂತ್ರಲಾ ಈಗ ಬರಬೇಕಾಗಿತ್ತ ನಿನ್ನ ಬದಕಿಸಲಿಕ್ಕೆ ?"

ಜಾನಕಿಯ ತಾಳ್ಮೆಯೂ ಮೀರಿತು. ತನ್ನ ತೌರು ಮನೆಯ ವಿನಾಕಾರಣ ನಿಂದೆ ಅವಳಿಗೆ ತಡೆಯಲಿಲ್ಲ. ಬಾಣಂತಿ ಕೋಣೆಯ ಬಾಗಿಲನ್ನು ಧಡಾರನೇ ತೆಗೆದು ಎದ್ದವಳೇ

ನನ್ನ ತೌರಮನೀ ನಿಂದಾ ಮಾಡಬ್ಯಾಡಾ. ನೀ ಕೂಳಿಗೆ ಬಿದ್ದಾಕಿ. ನಿನಗ ಯಾಕ ನನ್ನ ಮನೀ ಉಸಾಬರೀ. ನೀ ಹತ್ತೀ ಹೆಗ್ಗಣಧಾಂಗ ತೌರ ಮನೀಗೆ. ನನ್ನ ಮನೀ ನಾನು, ನನ್ನ ಗಂಡ ಲೂಟಿಮಾಡತೇವು. ನೀ ಯಾರs ಚದರಿ ಕೇಳಾಕಿ ?''

ಇಂಥ ದಿವ್ಯ ವಿಶೇಷಣಗಳ ಮಾಲೆ ಕೊರಳಲ್ಲಿ ಬಿದ್ದುದನ್ನು ಕಂಡು ಭಾಗವ್ವ ಕಾಲಪ್ಪಳಿಸುತ್ತ–

" ಇಗಾ ಹೊಂಟ ನಡದೆ, ಮಟಮಟಾ ಮಧ್ಯಾಹ್ನದಾಗ, ಹನೀ ನೀರಿಗೆ ಎರವಮಾಡೀ ನನ್ನs. ಅದರ ಪಾಪ ಹತ್ತದs ಹೋಗಲಿಕ್ಕಿಲ್ಲಾ. ಹೆಣ್ಣಿನ ಶಾಪ ಅದ ಅದು. ನಿನ್ನ ಮಕ್ಕಳ ಮರೀನ್ನ ವಿಲಿವಿಲಿ ಅನಸದ ಬಿಡೂ ದಿಲ್ಲಾ. ಇರೂ ಇನ್ನ ಈ ಸ್ಮಶಾನದಾಗ ನೀನs."

ಎಂದು ದೇವರ ಮನೆಗೆ ಹೋಗಿ—ಮೈಲಿಗೆಯಲ್ಲಿಯೇ ದೊಡ್ಡ ದೇವರ ಪೆಟ್ಟಿಗೆಯಹತ್ತಿರವಿದ್ದ ತನ್ನ ಗಂಟನ್ನು ತೆಗೆದುಕೊಂಡು–ಅತ್ತಿತ್ತ ನೋಡಿ " ಉಫ್ " ಎಂದು ದೇವರ ಮುಂದಿನ ನಂದಾದೀಪವನ್ನು ಆರಿಸಿ, ಹೊರಗೆ ಬಂದು, ಕೋಲಿಗಿದ್ದ ತನ್ನ ಸೀರೆಯನ್ನು ಎಳೆದುಕೊಂಡು, ಮುಂಚು ತೂರು ವಂತೆ ಕೈಮಾಡಿ ಬಿರಬಿರನೆ ನಡೆದುಬಿಟ್ಟಳು. ಪಾಪ ! ಆರಿದ ದೀಪ ಅಳು ಮುಖದಿಂದ ಧೂಪ ಧೂಮವನ್ನು ದೇವರ ಕೋಣೆಯಲ್ಲಿ ಉಸುರಿ ತಂಣ

ಗಾಯಿತು. ನಂದಿದ ದೀಪವನ್ನು ಕಂಡು ರಿಂದಕ್ಕ ಕಳವಳಗೊಂಡು ಧಾವಿಸಿ ಬಂದು, ಕಡ್ಡಿಗೀಚಿ, ದೀಪಹಚ್ಚಿದಳು. ರಿಂದಕ್ಕನಿಗೆ ಭಾಗವ್ವನ ಶಾಪವಾಣಿ ಭಯಂಕರವೆನಿಸಲಿಲ್ಲ. ಆದರೆ ಮನೆಯ ಮಾಂಗಲ್ಯದ ಕುರುಹಾದ ನಂದಾದೀಪವಾರಿಸಿದ ಅವಳ ಕೃತಿ–ಅಶುಭ ಕೃತಿ–ಕರಾಳವೆನ್ನಿಸಿತು. ತಾನು ಯಾವ ಮುಖದಿಂದ ಅವಳ ನೆರವು ಕೇಳಿ ಈ ಕಾಂಡ ರಚಿಸಿದ ಪಾಪ ಕಟ್ಟಿಕೊಂಡೆನೆಂಬ ನೋವು ತಿವಿಯತೊಡಗಿತು. ಸೋತ ದೇಹವನ್ನು–ನೊಂದ ಮನಸ್ಸನ್ನು–ಎತ್ತಲಾರದೆ ಎತ್ತಿಕೊಂಡು ಬಂದು, ಮತ್ತೆ ಒಲೆಯ ಮುಂದೆ ಸ್ಥಾನಾಪನ್ನಳಾದಳು. ಆ ವಿಷಣ್ಣ ಜೀವಕ್ಕೆ ಏನೂ ಬೇಡವಾಗಿತ್ತು. ಆರಿದ ಒಲೆ–ಅತ್ತಿಗೆಯ ನೆನಪು ಕೊಟ್ಟಿತು. ಮತ್ತೆ ಒಲೆಹೊತ್ತಿಸಿ—ಝುಣಕವನ್ನು ಮಾಡಿ ಇಳಿಸಿದಳು. ಅವರ ಕದನ–ಕೋಲಾಹಲ ನಡೆದಾಗಲೇ ಅನ್ನ ಬೆಂದಿತ್ತು. ಅತ್ತಿಗೆಗೆ ಮೈಗೆ ನೀರು ಹಣಿಸಿ–ಊಟದ ಶಾಸ್ತ್ರಮುಗಿಸಬೇಕೆಂದು ಬಾಣಂತಿಯ ಕೋಣೆಗೆ ನಡೆದಳು.

ರಿಂದಕ್ಕ ಒಳಗೆ ಬಂದಾಗ ಜಾನಕಿ ಅಳುತ್ತ ಕುಳಿತಿದ್ದಳು. ಭಾಗವ್ವ ತುಂಬಿದ ಮನೆಯಲ್ಲಿನ ದೀಪವಾರಿಸಿ ಹೋದದ್ದನ್ನು ಅವಳೂ ಕಣ್ಣಾರೆ ಕಂಡಿದ್ದಳು. ಯಾವ ಮಾಯೆಯಿಂದ ಈ ಅರಿಷ್ಟ ಮನೆಯನ್ನು ಸೇರಿ–ಇಂಥ ಪ್ರಕಾಂಡ ಮಾಡಿಹೋಯಿತೆಂದು ಅವಳಿಗೂ ಚುಚ್ಚುತ್ತಿತ್ತು. ಅದೇ ಎದ್ದು ಅಳುತ್ತಿದ್ದ ಕೂಸನ್ನು ಅಕ್ಕಸದಿಂದ ಎತ್ತಿಕೊಂಡು,

" ನಿನ ಸುದ್ದೀ ಯಾಕ ಬಂದಿ ಭೂಮಿಗೆ ಭಾರ ಆಗಿ. ಇಲ್ಲೇನ ಸುಖಾ ಭೋಗಸೂದಿತ್ತು ನಿನಗ ? ಹನೀ ಹಾಲಿಲ್ಲದ ತೊಗಲನರೇ ಹೀರಿ ಬದಕೇನಂತೀಯಲಾ. ನನ್ನ ಜೀವಾನರೇ ಹೀರಿಬಿಡು " ಎಂದು ತಿವಿದಾಡಿದಳು.

ಈ ಅಭದ್ರ ನುಡಿಯನ್ನು ಕೇಳಲಾರದೆ ರಿಂದವ್ವ,

" ಜಾನಕೀ, ಯಾರ ಸಿಟ್ಟು ಯಾರ ಮ್ಯಾಲ ಹಾಕತೀ ? ಪಾಪದ ಕೂಸೇನ ಮಾಡೀತು ? ಎಲ್ಲಾ ನಮ್ಮ ಪ್ರಾಲಬ್ಧ. ಬಿಸಿಲಿನ ವ್ಯಾಳ್ಯಾದಾಗ ತಲೀ ಕೆಡಿಸಿಕೋಬ್ಯಾಡಾ. ನನಗೇನ ದೇವರ ಬುದ್ಧೀ ಕೊಟ್ಟ ನೋಡು, ಭಾಗೂನ್ನ ರೊಕ್ಕಾ ಕೇಳಲಿಕ್ಕೆ. ನಾನs ಸುಮ್ಮನಿದ್ರ ಈ ರಣಕತ್ಲಾ ಎಲ್ಲೆ ಆಗ್ತಿತ್ತು ? ಏಳು, ಕೂಸು ಮಲಗಿತ ಕಾಣಸ್ತದ. ಮೈಗೆ ಹಾಕತೀನಿ. ಒಂದಿಷ್ಟು

ಉಂಡ ಮಲಗಿದರ ಥಂಡಗ ಅನಿಸೀತು ರಾಘಂಣನ ಹಾದಿ ಯಾತರದು ? ಅವಾ ಬರೂದು ಒಂದನೋ ಎರಡೋ. "

" ಅವರ ಯಾವಾಗ ಬಂದ ಸುಖಾ ನನಗ ಅಷ್ಟುರಾಗ ಅದs. ಅವರ ಜೋಡಿ ಕೂಡಿ ೧೫ ವರುಷಾ ಸುಖಾ ಭೋಗಿಸಿದ್ದs ಸಾಕಲಾ. ಇನ್ನ ಮುಂದ ಏನ ಬಳಕೊಂಬೂದು ಉಳದದs. ನನ್ನ ಹಸಿವಿ-ನೀರಡಿಕಿ ಎಲ್ಲಾ ಅಟ್ಟಿ ಸೇದ ವೈಂಸs. ಏನಾರೆ ಆಗಿ ಸಾವ ಬಂದ್ರ ಸಾಕೂ ಅಂತೇನಿ. ಮುತ್ತೈದಿ ಸಾವ ಸತ್ತ ಪುಣ್ಯಾ ಬಂದೀತು. "

" ಒಳತ್ತನ್ನು. ಯಾಕ ಅರಿಷ್ಟ ನುಡೀತೀದಿ. ತುಂಬಿದ ಮನ್ಯಾಗ ನೀನs ಅಪಶಕುನ ನುಡದರ ಮಕ್ಕಳೂ-ಮರೀ ಯಾರ ಮೋತೀ ನೋಡಿ ಬದಕ ಬೇಕು ? ಈಗ ಕೂಳ ಚೊಬ್ಬುರ್ಯಾಗಿ ತಿರಗತಾವs. ಏಳು, ಎರಕೋ ಅಂತೀ. ಕೂಸ ಮಲಗಿತ ಕಾಣಸ್ತದ. "

ಜಾನಕಿ ತೊಡೆಯ ಮೇಲಿನ ಕೂಸನ್ನು ಮೆಲ್ಲನೆತ್ತಿ ಹೊರಸಿನ ಮೇಲೆ ಮಲಗಿಸಿ, ಅದರ ಮೈಮೇಲೆ ದುಪ್ಪಟಿ ಹೊಚ್ಚಿ ಬಚ್ಚಲು ಮನೆಗೆ ನಡೆದಳು. ಬಾಣಂತಿಗೆ ಮೈತುಂಬ-ತಲೆತುಂಬ ಎಂಣೆ ಹಚ್ಚಿ ಹೂಸಬೇಕು. ಎಲ್ಲಕ್ಕೂ ಎರವಾದ ಈ ಮನೆಯಲ್ಲಿ ಬಟ್ಟಲು ತುಂಬ ಎಂಣೆ ಎಲ್ಲಿಂದ ಬರಬೇಕು ? ಇದ್ದುದಷ್ಟನ್ನು ಹಚ್ಚಿ ಬೆಳಗಿನಲ್ಲಿಯೇ ಕೂಸನ್ನು ಎರೆದಾಗಿತ್ತು. ಉಗುರು ಬೆಚ್ಚಗಿನ ನೀರಿನಲ್ಲಿಯೇ ಮೈ ತೊಳೆದುಕೊಳ್ಳುವ ವಿಧಾನಕ್ಕೆ ಈಗ ಎರೆದು ಕೊಳ್ಳುವ ದೊಡ್ಡ ಹೆಸರು ನಿಂತಿತ್ತು ಈ ಮನೆಯಲ್ಲಿ. ಜಾನಕಿ ಮೂಕಳಾಗಿ— ನೀರು ಹಣಿಸಿಕೊಳ್ಳುತ್ತಲಿದ್ದಳು. ಹಿರಿಯ ಅತ್ತಿಗೆ ದೀಪವಾರಿಸಿ ಹೋದ ಶಲ್ಯ ಅವಳನ್ನು ತೀವ್ರವಾಗಿ ತಿವಿಯುತ್ತಿತ್ತು. ಅದರ ನೆನಪು ಉಮ್ಮಳಿಸಿ ಬಂದು ಮತ್ತೆ ಮೂಕ ಶೋಕ ಸುರುವಾಯಿತು. ಮಣೆಯ ಮೇಲೆ ಶಿಲಾ ವತ್ತಾಗಿ ಕುಳಿತವಳು-ನಡುವೆಯೇ ಜಾಗೃತಳಾಗಿ—

" ವೈಂಸs. ನನ್ನ ಹಣ್ಯಾಗ ಇನ್ನೂ ಏನೇನ ಬರದದೋ ಏನೋ ! ಮುಂಜಾನೆದ್ದು ಯಾರ ಮಾರೀ ನೋಡಿದೆನೋ ಇಂದs. ಅವರು ನಂದಾ ದೀಪಾ ಆರಿಸಿ ಹೋದರಲಾ. ನನಗs ನಾಕ ಬೈಕೊಂಡಿದ್ದರ ತಾಳಕೋತಿದ್ದೆ. ಅವರು, ಮನೀ-ಮಕ್ಕಳು ಏನ ಪಾಪಾ ಮಾಡಿದ್ದರು ? ತಮ್ಮ ತಮ್ಮನ ಮನೀ

ಹಾಳಾದರ ಇವರಿಗೆ ಸಂಕಟ ಅನಿಸಲಿಕ್ಕಿಲ್ಲೇನು ? ಅವರ ಬಾಯ್ಗ ಹತ್ತೂ ಬುದ್ಧೀ ದೇವರು ಯಾಕ ಕೊಟ್ಟಾನ ಅಂತೀನಿ."

"ಜಾನಕೀ, ಅವರವರ ಪಾಪ ಅವರವರ ಸುತ್ತ. ಅಕೀ ದೀಪಾ ಆರಿಸಿದಳಂತ ನಿನಗೇನು ಕೆಡಕ ಆಗೂದು ಅಷ್ಟರಾಗ ಅದ. ಈಗೇನ ಆಕೀಗೆ ದೇವರ ಕಲ್ಯಾಣ ಮಾಡಿದ್ದಾ? ' ನಿನಗ ಮರಾಮಡಾ ಅನಿಸಿ ಅಕೀ ಪಡೂ ಸುಖಾನೂ ಅಷ್ಟರಾಗ ಅದ. ರಾಘಂಣ ಒಂದಿಷ್ಟು ಅಳತ್ಯಾಗ ಇದ್ರ ಇದೆಲ್ಲಾ ಎಲ್ಲಿ ಆಗುತ್ತಿತ್ತು. ಕಟ್ನ ಕಡದೇನಂದ್ರ ಒಂದ ಕಾಳ ಜ್ವಾಳ ಇಲ್ಲ ಮನ್ಯಾಗ. ನಾಳೇ ಏನೂ ಅಂತ ನನಗ ಚಿಂತಿ. ಭಾಗೂ ಏನಾರ ನೆರವಾದಾಳಂತ ಮಾಡಿದ್ದರ ಹೀಂಗ ಮಾಡಿ ಹೋದ್ಲು. ಇದಕ ಗತಿ ಏನೂ ಅಂತ."

"ಸಾವ ಗತೀ. ಹಿಂದಿನ ಜನ್ಮದ ಪಾಪಾ–ಅನುಭೋಗಸ್ತೇವು. ಅಪ್ಪರಿ ಜೀವಂತ ಇದ್ರ ಝುಲ್ಲ ಇರಲಿಲ್ಲ. ನಾಕೂ ಕಡಿಂದೂ ನಾ ನಿರಾಧಾರ. ವೈಂಸ; ಮನೀ ಬರಕೊಟ್ಟ ಮೂರ ವರಸ ಆತ ಕಾಣಸ್ತದ. ನಾಳೆ ಅದೂ ಕೈಬಿಟ್ಟರ ಯಾ ಗಿಡದ ಬುಡಕ ಬಿದ್ದ ಸಾಯಬೇಕಾಗತದೋ ಏನೋ ?"

"ಕಾರಹುಂಣಿವಿಗೆ ಮೂರ ವರಸಾತು. ಭಾಗೂಗೇನೋ ಇದರ ದಶಿಂದ ಗೊತ್ತಿತ್ತು ಕಾಣ್ತದ. ಜಪ್ತಿ ಬರತದ, ಜಪ್ತಿ ಬರತದ— ಅಂತ ಹಾಡೇಹಾಡತಿದ್ಲು. ಅಕೀ ಮಾತೇನು ಥಾಕಯಿಲ್ಲದ್ದು. ಒಂದ ಖರೇ ಇದ್ರ ಹತ್ತು ಸುಳ್ಳ್ಯಾ. ನಾ ಲಕ್ಷ್ಯನ ಕೊಟ್ಟಿದ್ದಿಲ್ಲಾ."

"ಊರ ಕಾರಭಾರ ಅಕೀದು. ಇದ್ರೂ ಇದ್ದೀತು. ಏನ ನೇಮಾ ! ಕಾಡೂಕಾಲಾ, ನಮಗ. ಇಂಥಾ ಮಾತು ಸುಳ್ಳ ಆಗ್ತಾಂಗಿಲ್ಲಾ."

ಮೈ ಒರಸಿಕೊಂಡು ಜಾನಕಿ ತನ್ನ ಕೋಣೆಯಲ್ಲಿ ಹೋಗಿ–ಕುಂಕುಮದ ಬೊಟ್ಟಿಟ್ಟುಕೊಂಡು—ಊಟಕ್ಕೆಂದು ಅಲ್ಲೇ ಹಾಕಿದ ಮಣೆಯಮೇಲೆ ಕುಳಿತಳು. ಬಿಸಿಯಿರಲೆಂದು ಅಗ್ಗಿಷ್ಟಿಗೆಯಲ್ಲಿ ಇಟ್ಟ ತಂಬಿಗೆಯಿಂದ ನೀರು ಬಾಗಿಸಿಕೊಂಡಳು. ರಿಂದವ್ವ ಚಿಕ್ಕ ಗಿಂಡಿಯಲ್ಲಿ ಮಾಡಿದ ಅನ್ನ–ಝುಣಕ–ತಂದಿಟ್ಟು, ಅಂಗೈಯಗಲದ ತಾಟಿನಲ್ಲಿ ಒಂದು ಬದಿಗೆ ಉಪ್ಪು–ಮೆಂತೆದ ಹಿಟ್ಟನ್ನು ಬಡಿಸಿ ತಂದಳು. ಗಿಂಡಿಯಲ್ಲಿ ಕಾಸಿದ ಆಕಳ ಹಾಲಿಗೆ ಕಾಗದದಷ್ಟು ತೆಳುವಾದ ಹಳದಿಯ ಕೆನೆ ಬಂದಿತ್ತು. ಅದನ್ನೇ ತೆಗೆದು ತಾಟನಲ್ಲಿ ಬಡಿಸಿದಳು. ಕಾಸಿದ ತುಪ್ಪದ ವಿನಾ ತುತ್ತಿಡದ ಜಾನಕಿ ಆಕಳ ಹಾಲಿನ ಕೆನೆ

ಯೊಡನೆ ಐದು ತುತ್ತು ಅನ್ನ ಉಂಣುವ ದಿನ ಬಂದಿತ್ತು. ಅದರ ನೆನಪಾಗಿ ಅವಳ ದುಃಖ ಚಿಮ್ಮಿ ಬಂದಿತು. ಅನ್ನ ಕಲಸುವದನ್ನು ಬಿಟ್ಟು ಅವಳು ಮುಳು ಮುಳು ಅಳುವದನ್ನು ಕಂಡು ರಿಂಪವ್ವ—

"ಜಾನಕೀ, ಅನ್ನ ಮೊದಲೇ ಆರಿ ಗುಗ್ಗರಿ ಆಗೇದ. ಏನು ಅತ್ತು ಏನ ಫಲಾ. ಹಿಂದಿನದೆಲ್ಲಾ ಬರೀ ನೆನಪಾ. ಅಳಬ್ಯಾಡಾ. ಉಂಣು ತಾಯೀ. ಬಿಸಿ ಹಾಲ ಅವ. ಅದನ ಕಲಿಸಿಕೊಂಡು ಮುದ್ದೀಮಾಡಕೋ. ಸಾರಮಾಡ ಬೇಕಂದ್ರ—ಬ್ಯಾಳಿಸುದ್ದೀ ಇರಲಿಲ್ಲ. ನೆರಿಮನ್ಯಾಗಿಂಹ ಒಂದಿಷ್ಟು ತಂದೇ ನಂದ್ರ ಹೋಗಿ ಬೇಡ್ಲಿಕ್ಕ ಮಾರಿ ಇಲ್ಲಧಾಂಗ ಆಗೇದ. ಅವರ ಹಿಂದಿನ ಕಡಾನೂ ಕೊಡೂದದ."

"ಮಂದೀ ಕಡಾ ನಾವ್ ಮುಂದಿನ ಜಲ್ಮದಾಗೂ ಮುಟ್ಟಸೂದು. ಏನ ತಿಂದ್ರೂ ಅಷ್ಟೂ ಅಲಾ. ಕಲ್ಲತಿಂದೂ ಬದಕೇನ ಅಂತದ ಜೀವಾ. ಅನ್ನಾ ಕಾಲಕಸಾ ಮಾಡಿದ್ದಕ್ಕ ಈಗ ಅನ್ನಾನ್ನಗತಿಕರಾದೇವು. ವೈಂಸ್ಕೂ-ಅನ್ನ ಅಂದರ ವಿಷಾ ಆಗೇದ. ಗಂಟಲದಾಗೂ ಇಳೀವಲ್ಲದು. ಸಾಕ ನನಗೂ ಈಗ ಉಂಡದ್ದೂ. ಒಂದಿಷ್ಟು ಉಳದದ್ರ ಅವರಿಗಿಟ್ಟ ಬಿಡ್ರಿ. ಹುಡುಗೂರ ಊಟ ಆತೇನು ?

"ಅವೇನು ಮುಂಜಾನೇ ದಶಮೀ ತಿಂದಾವ. ಶಾಮಾ-ಶಾರೀ ಏಕಾದಶೀ ಮಾಡತೀವಂತ ಹಟ ಹಿಡಿದ ಕೂತಾರೂ. ಏನ ಸೇಂಗಾ—ಸಾಬೂದಾಣಿ ಅದನೂ ಮನ್ಯಾಗ. ಫಳಾರ ಮಾಡ್ಲಿಕ್ಕ."

"ಏಕಾದಶೀ ಏನ ಜನ್ಮಕ್ಕೂ ಹತ್ತೇದಲಾ. ಇವರೇನ ಹೊಸದಾಗಿ ಮಾಡಬೇಕಾಗೇದ."

ಗಟಗಟನೆ ಒಂದೆರಡು ಥಾಲಿ ನೀರು ಕುಡಿದು ಜಾನಕಿ ಉಂಣದೆ ಹಾಗೇ ಕುಳಿತಳು.

೫

ನೂರುವರುಷ ಆಯುಷ್ಯ ಪಡೆದವರಂತೆ–ನೆನೆಸುತ್ತಿರುವಾಗಲೇ ಅವಳ ಮಕ್ಕಳು ಒಳಗೆ ಓಡುತ್ತಬಂದರು. ಇನ್ನೂ ಏದುತ್ತಿದ್ದ ಶಾಮು ಹೇಳಿದ:

"ಅವ್ವಾ, ಅವ್ವಾ, ಹೊರಗ ಯಾರೋ ಕಚೇರೀ ಅವರೂ ಅಂತ, ಅಪ್ಪನ್ನ ಕೇಳಕೋತ ಬಂದಾರ. ಆರೇಳು ಮಂದಿ ಇದ್ದಾರ.''

"ರಿಂದವ್ವ ಗಾಬರಿಯಾಗಿ ಹೊರಗೆದ್ದು ಬಂದು ನೋಡಿದರೆ—ಊರಿನ ಗೌಡರು—ವಾಲೀಕಾರರು—ಇಬ್ಬರು ಯಾರೋ ಅಪರಿಚಿತರು—ಪಟ್ಟೇವಾಲಾ—ಸಿಪಾಯಿಯಂತಹ ಇನ್ನೊಬ್ಬ ಇಷ್ಟು ಜನ ಮನೆಯ ಅಂಗಳದಲ್ಲಿ ನೆರೆದಿದ್ದರು. ರಿಂದವ್ವ ಹೊರಗೆ ಬಂದುದನ್ನು ಕಂಡು ಗೌಡರು,

"ರಿಂದವ್ವಕ್ಕಾ, ರಾಘಂಣ ಇಲ್ಲ ಏನ ಮನ್ಯಾಗ? ಇವರು ಬೆಳಗಾಂವೀ ಸಾವಕಾರ್‍ರು. ಬೇಲೀಫನ್ನ ಕರಕೊಂಡ ಬಂದಾರ. ಮನೀ ವತ್ತೀ ಮುದ್ದತ ಮುಗದು ಕಚೇರಿ ಹುಕುಂ ಆಗ್ಯೈತಿ—ಇವರು ಮನೀ ಕಬಜಾ ತಗೋಬೇಕಂತ. ರಾಘಂಣನ್ನ ಕರೀಲಿಕ್ಕೆ ವಾಲೀಕಾರನ್ನ ಕಳಸೀನಿ."

"ಅಯ್ಯಯ್ಯ ಶಿವಪ್ಪಾ. ಇಲ್ಲಿಗೂ ಬಂತ್ಯಽ ಸ್ಥಿತಿ! ರಾಘಂಣನ ಹ್ಯಾಂಣ್ತಿ ಹಸೀ ಬಾಣಂತಿ! ನೀವಽ ಊರಾವ್ರು ಕೂಡಿ ನಮ್ಮನ್ನ ಅಡವೀ ಪಾಲ ಮಾಡತೀರೇನು? ರಾಘಂಣ ಬಂದೇನ ಮಾಡಾಂವಾ? ನೀ ಹಿರೇ ಮನಸ್ಯಾ ಇದ್ದೀ. ನೀನಽ ಬಗೀಹರಸಬೇಕಾದ ಮಾತು ಇದು."

"ನಾ ಏನ ಮಾಡ್ಲೆವಾ? ಸರಕಾರೀ ಹುಕುಂ ಹಾಂಗ ಅದಽ. ಇಂದಽ ಮನೀ ಖಾಲೀ ಆಗಬೇಕು. ದನಾ-ಕರಾ ಎಲ್ಲಾ ಬಂದೂ ಜಪ್ತ್ಯಾಗ. ಖುದ್ದ ಸಾವಕಾರ್‍ರಽ ಬಂದಾರ ಬೇಲೀಫನ್ನ ಕರಕೊಂಡು."

"ಶಿವಪ್ಪಾ, ಅಪ್ಪ ಇದ್ದಾಗಿಂದೂ ನಿನಗ ಈ ಮನೀ ವಹಿವಾಟ. ಇಲ್ಲೆ, ನಿನಗ ಅರೀದ್ದ ಏನದಽ. ರಾಘಂಣನ ಮೋತೀ ನೋಡಬ್ಯಾಡ. ಅವನ ಕೂಸು-ಕುನ್ನಿ—ಹಸೀಬಾಣಂತಿ ಹೇಣ್ತಿ. ಅವರ ಕಡೆ ನೋಡಿ ಸಂಬಾಳಸು. ಅಜ್ಜ ಆರತಲೀ—ಮುತ್ತ್ಯಾ ಮೂರತಲೀ ಮನೆತನಕ್ಕ ನಡಕೊಂಡ ಬಂದ ಮನೀ ಇದು. ಇದನ್ನ ಹ್ಯಾಂಗ ಬಿಡೂಣು. ಬೇಕಾರ ಆ ತಾರಿ ಇದ್ದ ಮನೀನೂ ನಮ್ಮದಽ. ಅದನ್ನ ಜಪ್ತೀಮಾಡ್ರಿ ಬೇಕಾರ."

"ರಿಂದವ್ವಕ್ಕಾ ಏನ ಹುಚ್ಚಿ ಅದೀ ನೀ! ತಾರಿ ಇದ್ದ ಮನೀ ಎಂದೋ ಅಕೀ ಹೆಸರಲ್ಗೆ ಮಾಡ್ಯಾನ ರಾಘಂಣ. ಹೆಣ್ಣಗಳು ನೀ—ನಿನಗ ಅವನ ಕಂತ್ರಾಟ ಏನ ತಿಳೀಬೇಕು?"

"ನನಗ ತಿಳಿಲೀ ಬಿಡ್ಲಿ. ನಾ ಏನ ಈ ಮನ್ಯಾಗಿಂದ ಜಪ್ಪಂದರೂ ಕಾಲ ಕಿತ್ತಾಕ್ಯಲ್ಲ. ಜೀವ ಇರೂ ತನಕಾ ಇಕಡೀ ಕಡ್ಡಿ ಅಕಡೆ ಆಗಿಗೊಡ್ಲಿಕ್ಕಿಲ್ಲ."

"ನೋಡ್ರೆವಾ, ನಾವ್ ಮನೀ ತಾಬೇಕ್ಕ ತಗೊಂಡು ಕೀಲೀ ಹಾಕೊಂಡು ಹೋಗಾವ್ರು. ಭಡಾಭಡಾ ಹೊರಬೀಳ್ರಿ. ಹಾಕ್ಯಾಡಕೋತ ನಿಂತ್ರ ಏನ ಆಗ ಬೇಕಾಗೇದ—"

ಸಾವುಕಾರರು ನಡುವೆ ಬಾಯಿ ಹಾಕಿದರು.

"ನಾ ಏನ ಹೋಗಾಕ್ಕಲ್ಲ. ಬಾಯಿಬಿಟ್ಟ ಹೇಳತೀನಿ—ಹಸೀ ಬಾಣಂತಿ ಇದ್ದಮನೀ ಅಂತ. ನಿಮಗೂ ಮಕ್ಕಳ ಮರೀ ಇದ್ದಾವಾದೀತು. ತಿಳಿದಾವ್ರಿದ್ದೀರಿ. ನಿಮಗ ಇನಾ ಏನ ಹೇಳೂದೂ ?"

"ಏ ಬುಡ್ಡೀ ಕ್ಯಾ ವಟವಟ ಲಗೇಜಿ ಸಾವಕಾರ. ಅಂದರ್ ಘುಸನೇಕಾ ಕ್ಯಾ ಡರ್ ಹ್ಯೆ-ಚಲೋತೋ" ಎಂದ ಬೇಲೀಫ.

"ಏ ಸಾಬಾ, ನಿನ್ನ ಮಾತು ನನಗೂ ತಿಳೀತಾವ. ನೀ ಒಳಗ ಬರೂದಾದ್ರ-ನನ್ನ ಹೆಣದ ಮ್ಯಾಲಿಂದ ಹಾದ ಬರಬೇಕಾದೀತು ನೋಡು"

ಎಂದು ಹೇಳುತ್ತ ರಿಂದವ್ವ ತಲೆಬಾಗಿಲಿನ ಹೊಸ್ತಿಲದ ಮೇಲೆ ದ್ವಾರ ದೇವತೆಯಂತೆ ಗಟ್ಟಿಯಾಗಿ ನಿಂತು ಬಿಟ್ಟಳು. ಗೌಡರು, ಸಾವುಕಾರರು, ಇದರಿಂದ ಒಂದಿಷ್ಟು ಬೆದರಿದರು. ಒಳನುಗ್ಗಿ ಬರುವ ಧೈರ್ಯ ಅವರಿಗಾಗಲಿಲ್ಲ. ಗೌಡರು ಇದ್ದೂರವರು. ರಿಂದವ್ವನನ್ನು ಬಲ್ಲವರು. ಈ ಮನೆಯ ಮಂಗಳಕ್ಕಾಗಿ ಅವಳು ದೇಹ ತೇಯುತ್ತಿದ್ದ ಬಗೆಯನ್ನೂ ಅರಿತವರು. ಆ ಮನೆಯ ಮೇಲಿನ ಅಭಿಮಾನದಿಂದ ಅವಳು ತಮ್ಮ ದಾರಿಗಡ್ಡಾಗುವದನ್ನು ಕಂಡು ಅವರಿಗೆ ಆಶ್ಚರ್ಯವೆನಿಸಲಿಲ್ಲ.

ಸರಕಾರೀ ಹುಕುಂ ಬಜಾಯಿಸುವ ಭಾರ, ಸಾವುಕಾರರು ಕೆಲಸ ಮಾಡಿಸಿಕೊಟ್ಟರೆ ಕೊಡಮಾಡಿದ್ದ ಕಾಂಚಾಣ ಇವೆರಡರ ಸೆಳೆತ ಅವರನ್ನು ಎಳೆಯುತ್ತಿತ್ತು. ಆದರೂ ಹೆಂಗಸಿನ ಮೇಲೆ ಕೈ ಎತ್ತಲು ವಾಲೀಕಾರರಿಗೆ ಹುಕುಂ ಕೊಡುವಷ್ಟು ಧೈರ್ಯ ಅವರಲ್ಲಿ ಅಂಕುರಿಸಲಿಲ್ಲ. ದಾರಿಗಾಣದೆ, ಸಾವುಕಾರರ ಮುಖವನ್ನು ಗೌಡರು-ಗೌಡರ ಮುಖವನ್ನು ಸಾವುಕಾರರು ನೋಡುತ್ತ ಸ್ತಬ್ಧವಾಗಿ ನಿಂತುಬಿಟ್ಟರು. ಕೋರ್ಟಿನ ಹುಕುಂ ಬಜಾಯಿಸ ಬಂದಾಗಲೇ ಬೇಲಿಫನ ಕೈ ಬೆಚ್ಚಗಾಗಿತ್ತು. ಆ ಋಣ ತೀರಿಸುವ ಪಣದಿಂದ ಅವನೇ ಧೈರ್ಯವಾಗಿ ಮುನ್ನುಗ್ಗಿ ಬಂದು, ವಜ್ರ ಕಠಿಣಳಾಗಿ ನಿಂತ ರಿಂದವ್ವನನ್ನು ರಟ್ಟೆಹಿಡಿದು ಬದಿಗೆ ಜಗ್ಗಿ ನುಗಿಸಿದ. ಆ ನೂಕಾಟಕ್ಕೆ ಜೋಲಿ ಹೋಗಿ,

ತಲೆಬಾಗಿಲಿಗೆ ಕೂಡಿಸಿದ ಹಿತ್ತಾಳಿಯ ಅಣಸಿಗೆ ರಿಂದವ್ವನ ಹಣೆ ಬಡೆದು ಬಳಬಳನೆ ನೆತ್ತರು ಸುರಿಯತೊಡಗಿತು. ಕಂಣಿಗೆ ಕತ್ತಲೆ ಬಂದು ರಿಂದಕ್ಕ ಅಲ್ಲೇ ಧೊಪ್ಪನೆ ಕುಸಿದು ಬಿದ್ದುಬಿಟ್ಟಳು. ನಡುಮನೆಯಲ್ಲಿ ನಿಂತು ಈ ಪ್ರಕಾರಂಡ ನೋಡುತ್ತಿದ್ದ ಜಾನಕಿ "ವ್ಯಂಸಽ" ಎಂದು ಕೂಗಿ ಓಡಿಬಂದು ಬಿದ್ದ ಅತ್ತಿಗೆಯ ತಲೆಯನ್ನು ತೊಡೆಯಮೇಲಿರಿಸಿಕೊಂಡು ಸೀರೆಯ ಸೆರಗಿನಿಂದ ಗಾಯವನ್ನು ಒತ್ತಿ, ರಕ್ತಸ್ರಾವವನ್ನು ಅದುಮಿ ಹಿಡಿಯಲು ಯತ್ನಿಸತೊಡಗಿದಳು. ಒದ್ದೆಯ ಅರಿವೆಯನ್ನು ತಂದು ಗೌಡ ಜಾನಕಿಯ ಕೈಯಲ್ಲಿ ಕೊಟ್ಟು, ಗಾಯವನ್ನು ಒತ್ತಿಹಿಡಿಯ ಹೇಳಿದ. ಉಳಿದವರು ಸುತ್ತು ನೆರೆದು ಈ ನೋಟ ನೋಡುತ್ತಿದ್ದರು. ಆಯಾಸದಿಂದ ಕಂಣು ಬಿಟ್ಟು ರಿಂದವ್ವ—

"ಜಾನಕೀ; ಋಣಾ ಮುಗೀತವಾ ಈ ಮನೀದು. ಆಷಾಡ ಏಕಾದಶೀ ವೈಕುಂಠದ ಕರೀ ಬಂತು. ರಾಘಂಣ ಬರಲಿಲ್ಲಽ"

ಎಂದು ಕೇಳಿದಳು. ಅವಳ ಮುಖದ ಮೇಲೆ ಜಾನಕಿಯ ಎರಡು ಬಿಸಿ ಕಂಬನಿ ಉದುರಿ ಕೊನೆಯ ತರ್ಪಣ ಕೊಟ್ಟವು. ರಿಂದವ್ವನ ಗೋಣು ಹೊರಳಿ ಬದಿಗಾಗುತ್ತಿದ್ದಾಗ ರಾಘಂಣ ತಲೆಯ ಮೇಲಿನ ಮುಂಡಾಸವನ್ನು ಬಗಲಲ್ಲಿರಿಸಿಕೊಂಡು ಪಾಲೀಕಾರನನ್ನು ಮುಂದೆ ಮಾಡಿಕೊಂಡು, ಅಧೋವದನನಾಗಿ ಅಂಗಳದಲ್ಲಿ ನಡೆದು ಒರುತ್ತಿದ್ದ.

ರಿಂದವ್ವ ಅವನನ್ನು ಒಮ್ಮೆ ಕಂಡು ಕಣ್ಮುಚ್ಚಿದಳು.

# ಆರಿದ ದೀಪ

ಕರಿಯ ಕಂಬಳಿ, ಅದರ ಮೇಲೊಂದು ಬಿಳಿಯ ವಲ್ಲಿ. ಸಾರಣೆ ಕಾರಣೆಯಿಂದ ಮನೆಯನ್ನು ಸಿಂಗರಿಸಿದಂತೆ ಮತ್ಕುಣ ಹತ್ಯಾರೇಖೆಗಳು ಧಾಳವಾಗಿ ಮೂಡಿ, ಬಿಳಿಯ ವಲ್ಲಿಯ ಸೊಬಗನ್ನು ಹೆಚ್ಚಿಸಿದ್ದವು. ಹಾಸಿಗೆಯ ಒಂದು ತುದಿಗೆ ಟೆಂಗಿನ ಜುಟ್ಟದ ತಲೆದಿಂಬು. ಸುಬ್ಬಣ್ಣನ ಬೆವರು ಕುಡಿದು ಕುಡಿದು—ಕಹಿ ಕಷಾಯವನ್ನು ಕುಡಿದವನಂತೆ ಮುಖ ಕಪ್ಪು ಮಾಡಿದೆ, ಆ ತಲೆದಿಂಬು ಕೂಡ. ಸುಬ್ಬಣ್ಣ ಹಾಸಿಗೆಯ ಮೇಲೆ ಅರ್ಧ ಪ್ರಜ್ಞಾವಸ್ಥೆಯಲ್ಲಿ ಕಾಲ ಮೇಲೆ ಕಾಲು ಹಾಕಿಕೊಂಡು ಸ್ಥಾನಾಪನ್ನನಾಗಿದ್ದ.

ಅವನ ಮುಂದೆ ಅನತಿದೂರದಲ್ಲೊಂದು ಎಣ್ಣೆಯ ಬುಡ್ಡಿ. ಬೆಳಕಿಗಿಂತಲೂ ಹೊಗೆ ಮೋಡಗಳ ಸಂತೆಯೇ ಕೋಣೆಯ ತುಂಬ ಹಬ್ಬಿತ್ತು. ಆ ದೀಪದ ಒಂದು ಕುಡಿಯಲ್ಲಿಯೇ ಅಚಲವಾಗಿ ಅವನ ದೃಷ್ಟಿ ನೆಟ್ಟಿತ್ತು.

ದೀರ್ಘ ನಿಶ್ವಾಸದೊಂದಿಗೆ ಸುಬ್ಬಣ್ಣ "ನಾನು ಯಾರು?" ಎಂದ ತನ್ನಲ್ಲಿ ತಾನೇ!

"ಮೂವತ್ತು ವರುಷಗಳ ಮಾತು. ನನಗಾಗ ೧೮-೨೦ ವರುಷ. ಕುಡಿಮೀಸೆಯ ತುಂಬಿದ ಮೈಯ ಕಾಮಣ್ಣನಾಗಿದ್ದೆ. ಅಳ್ಳಿಯ ಅಂಡಿಗೆಯೊಂದನ್ನು ಗಾಡಿಯಲ್ಲಿ ಒಬ್ಬನೇ ಹೇರಿ ಬೆಳ್ಳಿಯ ಖಡೆಯನ್ನು ಇನಾಮು ಪಡೆದಿದ್ದೆ. ನನ್ನನ್ನು ಕಂಡು ಎಷ್ಟು ಜನರಿಗೆ ಪ್ರೀತಿ! ತಬ್ಬಲಿ ಕೂಸೆಂದು ನನ್ನನ್ನು ತಮ್ಮವನನ್ನಾಗಿ ಮಾಡಿಕೊಳ್ಳಲು ಹವಣಿಸಿದರು. ಅದೇ—ಅವರು ತೋರಿಸಿದ ಮೆಚ್ಚುಗೆಯೇ ನನಗೆ ಮುಳುವಾಯಿತು. ನನ್ನ ದಾಯಾದಿಗಳಿಗೆ ನನ್ನ ಈ ಉತ್ಕರ್ಷ ತಡೆಯಲಿಲ್ಲ ಎಷ್ಟಾದರೂ ದಾಯಾದಿಗಳು! ಒಂದು ಹೊಲದ ಸೀಮೆಯ ಕಲ್ಲಿಗಾಗಿ ನನ್ನ ಜೀವನವನ್ನೇ ಹಾಳು ಮಾಡಿದರು. ಮನೆಯಲ್ಲಿ ತಲೆಯೊಡೆದುಕೊಂಡು, ನಾನೇ ಒಡೆದೆನೆಂದು ಸರಕಾರದಲ್ಲಿ ದೂರಿಕೊಂಡರು. ತಮ್ಮ ಮಾನಕ್ಕೂ ಹೆದರದೆ, ನಾಚಿಕೆಗೇಡಿಗಳಾಗಿ, ತಮ್ಮ ಮನೆಯ ಹುಡುಗಿಯನ್ನು ಕೆಡಿಸಿದೆನೆಂದೂ ಆರೋಪಿಸಿದರು. ಆ ಪಾಪದ ಬಾಸಿಂಗ ಕಟ್ಟಿ ಸೆರೆಮನೆಗೆ

ಕಳಿಸಲೂ ಹವಣಿಸಿದರು. ಆದರೇನು ? ದೇವರು ದೊಡ್ಡವ. ನನ್ನನ್ನು ಹೊಟ್ಟೆಯಲ್ಲಿ ಹಾಕಿಕೊಂಡು ಬದುಕಿಸಿದ. ನಮ್ಮ ಸಾಹೇಬರು—ಅಹುದು. ಅವರೇ ನನ್ನ ಪಾಲಿನ ದೇವರು. ನನ್ನ ಪೂರ್ವಜನ್ಮದ ತಂದೆ-ತಾಯಿಗಳು. ಇದ್ದ ಹೊಲಸನ್ನು ಅಳಿಸಿ ತಮ್ಮಲ್ಲಿರಿಸಿಕೊಂಡು ನನ್ನನ್ನು ಸಲುಹಿದರು. ”

ಸುಬ್ಬಣ್ಣ ಅಲ್ಲಿಯೇ ಬಿದ್ದ ಒಂದು ಕಡ್ಡಿಯಿಂದ ಚಿಮಣಿಗಂಟಿದ ಕಾಡಿಗೆಯ ಉಂಡೆಯನ್ನು ಉದುರಿಸಿ, ದೀಪವನ್ನು ಒಂದಿನಿಸು ಥಾಳವಾಗಿಸಿದ.

ಮತ್ತೆ ಅವನ ಸ್ಮೃತಿಪಟಲದ ಮೇಲೆ ಕಳೆದ ಬಾಳಿನ ಚಿತ್ರಗಳ ಧಾರಾವೃಷ್ಟಿಗೆ ಅನುವಾಯಿತು :

“ ನಾನು ಹುಟ್ಟಿದ ಹಳ್ಳಿ—ಅಲ್ಲಿಯ ಜನ—ಯಾಕೋ ನನಗೆ ಬೇಸರವನ್ನೇ ಉಂಟುಮಾಡಿದ್ದಾರೆ. ಹೋಗುತ್ತೇನೆ, ವರುಷಕ್ಕೊಂದೆರಡು ಸಲ ಲಾವಣೀ ವಸೂಲಿಗೆಂದು. ಸುಬ್ಬಣ್ಣನ ಹೊಲಕಲ್ಲ! ಸಾಹೇಬರ ಹೊಲಕ್ಕೆ ! ಯಾರು ಎದೆ ಮಾಡಿದ್ದಾರೆ ನನ್ನ ಮೇಲೆ ಕೈಎತ್ತಲು? ಹೋದಾಗೊಮ್ಮೆ “ ಸುಬ್ಬಣ್ಣಾ, ನಿಂದ್ಽ ನೆಟ್ಟಗ—ಅಽರಾಮು ಇದ್ದೀ ” ಅನ್ನುವರು. ನನಗೂ ಅದೇ ಸರಿ ಎನಿಸಹತ್ತಿದೆ. ಸಾಹೇಬರಲ್ಲಿ ನನಗೆ ಯಾತರ ಕೊರತೆ ! ಸಮೃದ್ಧಿಯಾಗಿ ಊಟ. ಅವರು ಹಾಕಿಕೊಂಡು ಬಿಟ್ಟ ಅರಿವೆ—ಮೈತುಂಬ. ನಾನೇನು ಮತ್ತೆ ಮಾಮಲೇ ಮಾಡಬೇಕಾಗಿದೆ ? ದುಡಿತ ಹೌದಲ್ಲೋ ! ಅವರ ಉಪ್ಪುಂಡ ಮೇಲೆ ದುಡಿತದ ಹಂಗೇನು ? ಮಾನ ಉಳಿಸಿದ ಮಹಾ ಪುಣ್ಯ ಅವರದು. ಅವರೇ ಜೀವದಾನ ಮಾಡಿದರು. ಇಲ್ಲದಿದ್ದರೆ ಸುಬ್ಬಣ್ಣಾ, ನೀನೇನಾಗುತ್ತಿದ್ದೆ ?”

ದೀಪ ಹೊರಗಿನ ಸುಳಿಗಾಳಿಯ ಅಲೆಯಿಂದ ಚಲಿಸಿ ಗೋಣು ಹಾಕಿದಂತೆ ಸುಬ್ಬಣ್ಣನ ನುಡಿಗೆ ಸೈ ಎನ್ನುವಂತಿತ್ತು.

ಯಾರೋ “ ಸುಬ್ಬಣ್ಣಾ ” ಎಂದು ಕೂಗಿದಂತಾಯಿತು. ಪ್ರಜ್ಞೆ—ನಿದ್ರೆಗಳ ನಡುವೆ ಜೀಕುತ್ತಿದ್ದ ಸುಬ್ಬಣ್ಣನಿಗೆ ಕೂಗಿದ ದನಿಯು ಗುರುತು ಹತ್ತಲಿಲ್ಲ. ಸರಿಯಾಗಿ ಕೇಳಿಸಲೂ ಇಲ್ಲ.

“ ಸುಬ್ಯಾಽಽ ”

ಕಂಣರಳಿಸಿ ಹಿಂದಕ್ಕೆ ನೆಗೆದಂತೆ ಮಾಡಿ, ಸುಬ್ಬಣ್ಣ ಚಟ್ಟನೆದ್ದು ಅಟ್ಟದ ಬಾಗಿಲಿಗೆ ಧಾವಿಸಿದ. ಸಾಹೇಬರು

“ ಒಂದ್ಽ ಸವನ್ಽ ಮೂರ ತಾಸಾತು, ಒದರತೀನಿ. ಯಾರಂತ ಕೇಳಿದೇನು? ಸತ್ತೀಯೋ ಇದ್ದಿಯೋ? ಅಂ? ಬೊಗಳು” ಸುಬ್ಬಣ್ಣನ ಕೈ ಖಲ್ಲಾ

ಟದ ಮೇಲೆ ಆಡಹತ್ತಿತು. " ಹೂಂ ಏನು ಬೊಗಳು, ನಿಂತ್ಯಾಕ ಕಲ್ಲಿನಾಂಗ? ನಾ ಏನಂತೀನಿ ಕೇಳಿಸ್ತೊ್ಯೀ ಇಲ್ಲೋ ? ಬಾಗಲದಾಗ ಯಾವುದೋ ನಾಯಿ ಒದರತ್ತದ. ಅದನ್ನಿಷ್ಟು ದೂರ ಹೊಡಿ ಅತ್ಲಾಗ "

ಸ್ವಿಚ್ ಒತ್ತಿ ದೀಪವಾರಿಸಿ ಸಾಹೇಬರು ಒಳಗೆ ತಮ್ಮ ಕೋಣೆಯಲ್ಲಿ ಮರೆಯಾದರು.

ಸುಬ್ಬಣ್ಣ ಬಾಗಿಲು ತೆರೆದು ಹೊರಗೆ ಬಂದಾಗ ಮುಸಲಧಾರೆಯಾಗಿ ಮಳೆ ಸುರಿಯುತ್ತಿತ್ತು, ಮುಗಿಲೇ ಹರಿದು ಬೀಳಲಿತ್ತೋ ಏನೋ ಅನ್ನಿಸು ವಂತೆ. ಜೊತೆಗೆ ಗಾಳಿ-ಗುಡುಗು-ಮಿಂಚಿನ ಅಬ್ಬರ. ಬೀದಿಯ ದೀಪಗಳು ನಿದ್ರೆಯಲ್ಲಿದ್ದವು. ಬಾಗಿಲಮುಂದಿನ ಕೈದೋಟ ದಾಟಿ— ಮುಖ್ಯ ಗೇಟು. ಅದನ್ನೂ ತೆರೆದ. ಹೊರಗೋಡೆಯ ನೆರೆಯನ್ನೇ ಆಶ್ರಯಿಸಿ ಒಂದು ನಾಯಿ, ಒಂದಿನಿಸು ಸ್ಥಳದಲ್ಲಿ ಇದ್ದುದರಲ್ಲಿಯೇ ಚಾಟಿ ಮಾಡಿಕೊಂಡು ತನ್ನ ಮರಿ ಗಳೊಡನೆ ಮುದ್ದೆಯಾಗಿ ಕುಳಿತಿತ್ತು. ಮಳೆಯ ಬಿರುಸು ಹನಿ-ಕುಳಿರ್ಗಾಳಿಯ ಆರ್ಭಟ ಹೆಚ್ಚಾದಾಗ ಮರಿಗಳ ಕ್ರಂದನ ತಾಯಿ-ನಾಯಿಯ ಎದೆಯನ್ನಿರಿಯು ತ್ತಿತ್ತು. ತಿಮಿರವನ್ನು ಭೇದಿಸಿ—ಆ ಕ್ರಂದನ ಸಾಹೇಬರ ನಿದ್ರೆಗೆ ಭಂಗ ತರು ತ್ತಿತ್ತು. ಸುಬ್ಬಣ್ಣನ ಆಗಮನವನ್ನು ಕಂಡು — ನಾಯಿ ತನ್ನ ಅವಸಾನ ನಿಮಿಷ ಸಮೀಪಿಸಿತೆಂದು ಭಾವಿಸಿತು. ಇಳಿಮುಖದಿಂದ—ಆರ್ದ್ರವಾದ ನೋಟದಿಂದ ಸುಬ್ಬಣ್ಣನನ್ನು ಎಡೆಬಿಡದೆ ನೋಡತೊಡಗಿತು. ಆ ನೋಟದಲ್ಲಿ—ಆ ಮುಖ ದಲ್ಲಿ ಅಂತಃಕರಣದ ಯಾಚನೆ, ದೈನಾಸದ—ಕ್ಷಮೆಯ ಭಿಕ್ಷೆ ಮೂರ್ತಿವತ್ತಾಗಿ ಮೂಡಿ ನಿಂತಂತಿತ್ತು. ಧಾರೆಯಾಗಿ ಹರಿದ ಕಂಣೀರಿನ ದಪ್ಪನಾದ ಕಲೆ ಯೊಂದು ನಾಯಿಯ ಮುಖದಲ್ಲಿ ಸ್ಫುಟವಾಗಿ ಮೂಡಿತ್ತು. ಸುಬ್ಬಣ್ಣ ನೋಡಿದ. ಕಂಣ್ತುಂಬ ನೋಡಿದ. ಕಂಣು ಬಿಡದ ಎರಡು ಕುನ್ನಿಗಳು; ಹಸೀ ಬಾಣಂತಿ ತಾಯಿ, ಆ ಎಳೆ ಮರಿಗಳಿಗೆ ತಾನೇ ಆಸರೆಯಾಗಿ ನಿಂತಿತ್ತು. ಆದರೂ ಚಳಿಯ ಇರಿತವನ್ನು ತಾಳದೆ ಕುನ್ನಿಗಳು ಕೂಗಿದಾಗ ತಾಯಿ-ನಾಯಿಯ ಎದೆಗೆ ಶಲ್ಯ ತಿವಿದಂತಾಗಿ, ಅಸಹಾಯತೆಗೆ-ನಿರ್ಗತಿಕತನಕ್ಕೆ ನಿರು ಪಾಯವೆಂದು ತಾನೂ ಕೂಗುತ್ತಿತ್ತು. ಸುಬ್ಬಣ್ಣನಿಗೆ ಈ ಸ್ಥಿತಿಯನ್ನು ಕಂಡು ಏನು ಮಾಡಲೂ ಅಸಾಧ್ಯವೆನಿಸಿತು. ಉಭಯ ಸಂಕಟದ ಇರುಕಿನಲ್ಲಿ ಸಿಕ್ಕು ತೊಳಲತೊಡಗಿದ. " ನಾನು ಹೊಡೆದರೆ ಇದೆಲ್ಲಿ ಹೋಗಬೇಕು ? ಸಾಹೇಬರು

ನನ್ನನ್ನು ಕೊಂದರೂ ಅಡ್ಡಿಯಿಲ್ಲ. ಈ ನಾಯಿ-ಮರಿ ಇಲ್ಲೇ ಮಡಗಲಿ" ಎಂದು ಒಳಗೆ ಹೊರಟು ನಡೆದ. ಬಾಗಿಲಿಕ್ಕಿ ಮತ್ತೆ ಹಾಸಿಗೆಯ ಮೇಲೆ ಕುಳಿತ. ಈ ಸಲ ಅವನ ಸ್ಮೃತಿಯ ಸಾಮರಸ್ಯ ನಾಯಿಯ ಪ್ರಸಂಗದಿಂದ ಕದಡಿತು. ಮದರಾಸಿನ ರಾಜಾ ಸ್ನಫ್-ಒಂದು ಸಲ ಮೂಗಿನ ಹೊಳ್ಳೆಯಿಂದ ಮೇಲೇರಿ ಶಿರಪ್ರಾಂತಕ್ಕೆ ತಗುಲಿದಾಗ ಪುನಃ ಅವನ ಚೇತನೆಗೆ ಚಾಲನೆ ದೊರಕಿತು.

"ಸಾಹೇಬರು ನನ್ನ ಹೊಲವನ್ನು ತೆಗೆದುಕೊಂಡು ಬಿಟ್ಟಂತೆಯೇ ಕಾಣುತ್ತದೆ. ತಮ್ಮ ಕಡೆಯ ಮಗ ರಂಗನ ಪಾಲಿಗೇ ಎಂದು ನಗೆಯಲ್ಲಿ ಎಷ್ಟು ಸಲ ಹೇಳಿಲ್ಲ ? ನನಗಾದರೂ ಅದರ ಹಂಬಲವೇಕೆ ?"

ಮತ್ತೆ ಒಂದೆರಡು ಸಲ ನಾಯಿಗಳ ಕೂಗು ಕರ್ಕಶವಾಗಿ ನಟ್ಟಿರುಳಿನ ಶಾಂತಿಯನ್ನು ಭೇದಿಸಿ ಬಂದಿತು.

"ನಾನು ಸತ್ತಮೇಲೆ ಹತ್ತಿಲೆ ಅನ್ನಹಾಕಲಿ. ವರುಷಕ್ಕೊಮ್ಮೆ ನೀರು ಬಿಡಲಿ. ನನಗೇನು? ನರಕವಾಗದಿದ್ದರಾಯಿತು."

"ಸುಬ್ಬ್ಯಾಽ. ನಿನ್ನ ಕೊಲ್ತೇನಿ ನೋಡು ಸೂ....ಮಗನಽ. ಅಗಾಳೇಽ ಒದರಿದೆ—ನಾಯೀ ಹೊಡೀ ಅಂತ. ಹೇಳಿದ್ದನ್ನ ಕೇಳಿ ಮಲಕ್ಕೊಂಡ್ಯೇನ ಮಗನಽ."

"ಇದ್ವಽ ಹೊಡದದ್ದೆ. ಮತ್ತ ಬಂದ್ವಽದ. ಮಳೀ ಬರತ್ವಽದ ಹೊರಗ. ಅದಕೂನು ಚಾಟಿನಽ ಇಲ್ಲಾ ಅಂತ ಇಲ್ಲಿಗೇ ಬರತ್ವಽದ."

"ಸಾಕ, ಸಾಕ ನಿನ್ನ ಆಶ್ರಯ. ನೀವೊಬ್ಬಽ ಇದ್ದದ್ದು ರಗಡ ಆಗೇದ, ಇನ್ನ ಅದನ್ನೊಂದು ಜೋಡೀಮಾಡಕೋ ಬ್ಯಾಡಾ. ಅದು ಹೋಗೂತನಕಾ ನಿಂತು ಹೊಡದ ಬಂದೀ ಭಲೋ ಆತು. ಇಲ್ದಿದ್ರ ನೋಡು—"

ಸುಬ್ಬಣ್ಣನಿಗೆ ಸಾವಿರ ಕೆಂಜಗ ಕಡಿದ ವ್ಯಥೆಯಾಯಿತು. "ನಾನು—ನಾಯಿ-ಜೋಡಿ, ಅಹುದು. ಅಹುದು—ಅಲ್ಲ. ಅವನ್ನಟ್ಟಿ ಬಂದೇ ಬೇರೆ ವಿಚಾರ" ಎಂದು ಒಂದು ಕೋಲು ತೆಗೆದುಕೊಂಡು ನಡೆದ. ನಾಯಿಗಳ ಮೈಯೆಂತ ಮೈಯೆಲ್ಲ ನೀರೇ ನೀರು. ತೋಟದಲ್ಲಿಯ ಮೋರಿ ಹೊಲಿಸಿನಿಂದ ತುಂಬಿದ್ದ ನೀರಿನ ಸೆಳವಿಗೆ ಒತ್ತಿ ಬಂದು ನಾಯಿ-ಕುನ್ನಿಗಳಿಗೆ ಜಲಾಭಿಷೇಕ ಮಾಡಿಸಿತ್ತು. ಕುನ್ನಿಗಳ ನಡುಗು-ಲೊಟ ಲೊಟ ಶಬ್ದದಿಂದ ಸುಬ್ಬಣ್ಣನ

ಹೃದಯ ಕಂಪಿಸಿತು. ಮರಿಗಳೆರಡೂ ಹಾಸು-ಹೊಕ್ಕಾಗಿ ಹೆಣೆದಂತೆ ಒಂದರ ಮೇಲೊಂದು ಒರಗಿ ಚೀರುತ್ತಿದ್ದವು. ಸಾಹೇಬರ ಮನೆಯ ದೀಪ ಮತ್ತೆ ಹತ್ತಿದ್ದನ್ನು ಕಂಡು ತಾಯಿ-ನಾಯಿಯು ತನ್ನ ಕಂದಮ್ಮಗಳ ಮಸಣ ಯಾತ್ರೆಯ ಕೈ ಬೆಂಕಿ ಹೊತ್ತಿತೆಂದು ಬಗೆದು ಅವುಗಳ ಸುತ್ತಲೂ ಅಲೆಯ ತೊಡಗಿತು. ಸುಬ್ಬಣ್ಣ ದಂಡಧಾರಿಯಾಗಿ ಬಂದು, ಕಣ್ಮುಚ್ಚಿ ನಾಯಿ ಗೊಂದೇಟು ಬಿಟ್ಟ.

" ಕೊಂಯೀ...."

ಅಂಧಕಾರದಲ್ಲಿ ತೇಲಿ ತೇಲಿ ನೀರವದಲ್ಲಿ ಒಂದಾಯಿತು ಕ್ರಂದನ. ನಾಯಿ ಓಡಿಹೋಯಿತು. ಮರಿಗಳನ್ನೆತ್ತಿಕೊಂಡು ಸುಬ್ಬಣ್ಣ ಒಂದು ದೂರದ ಬೇವಿನ ಮರದ ಬುಡದಲ್ಲಿಟ್ಟು ಬಂದ, ತಾಯಿ ಮಕ್ಕಳ ದಾರಿಯಲ್ಲಿ ಕಂಟಕ ಪ್ರಾಯನಾಗಿ.

ಸುಬ್ಬಣ್ಣ ಹಿಂದಿರುಗಿ ಬಂದು ಹಾಸಿಗೆ ಮೇಲೆ ಕುಳಿತ. ಅವನ ಮನಸ್ಸು ಕದಡಿತ್ತು. ಚಿತ್ತ ಚಿದಚಿತ್ತಾಗಿತ್ತು.

" ಏನು ? ನಾನೇನು ಮಾಡಿದೆ ? ಏನೂ ಇಲ್ಲ. ನಾನು ಮಾಡಿದೆ. ಅವರು ಮಾಡಿಸಿದರು ! ಕೂಳಿನ ಆಳು ನಾ. ಅವರು ಧಣಿಯರು. ಸತ್ಯವಾಗಿ ನನ್ನ ಕಡೆಗೆ ತಪ್ಪಿಲ್ಲ. ಹಾಗಾದರೆ ತಪ್ಪು ಯಾರದು ? ತಿರುಗಿ ನಾಯಿ, ಮರಿ ಗಳನ್ನು ಕೂಡಲಾರದೆ ? ಆವರದಿಂದ ಮೊಲೆಕೊಡಲಾರದೆ ? ನಾಯಿಗೆ ಜೋರಾಗಿಯೇ ಹೊಡೆದೆ. ನಾನಲ್ಲ ಹೊಡೆದವ; ಸಾಹೇಬರಿಂದ ಮಾತನಾಡಿಸಿ ಕೊಂಡು ಕಸಿವಿಸಿಬಟ್ಟ ಸುಬ್ಬಣ್ಣನ ವಿವೇಕ. ಅವಿವೇಕಿಯಾದೆ ! ವಿಚಾರ ಮಾಡಲಿಲ್ಲ. ನಾಯಿಯನ್ನೇ ಹಿಡಿದೊಯ್ದು ಬಿಟ್ಟಿದ್ದರೆ ? ಅದು ಕಡಿಯ ಬಹುದಾಗಿತ್ತು. ಕಡಿದರೇನು ? ತಾಳ್ಮೆಯನ್ನು ಕೊಟ್ಟಿದ್ದಾನೆ ದೇವರು. ನಾನು ತಾಳಿಕೊಂಡು ಬಾಳಬೇಕಾಗಿತ್ತು ! ನಾನೇಕೆ ? ತಾನು ಕಾಯದ ಕುನ್ನಿಗಳನ್ನು ಹುಟ್ಟಿಸಿದ್ದಾದರೂ ಏತಕ್ಕೆ ದೇವರು ? ಆದರೂ ನಾನೇ ನಾಯಿ. ಸಾಹೇಬರಂದದ್ದೂ ಅದೇ !"

" ನಾನು ವಿಚಾರವನ್ನೇ ಮಾಡಲಿಲ್ಲ. ಎಷ್ಟೊಂದು ಅವಿವೇಕ. ನಾಯಿ ಗಿಂತ ನನ್ನ ಬುದ್ಧಿ ಹೆಚ್ಚಿನದು. ಬಡಿಗೆಯ ಉಪಯೋಗ ಮಾಡಿಕೊಂಡೆ— ಬುದ್ಧಿಯ-ವಿಚಾರದ ಉಪಯೋಗ ಮಾಡಿ ನೋಡಲಿಲ್ಲ. ನಾಯಿ.... ಕುನ್ನಿ...."

ಸುಬ್ಬಣ್ಣನ ದುಃಖ ತುಂಬಿಬಂದಿತು. ಕಂಣಾಲಿಗಳಲ್ಲಿ ಮುಂದಿನ ದೀಪ ಮಾಲೆ ಮಾಲೆಯಾಗಿ ಕುಣಿಯತೊಡಗಿತು.

“ ದೀಪ !–ಅಹುದು–ನಿನ್ನದೆಷ್ಟು ಕಾಡಿಗೆ ? ಏನು ? ಹೇಗೆ? ಆದರೂ ಒಂದಿಷ್ಟು ಬೆಳಕು. ನನಗೆ ನೀನೇ ಸೂರ್ಯ–ಚಂದ್ರ–ನಕ್ಷತ್ರ. ನಿನ್ನಲ್ಲಿ ಜೀವವಿಲ್ಲ; ಏನೂ ಇಲ್ಲ. ಅದರೂ ನನಗೆಷ್ಟು ಸಹಾಯ ನಿನ್ನಿಂದ. ಆದರೆ ನನ್ನಿಂದ ಯಾರಿಗೆ ? ಸಾಹೇಬರಿಗೆ ? ಅಹುದು. ಅದೂ ನಿಜವೇ ! ನನ್ನಿಂದ ಯಾವ ಹೀನ ಕೃತ್ಯವಾಯಿತು ? ನನ್ನಿಂದ....ನನ್ನಿಂದ ಮಾತ್ರ–೧೦ ಪತ್ರಾವಳೀ ಅನ್ನ–ಪಿಂಡ–ಧರ್ಮೋದಕ. ನರಕ–ಸ್ವರ್ಗದ ಆಶೆಯಿಂದ ಇದೆಲ್ಲ ಪಾಪ....ಏನೂ ಇಲ್ಲ. ಈ ಜನ್ಮ ಮನುಷ್ಯನಾಗಿ ನಾಯಿ. ಮುಂದಿನದು ಬರೇ ನಾಯಿ. ಮಳಿಗೆಯಲ್ಲಿ ಮಲಗಿ, ಒದ್ದಾಗ ಓಡಿ, ಮಳೆ-ಗಾಳಿಯೆನ್ನದೆ ಅಂಡಲೆಯುವದು. ಮತ್ತೊಬ್ಬ ಸುಬ್ಬಣ್ಣ ಹೊಡೆದಾಗ ಕೂಗುವದು. ಈಗೇನಾಗಿದೆ. ಇಪ್ಪತ್ತು ವರುಷದವನಿದ್ದಾಗ ಒದ್ದಿದ್ದರು. ಇಲ್ಲಿ ಒಂದೆ ನಾಯಿಯಂತೆ ! ಸಾಹೇಬರ ಕಾಲು ಹಿಡಿದೆ. ಅವರೇ ದೇವರಾಗಿ ಬಂದರು. ಹೊಟ್ಟೆಯಲ್ಲಿ ಹಾಕಿಕೊಂಡು ಬದುಕಿಸಿದರು. ನಾನು ನಾಯಿಗೆ ಖರೇ ಮನುಷ್ಯನಾಗಿದ್ದರೆ.... ? ಸುಬ್ಬಣ್ಣಾ ಏನು ಮಾಡಿದೆ ? ಹೋಗು ಹೊಟ್ಟೆಯಲ್ಲಿ ಹಾಕಿಕೋ ಆ ಎರಡು ಮರಿಗಳನ್ನು. ಅವನ್ನು ಚಾಟಿಗಡು. ಸಾಹೇಬನಾಗು. ಮನುಷ್ಯನಾಗು................ ”

ಒಂದು....ಎರಡು.... ಮೂರು....ನಾಲ್ಕು.... ಐದು. ಬೆಳಗಿನ ಐದು ಘಂಟೆ. ಸಾಹೇಬರು ಚಹ ತೀರಿಸಿ ವಾಯುಸೇವನೆಗೆ ಹೊರಟರು. ಸುಬ್ಬಣ್ಣ ತದೇಕಚಿತ್ತನಾಗಿದ್ದ. ಅವನ ವಿಚಾರ ದಿಗಂತದಲ್ಲಿ ತೇಲುತ್ತಿತ್ತು. ದೀಪ ಕ್ಷೀಣವಾಗಿ ಕ್ಷೀಣವಾಗಿ ಆರಿಹೋಯಿತು. ಅದರ ಕುಡಿಯ ಕೊನೆಯಲ್ಲಿ ಇನ್ನೂ ಒಂದಿನಿಸು ಮಿಣುಕು. ಆ ಮಿಣುಕನ್ನು ನುಂಗಲು ಕಾಡಿಗೆ ತನ್ನ ಕರಾಳ ನಾಲಗೆಯನ್ನು ರಾಚುತ್ತಿತ್ತು. ಸುಬ್ಬಣ್ಣ ಎದ್ದು ನಿಂತ. ಕುನ್ನಿಗಳನ್ನು ತಂದೇ ಬಿಡುವ ನಿರ್ಧಾರದಿಂದ ಎದ್ದು, ಅವುಗಳನ್ನಿಟ್ಟ ಸ್ಥಳದ ಕಡೆಗೆ ಧಾವಿಸಿದ. ನಿನ್ನೆ ಸುಬ್ಬಣ್ಣನಿಗೆ ಐವತ್ತು ವರುಷ ! ಇಂದು ಮಾತ್ರ ಎಂಭತ್ತು ವರುಷದ ಮುದುಕನಿಗಿಂತಲೂ ಮುದುಕನಾದಂತೆನಿಸಹತ್ತಿದೆ. ಅವನಿಗೆ ಶಕ್ತಿ ಉಡುಗಿದಂತಿತ್ತು. ಸ್ಥೈರ್ಯ ಮಸಳಿಸಿತ್ತು.

ಅವನು ಹೊರಹೊರಟು ನಡೆದಾಗ ಬೆಳಗಿನ ಸೆಳಕು ಸುರಿಯಲನುವಾಗಿತ್ತು. ಮೋಡವಳಿದು–ಮಳೆ ಹೊರಪಾಗಿತ್ತು. ಬೀದಿಯಲ್ಲೆಲ್ಲ ಕೆಸರು. ಅಲ್ಲಲ್ಲಿ ನಿಂತ ಮಳೆ ನೀರಿನ ಮಡು. ಸುಬ್ಬಣ್ಣ ಕಾಲು ನಡುಗಿಸುತ್ತ ಎಡವಿದಾಗ ನೆಲಕ್ಕೆ ಕೈಯೂರುತ್ತ, ಗಡದಡಿಗೆ ಬಂದ. ಎದೆಯಲ್ಲಿ ದಿಗಿಲು–ಭಯ–ನಿರುತ್ಸಾಹ. ತಾಯಿ-ನಾಯಿ ಯಾವಾಗಲೋ ಬಂದು ಕುನ್ನಿಗಳ ಬಳಿ ನಿಂತಿತ್ತು. ಆದರೆ ಸುಬ್ಬಣ್ಣನನ್ನು ಕಂಡ ಕೂಡಲೇ ಓಡಿಹೋಯಿತು. ಸುಬ್ಬಣ್ಣ ಕುನ್ನಿಗಳನ್ನೆತ್ತಿ ಹಿಡಿದ. ಜೀವದೀಪವಾರಿತ್ತು. ಸುಬ್ಬಣ್ಣನ ಬಾಳು ಬರಿದಾಯಿತು. ಮುಖ ಬಾಡಿತು. ಬಾಷ್ಪಪೂರಿತ ಲೋಚನದಲ್ಲಿ ನಾಯಿ-ಕುನ್ನಿಗಳ ಮಸುಕು ಚಿತ್ರ, ಕೂಡ ಮೂಡಲಿಲ್ಲ. ಆದರೆ ಹೃದಯದಲ್ಲಿ ಮಾತ್ರ ಅಚ್ಚೊತ್ತಿದಂತೆ ಮೂಡಿತ್ತು. ಕುನ್ನಿಗಳನ್ನು ಕೆಳಗಿರಿಸಿ ಮೇಲೆ ನೋಡಿದ. ಚುಕ್ಕಿಗಳ ಮಸುಕು ಪ್ರಭೆ. ಶುಕ್ರ ಇನ್ನೂ ನಗುತ್ತಿದ್ದ. ಕಣ್ಮುಚ್ಚಿ ಕಂಣ್ ತೆರೆದು ಸುಬ್ಬಣ್ಣ ನುಡಿದ :

"ಕಾಯುವ ಶಕ್ತಿಯಿಲ್ಲದೆ–ನನ್ನನ್ನು- ಇವನ್ನು ಯಾಕೆ ಹುಟ್ಟಿಸಿದೆ? ಇದು ನಿನಗೆ ಕಲಂಕ."

ಸುಬ್ಬಣ್ಣ ಅವನತಮುಖನಾಗಿ ಹಿಂದಿರುಗಿದ.

# ಋಣಮುಕ್ತ

ಒಂದು ಶನಿವಾರ. ಕೋರ್ಟಿಗೆ ಅರ್ಧದಿನದ ಬಿಡುವು. ಸಂಜೆಯ ನಾಲ್ಕು-ನಾಲ್ಕೂವರೆ ಗಂಟೆಗೆ ನಾನು ಟೇನಿಸ್ ಆಡಲೆಂದು ಕ್ಲಬ್ಬಿಗೆ ಹೋದವ ಆರೂಕಾಲಿನ ಸುಮಾರಿಗೆ ತಿರುಗಿ ಮನೆಗೆ ಬಂದೆ. ಇನ್ನೂ ಆಟದ ವೇಷವನ್ನು ಬದಲಿಸಿರಲಿಲ್ಲ. ಅಷ್ಟರಲ್ಲಿ ಆಳು ಬಂದು ಹೇಳಿದ: ಇಂಗ್ಲಿಷ್ ಸಾಲೆಯ ಹೆಡ್‌ಮಾಸ್ತರರು ಕಾಣಬಯಸಿ ಬಂದಿದ್ದಾರೆಂದು. ಅಂಗಡಿಯ ಕಿರುಕಳ ಬಾಕಿಯನ್ನು ವಸೂಲ ಮಾಡುವ ಕಾರಕೂನರಿಗೆ–ಶಾ. ಮಾ. ಗಳಿಗೆ ಹೊತ್ತು-ಗೊತ್ತಿನ ನಿಯಮ ನಿರ್ಬಂಧವಿಲ್ಲ. ಸರ್ವ ವೇಳೆ–ಸರ್ವಕಾಲ ಅವರಿಗೆ ಪರ್ವ ಕಾಲ. ಬಂದವರು ಶಾಲೆಯ ಮುಖ್ಯಾಧ್ಯಾಪಕರು. ಏನು ಮಾಡುವದು—ಗಣ್ಯ ವ್ಯಕ್ತಿಗಳನ್ನು ಕಾಣಲಾರದೆ ಹಿಂದಿರುಗಿ ಕಳಿಸುವದೇ ? ಕಚೇರೀ ಕೋಣೆಯಲ್ಲಿ ಅವರನ್ನು ಕುಳ್ಳಿರಿಸಹೇಳಿ ನಾನು ಬೇಗ ಬೇಗ ಅರಿವೆ ಬದಲಿಸಿ—ಅಡುಗೆಯ ಮನೆಯಲ್ಲಿ ಸಂಜೆಯ ಅನ್ನಪೂರ್ಣಾರಾಧನೆಯಲ್ಲಿ ಮಗ್ನಳಾದ ನಮ್ಮ 'ಇವಳಿಗೆ' ಎರಡು ಕಪ್ಪು ಚಹ ಮಾಡಲು ತಿಳಿಸಿ ಹೊರಗೆ ಬಂದೆ. ಮುಖ್ಯಾಧ್ಯಾಪಕರು ತೀರ ವಿನಯದಿಂದ ಎದ್ದು ಕೈಮುಗಿದು ದೇಶಾವರಿ ನಗೆ ನಗುತ್ತ ನಿಂತರು. ಅವರನ್ನು ಕುಳ್ಳಿರಿಸಿ–ಬಂದ ವಿಚಾರ ಕೇಳಿದೆ. ಅವರು ಮತ್ತೆ ಅದೇ ದೇಶಾವರಿಯ ನಗೆಯನ್ನು ಆಗ್ರಹದಿಂದ ಮುಖರಂಗದ ಮೇಲೆ ಮೂಡಿಸುತ್ತ ಕಿಶೆಯಲ್ಲಿ ಕೈ ಹಾಕಿ ಒಂದು ಅರ್ಧ ಹಾಳೆಯ ಮೇಲೆ ಏನೋ ಟಾಯಿಪು ಮಾಡಿದ ಕಾಗದವನ್ನು ಮುಂಚಾಚಿದರು. ಕಾಗದವನ್ನು ಕೈಗೆ ತೆಗೆದುಕೊಂಡು ಓದಿ ನೋಡಿದೆ. ಅದರಲ್ಲಿ ಶ್ರೀ ಉಮಾವಿದ್ಯಾಲಯದ ವಾರ್ಷಿಕ ದಿನದ ಉತ್ಸವಕ್ಕೆ ನನ್ನನ್ನು ಮುಖ್ಯ ಅತಿಥಿಯೆಂದು ಪಟ್ಟಗಟ್ಟಿದ ವಿಷಯವಿತ್ತು. ಈ ಅನಪೇಕ್ಷಿತ—ವಿನಾ ಅನುಮತಿಯ ಪಟ್ಟ-ಬಂಧನದಿಂದ ನನಗೆ ಆಶ್ಚರ್ಯವೆನಿಸಿ, " ಇದೇನು ಮಾಸ್ತರ್, ನನ್ನನ್ನು ಹೇಳದೆ–ಕೇಳದೆ ಹೀಗೆ ಮಾಡಿದರೆ ? ನನ್ನ ಅನುಮತಿ–ಇಚ್ಛೆ, ಯಾವುದಕ್ಕೂ ಒಪ್ಪಿಗೆಯನ್ನು ಮುಂಚಿತವಾಗಿ ಪಡೆಯಲಿಲ್ಲವಲ್ಲ. ಒಂದು ಮಾತನ್ನು ಮೊದಲು ಕೇಳ

ಬೇಕಾಗಿತ್ತು. ಮೊದಲ ಸೂಚನೆ ಇಲ್ಲದೆ ಇದನ್ನೆಲ್ಲ ಯಾಕೆ ಮಂಡಿಸಿದಿರಿ ?"

ಇದೆಲ್ಲ ನಾನು ಮನಸಾ ಬಯಸಿ ಆಡಿದ ಮಾತಲ್ಲ. ಶಿಷ್ಟಾಚಾರಕ್ಕೆ ಅನುಸರಿಸಿ ಆಡಬೇಕಾದ ನುಡಿ. ಆದರೂ ಮಾಸ್ತರರು ಗಾಬರಿಯಾಗಿ "ತಪ್ಪಾಗಿದೆ ನಮ್ಮ ಕಡೆಯಿಂದ, ಅದು ನಿಜ, ನಿಮ್ಮನ್ನು ಕೇಳಿ ಒಪ್ಪಿಗೆ ಪಡೆಯಬೇಕಾಗಿತ್ತು. ಆದರೆ ನೀವು....ನೀವು....ಈ ಶಾಲೆಯ ಮಾಜೀ ವಿದ್ಯಾರ್ಥಿಗಳು. ಅದಕ್ಕೆ ಕೀರ್ತಿ ತಂದವರು. ನಿಮ್ಮನ್ನು ಬರಮಾಡಿಕೊಳ್ಳದೆ ಹೋದರೆ–ಶಾಲೆಯ ಇಭ್ರತಿಗೆ ಕುಂದು. ಅಂಥ ಯೋಗ್ಯರು ಬೇರೆ ಯಾರು ದೊರಕಬೇಕು? ಅಲ್ಲದೆ ಶಾಲೆ ನಿಮ್ಮದು. ನಿಮ್ಮಿಂದ ನಕಾರ ಬರಲಿಕ್ಕಿಲ್ಲವೆಂಬ ಭರವಸೆಯ ಮೇಲಿಂದ ಈ ಯೋಜನೆಯನ್ನು ನಿಮಗೆ ಕೇಳದೆ ಮಾಡಬೇಕಾಯಿತು. ಅದನ್ನು ಕ್ಷಮಿಸಿರಿ. ಒಪ್ಪಿಗೆ ಕೊಟ್ಟೇ ತೀರುವಿರೆಂಬ ಆಶೆಯಿಂದ ಬಂದಿದ್ದೇನೆ."

"ನಾನು ಏನು ಹೇಳಬೇಕು ಮಾಸ್ತರ— ಹುಡುಗರಿಗೆ—ಪಾಲಕರಿಗೆ? ಅವರಿಬ್ಬರಿಗೂ ಸಮಾನವಾದ Interesting subject ಯಾವುದೆಂದು ಆರಿಸಿ ಹೇಳಲಿ ? ನನ್ನದು ನ್ಯಾಯಖಾತೆ. ದತ್ತಕ-ಖೂನಿ-ನಿಕಾಲೆಯಾಗುವ ನಿರ್ಣಯಶಾಲೆ ನನ್ನ ಗರಡಿ ! ಅದನ್ನೆಲ್ಲ ಇಲ್ಲಿ ವಿವರಿಸಿ ಅವರ ತಲೆ ಕೆಡಿಸುವದಿದೆಯೋ ?"

"ಛೇ, ಛೇ, ತಮ್ಮ ರಸಿಕತೆ, ಸಾಹಿತ್ಯವ್ಯಾಸಂಗ ನನಗರಿಯದೆ ? ತಾವು ಎಲೆ ಮರೆಯ ಹೂ–ಹಣ್ಣು."

ಮಾಸ್ತರರ ಅಸ್ಥಾನ ಸ್ತುತಿ ಇನ್ನೂ ಯಾವ ಮನೆಗೆ ಹೋಗಲಿತ್ತೋ ಏನೋ. ಆಳು ಚಹ ತಂದ ಕಾರಣ ಅದಕ್ಕೆ ಬ್ರೆಕ್ ಬಿದ್ದಂತಾಯಿತು. ಚಹವನ್ನು ಕುಡಿಯುತ್ತ ಹೇಳಿದೆ—

"ನೋಡಿರಿ. ಇಂಥದೇ ವಿಷಯವೆಂದು ನಿರ್ದಿಷ್ಟವಾಗಿ ಹೇಳಲಾರೆ. ಅಂದು ಹೊಳೆದ ವಿಷಯದ ಬಗ್ಗೆ ಮಾತನಾಡುವೆ. ವಿಷಯಾಂತರ ಮಾಡಿ ಮಾತ್ರ ಮಾತನಾಡುವದಲ್ಲ. ಆಗಬಹುದೇ ?"

ಇದರಿಂದ ಅವರಿಗೆ ತುಂಬ ತೃಪ್ತಿಯೆನಿಸಿರಬೇಕು. ಅವರು ಕೂಡಲೆ ಚೇತರಿಸಿಕೊಂಡವರಂತೆ "ಆಗಬಹುದಲ್ಲ. ತಾವು ಏನು ಆಡಿದರೂ–ದೇ. ಭ. ಗಳ ಧಾಟಿಯಲ್ಲಿ ಭಾಷಣ ಮಾಡುವದಿಲ್ಲವೆಂಬ ಧೈರ್ಯವಿದೆ. ಅಖಂಡ ಭಾರತದಲ್ಲಿ ಈಗ ನ್ಯಾಯಖಾತೆಯೊಂದೇ ಪಾವಿತ್ರ್ಯ ಕಾಯ್ದುಕೊಂಡು

ಬಂದಿದೆ. ಮೊನ್ನೆ ಮೊನ್ನೆ ನ್ಯಾ. ಮೂ. ಭಗಲಾ ಸಾಹೇಬರು—ಪದವೀದಾನ ಸಮಾರಂಭದಲ್ಲಿ ಅಪ್ಪಣೆಕೊಡಿಸಿದ ಭಾಷಣ ತಾವು ಓದಿರಬೇಕಲ್ಲ. ನೋಡಿರಿ. ಎಷ್ಟು ಸಮಂಜಸ, ಸಮಯೋಚಿತ! ಪ್ರತ್ಯಕ್ಷ ನ್ಯಾಯದೇವತೆಯೇ ಅವತಾರ ಪಡೆದಂತಾಗಿದೆ ಅವರ ನುಡಿಯಲ್ಲಿ. ಅದೇನು ಬರಿಯ ಭಾಷಣವಲ್ಲ. ಗೀತಾಪ್ರವಚನ, ಧರ್ಮವಾಣಿ. ಅದಕ್ಕೇ ನೋಡಿರಿ. ಈ ಊರಲ್ಲಿ ದೊಡ್ಡ ವಕೀಲ–ಡಾಕ್ಟರ....ವ್ಯಾಪಾರಿಗಳಿದ್ದರೂ–ಅವರನ್ನು ಬಿಟ್ಟು ನಿಮ್ಮ ಕಡೆಗೆ ಧಾವಿಸಬೇಕಾಯಿತು. ಶಿಕ್ಷಣ....ನ್ಯಾಯಖಾತೆ ಎರಡರ ಪಾವಿತ್ರ್ಯ ಮಾತ್ರ ಇನ್ನೂ ಭಂಗವಾಗಿಲ್ಲ."

ಈ ಅಭಂಗವಾಣಿ ಎಡೆತಡೆಯಿಲ್ಲದೆ ರಭಸದಿಂದ ಮುಂದೆ ಹರಿಯುವ ಸಾಹಸದಲ್ಲಿತ್ತು. ಏನಾದರೂ ಮಾಡಿ ಅದಕ್ಕೆ ತಡೆ ಹಾಕಬೇಕೆಂದು ಮಾತನ್ನು ಅಡ್ಡದಾರಿಗೆಳೆಯುತ್ತ ನುಡುವೆಯೇ ಬಾಯಿ ಹಾಕಿ ಕೇಳಿದೆ :

" ಮಾಸ್ತರ, ಈಗ ಶಾಲೆಗೆ ಯಾರುಯಾರು ವಿಶ್ವಸ್ಥರು ? "

" ನಮ್ಮ ಅವಧಾನೀ ಬಾಳಾಚಾರ್ಯರು, ತಮ್ಮ ಪರಮ ಗುರುಗಳು, ಅವರೇ ಚೆಅರಮನ್. ಡಾ. ಗುಂಡಿ, ವಕೀಲ ಭೀಮರಾವ್, ವೈದ್ಯಸನ್ಮಿತ್ರದ ಸಂಪಾದಕರು–ಆಯುರ್ವೇದತೀರ್ಥ–ಪದ್ಮನಾಭಾಚಾರ್ಯರು, ವಿದ್ಯುತ್ ಕಂಪನಿಯ ಭೋರಿ ಶೇಠ—ಇವರೆಲ್ಲ ಅದರ ಸದಸ್ಯರು. ದುಗ್ಗಾಣಿಶೆಟ್ಟರು–ಟ್ರೆಝುರರ. ನಾನು ಕಾರ್ಯವಾಹಕ. ಅಂತೂ ನೋಡಿರಿ. ಶಾಲೆ ಒಂದು ಕುಟುಂಬದಂತಿದೆ. ಜಾತೀಯತೆಯ ಸುಳಿವಿಲ್ಲ. ಈಗ ನ್ಯಾಯಖಾತೆ–ಶಿಕ್ಷಣ ಖಾತೆ ಎರಡೇ ಜಾತೀಯತೆಯಿಂದ ಅಲಿಪ್ತವಾಗಿ ಉಳಿದಿವೆ. "

ಮತ್ತೆ ಪ್ರವಚನವಾರಂಭವಾಯಿತು. ಕೊನೆಗೆ ಬೇಸತ್ತು ಹೇಳಿದೆ:

" ಒಳ್ಳೇದು, ನಾನು ಒಪ್ಪಿಕೊಂಡೆ; ಬರುತ್ತೇನೆ. ತಾವು ಹಾಗೆ ಪ್ರಕಟಿಸಬಹುದು. ಆಯಿತಲ್ಲ ! " ಏಳುತೇಳುತ್ತ ಹೇಳಿದ್ದರಿಂದ ನಿರ್ವಾಹವಿಲ್ಲದೆ ಮಾಸ್ತರರಿಗೂ ಏಳಬೇಕಾಯಿತು. ಅತ್ಯಂತ ವಿನಯದಿಂದ ನಮಸ್ಕಾರ ಮಾಡಿ ಒಂದು ಸಲ ನನ್ನನ್ನು ಶಿಕ್ಷಣ ನ್ಯಾಯಖಾತೆಯ ಪವಿತ್ರ ಶರಪಂಜರದಿಂದ ವಿಮುಕ್ತಗೊಳಿಸಿ ಅವರು ಹೊರಟು ಹೋದರು.

ಮಾಸ್ತರರ ನಿರ್ಗಮನದನಂತರ ನನಗೆ ದೊರೆಯಲಿರುವ ಸನ್ಮಾನದ ಬಗ್ಗೆ ಆನಂದತುಂದಿಲನಾಗಿ ವಿಚಾರಿಸುತ್ತ ಕುಳಿತೆ. ಮುಖ್ಯ ಅತಿಥಿಯಾಗುವ

ಸನ್ಮಾನ ದೊರೆತ ಅಭಿಮಾನ ತುಂಬಿತ್ತು ನನ್ನಲ್ಲಿ. ನಾನು ಕಲಿತು ಮುಂದೆ ಬಂದ ಶಾಲೆ. ಅಲ್ಲಿ ನನಗೆ ಮಾನ ಮರ್ಯಾದೆಯಾಗಲಿದೆ. ಈ ಶಾಲೆಗೆ ಕೀರ್ತಿ ತಂದ–ಅದಕ್ಕೆ ಹೆಸರು ಗಳಿಸಿಕೊಟ್ಟ ವಿದ್ಯಾರ್ಥಿಯೆಂದು–ಅಂದು ಸಭೆಯಲ್ಲಿ ನೂರು ಜನ ನನ್ನನ್ನು ಹೊಗಳುತ್ತಾರೆ. ಊರಿಗೆ ಊರೇ ನೆರೆದು ಈ ವಿಜಯ ವಾಣಿ ಆಲಿಸುತ್ತದೆ. ಬದಿಯ ಆಸನದಲ್ಲಿ ಮಂಡಿತೆಯಾದ ಮನೆಯಾಕೆ—ತನ್ನವರ ಈ ಕೀರ್ತಿಕೇತು–ಗಾಳಿಯಲ್ಲಿ–ದಿಗಂತದಲ್ಲಿ ತಲೆಯೆತ್ತಿ ಮೆರೆಯುವದನ್ನು ನೋಡಿ ಧನ್ಯತೆ ಪಡೆಯುತ್ತಾಳೆ. ಜೀವನದಲ್ಲಿ ಬರುವ ಒಂದು ಅಪಾರ ಆನಂದವನ್ನು ಕೊಡುವ ಅನೇಕ ಅವಿಸ್ಮರಣೀಯ ಘಟನೆಗಳಲ್ಲಿ—ಇದೊಂದು ಮುಖ್ಯ ಘಟನೆ. ಹಡೆದ ತಂದೆ ತಾಯಿ, ಕೈಹಿಡಿದ ಹೆಂಡತಿಯ ಕಂಣೆದುರು ಈ ಬಗೆಯ ಸಾರ್ವಜನಿಕ ಪೂಜೆಗೊಳ್ಳುವದೇನು ಕಡಿಮೆಯದಲ್ಲ. ನನ್ನ ವಯಸ್ಸು—ಅಂತಸ್ತಿನ ಮಾನದಿಂದ–ಈಗ ನನ್ನೆಡೆಗೆ ತಾನಾಗಿ ನಡೆದು ಬಂದ ಮುಖ್ಯ ಅತಿಥಿಯ ಸನ್ಮಾನ ಪಟ್ಟವೇನೂ ಸಂಣದಲ್ಲ. ನಾನು ಉಬ್ಬಿಹೋದೆ.

ಇದು ನಾನು ಕಲಿತು ಮುಂದೆ ಬಂದ ಶಾಲೆ. ನನ್ನ ವಿದ್ಯಾರ್ಜನೆಯ ತಪೋಭೂಮಿ. ಅಲ್ಲಿ ದೊರಕುವ ಸನ್ಮಾನ ಕಿರಿದಾದೀತೆ ? ೧೦–೧೨ ವರುಷಗಳ ಹಿಂದೆ–ನಾನು ಮ್ಯಾಟ್ರಿಕ್ ಪರೀಕ್ಷೆಯನ್ನು ಶಾಲೆಗೆ ಒಂದನೆಯವನಾಗಿ ಉತ್ತೀರ್ಣನಾದ ಸುದ್ದಿ ಬಂದದ್ದೇ ತಡ, ಆಗಿನ ಮುಖ್ಯ ಶಾಲಾ ಚಾಲಕರಾದ ಬಾಳಾಚಾರ್ಯರು ತುಂಬಿದ ಬೀದಿಯಲ್ಲಿ, ನನ್ನನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಮೆರವಣಿಗೆ ತೆಗೆದಿದ್ದರು. ೫೦–೬೦ ವರುಷದ ಪಾಡಿಗೆ ತಿರುಗುವ ವಯಸ್ಸಾದ ಹಿರಿಯರು ಅವರು. ಅಂದು ಆನಂದಾಶ್ರು ಸುರಿಸಿದ್ದೇ ಸುರಿಸಿದ್ದು. ಮನೆಯಲ್ಲಿ ಮಿಠಾಯಿ ಅಂಗಡಿ ಹಚ್ಚಿದಂತೆ ಮಾಡಿದ್ದರು ಅಂದು. ಮನೆಯ ಬಾಗಿಲಿಗೆ ಮೆರವಣಿಗೆ ಬಂದಾಗ ಬುತ್ತಿಯನ್ನು ನಿವಾಳಿಸಿ ಒಗೆದು ತಮ್ಮ ಧರ್ಮಪತ್ನಿಯ ಕೈಯಿಂದ ನನಗೆ ಆರತಿ ಎತ್ತಿಸಿ ಬೆಳಗಿಸಿದ್ದರು. ಅನಾಥನಾದ ಒಬ್ಬ ವಾರಾನ್ನದ ಹುಡುಗ ತಂದ ಕೀರ್ತಿಯಿಂದ ಅವರ ಅಭಿಮಾನ ಅರಳಿತ್ತು. ಹದಿನೈದು–ಇಪ್ಪತ್ತು ವರುಷದ ಅವರ ಘನ ತಪಸ್ಸಿಗೆ ಇಂಥ ಅಮರ ಕೀರ್ತಿಯ ಫಲಬಿಟ್ಟುದಕ್ಕೆ ಅವರಿಗೆ ಧನ್ಯತೆ ಎನಿಸಿತ್ತು. ಇಂದು ಅವರು ಹಂಣು ಹಂಣು ಮುದುಕರಾಗಿದ್ದಾರೆ. ಹೊಟ್ಟೆಯಲ್ಲಿ ಹುಟ್ಟಿ

ಬಂದ ಮಗ–ಕೈಗೆ ಬಂದು ತಮ್ಮ ಈಪ್ಸಿತವನ್ನು ಪೂರೈಸಿದಂತೆ–ಶಾಲೆ ಇಂದು ಒಂದು ಮೂರ್ತಸ್ವರೂಪಕ್ಕೆ ಬಂದು ಅವರ ಕನಸನ್ನು ಸಾಕಾರ ಗೊಳಿಸಿದೆ. ಅದರ ವಾರ್ಷಿಕ ಸಮಾರಂಭಕ್ಕೆ—ಮಂಗಲೋತ್ಸವಕ್ಕೆ ನಾನು ವರನಾಗಿ ದೊರೆತದ್ದು–ಅಥವಾ ಆ ಮಾನ ನನಗೆ ದೊರೆಯುವಂತೆ ಮಾಡಿದ್ದರಲ್ಲಿ ಬಾಳಾಚಾರ್ಯರ ಕೈವಾಡವಿರಬೇಕೆಂದು ಅನ್ನಿಸಿತು.

ಇಲ್ಲಿಗೆ ನಾನು ಬದಲಿಯಾಗಿ ಬಂದನಂತರ ೫-೬ ದಿನ–ನನ್ನ ಬಿಡಾರದ ವ್ಯವಸ್ಥೆಯಾಗುವವರೆಗೂ ಪತ್ನೀಸಮೇತನಾಗಿ ಗುರುಗೃಹದಲ್ಲಿಯೇ ಇದ್ದೆ. ಅವರಿಗೆ ಆಗ ಎಂಥ ಆನಂದ! ಏನು ಉತ್ಸಾಹ! ತಾವು ನೆಟ್ಟ ಸಸಿ ಇಂಥ ಹಿರಿಯ ಮರವಾಗಿ–ಹೂ-ಹಂಣು ಬಿಡುವದನ್ನು ಕಂಡು ಅವರ ಸಂತಸಕ್ಕೆ ಮಿತಿ-ಮೇರೆ ಇಲ್ಲದಾಗಿತ್ತು. ಈ ಮನೆಯ ಅನ್ನ-ನೀರು-ಗಾಳಿ-ಬೆಳಕಿನಲ್ಲಿ ಜೀವಧಾರಣೆಗೆ ಅನುವು ಮಾಡಿಕೊಂಡು ಬಂದಿತ್ತು—ಈ ಮೃತ್ಪಿಂಡ. ಆ ಋಣಭಾರವನ್ನು ಯಾವ ಬಗೆಯಾಗ ತೀರಿಸಲೂ ಬಾರದಂತಿತ್ತು. ಅವರ ಕೂಡ ಇದ್ದ ಐದಾರು ದಿನಗಳ ಅವಧಿಯಲ್ಲಿ—ಈ ಋಣವಿಮೋಚನೆಯ ಬಗ್ಗೆ ಚರ್ಚಿಸಿದ್ದೆ. ಬಾಳಾಚಾರ್ಯರು ತಮ್ಮ ತುಂಬಿದ ಪೂರ್ಣ ವಾಣಿಯಲ್ಲಿ ಹೇಳಿದ್ದರು : " ಸೀನು, ಋಣಭಾರ ನೀನು ಇಳಿಸಬೇಕೆಂದರೆ ಇಳಿಯಲಾರದು. ಅದು ಅನಂತ ಅಪಾರವಾಗಿದೆ. "ಪೂರ್ಣಾತ್ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ" ಎನ್ನುವಂತೆ ಪೂರ್ಣ ಋಣದಿಂದ ಎಷ್ಟು ಋಣಭಾರ ಕಡಿಮೆಮಾಡಿಕೊಂಡರೂ ಅದು ಇಳಿಯದೆ ತಗ್ಗದೆ ಪೂರ್ಣಕುಂಭವಾಗಿಯೇ ಉಳಿದೀತು. ಹಾಗೆ ಉಳಿಯಿತಲ್ಲವೆಂಬ ನಿರಾಶೆ ಬೇಡ ! ಋಣಭಾರವಿಳಿಸುವ ಯಾವ ಸತ್ಕಾರ್ಯವೂ ನಿನ್ನಿಂದ ಜರುಗಲಿ. ಅದರ ಸಾಧನೆ ನಿರಂತರವಾಗಿ ನಡೆಯಲಿ. ಅದರಿಂದ ದೊರಕುವ ಸಮಾಧಾನ ಸಂತಸವೇನು ಕಡಿಮೆಯದಲ್ಲ." ಈ ಅಮೃತ ಪೂತವಾಣಿಯಿಂದ ನಾನು ಮಂತ್ರಮುಗ್ಧನಂತಾಗಿ ಸುಮ್ಮನಿದ್ದುಬಿಟ್ಟೆ. ಅವರ ಈ ವಾಕ್ಯದಿಂದ ನನ್ನ ಸ್ಮೃತಿಯ ಹಿರಣ್ಮಯ ಪಾತ್ರದ ಮುಚ್ಚಳ ತೆರೆದು—ಹತ್ತು ಹದಿನೈದು ವರುಷದ ಹಿಂದಿನ–ಗತಜೀವನದ ನನ್ನ ಕತೆ ಮಾತ್ರ ಮಾಲೆ ಮಾಲೆಯಾಗಿ ಚಿತ್ತಭಿತ್ತಿಯ ಮೇಲೆ ಮೂಡಿತು.

೨

ನಾನು ತೀರ ಹಸುಳೂಸಾಗಿರುವಾಗಲೇ ತಾಯಿ-ತಂದೆಯ ಪ್ರೀತಿ ವಾತ್ಸಲ್ಯಕ್ಕೆ ಎರವಾಗಿ ತಬ್ಬಲಿಯಾದೆ. ಅವರ ಮರಣ ಕಾರಣ ಇನ್ನೂ ಗುಂಭ

ವಾಗಿಯೇ ಇದೆ. ಯಾರು ಅನ್ನುತ್ತಾರೆ: ಅವರ ಕೊಲೆಯಾಯಿತೆಂದು. ದಾರಿ ಹೋಕರು ಅವರನ್ನು ಹಿಂಸಿಸಿದರೆಂದು. ಅದು ನಾನು ಕೇಳಿದ ಕತೆ. ಆಚಾರ್ಯರೂ ಅದರ ಬಗ್ಗೆ ಚಕಾರ ಶಬ್ದವೆತ್ತಿರಲಿಲ್ಲ. ಅದರ ಮೂಲ ಶೋಧಿಸಹೋಗಿ ನಾನು ಅನೇಕ ಸಲ ನಿರಾಶನಾಗಿದ್ದೇನೆ. ಅದನ್ನು ಅರಿತು ಕೊಳ್ಳುವ ಸಂಪೂರ್ಣ ಆಶೆ ನನ್ನನ್ನು ಇನ್ನೂ ಬಿಟ್ಟಿಲ್ಲ. ಆದರೆ ತಾನಾಗಿಯೇ ಆ ಒಗಟ ಒಡೆದರೆ ಒಡೆಯಲಿ ಎಂಬ–ಅನಿವಾರ್ಯ ಸಮಾಧಾನ ಮಾತ್ರ ಉಳಿ ದಿದೆ.

ಆಚಾರ್ಯರ ಉಡಿಯಲ್ಲಿ ನನ್ನನ್ನು ಹಾಕಿದಾಗ–ನನಗೆ ೧-೧॥ ವರುಷ ವಿರಬೇಕು. ಅಂದಿನಿಂದ ೭-೮ ವರುಷದವನಾಗುವವರೆಗೂ ಆಚಾರ್ಯರು ಅವರ ಪತ್ನಿ, ನನಗೆ ತಂದೆ-ತಾಯಿಯಾಗಿ ಬಾಳಿಸಿ–ಬದುಕಿಸಿಕೊಂಡು ಬಂದರು. ನನ್ನ ಬ್ರಾಹ್ಮಣ್ಯಕ್ಕೆ ಕುಂದುಬರದಂತೆ ಆಚಾರ್ಯರು ನನ್ನ ೬ನೇ ವರುಷದಲ್ಲಿ ವ್ರತಬಂಧ ನೆರವೇರಿಸಿ–ಒಂದು ಅರಿವೆಯ ತುಂಡು, ಚಿಕ್ಕ ಪಾತ್ರೆ ಕೊಟ್ಟು ಹೇಳಿದ್ದರು :

“ ಶೀನೂ, ಇನ್ನ ನೀ ದೊಡ್ಡಾಂವ ಆದಿ. ನಿನ್ನ ಅನ್ನವನ್ನು ನೀನೇ ದೊರಕಿಸಿಕೋಬೇಕು. ಮಧುಕರಿ ನಿನ್ನ ವ್ರತ–ವಿದ್ಯಾರ್ಜನಾ ಧರ್ಮ–ನೇಮ ಆಗಲಿ. ಓದು–ಬರಹ ಬಾಗಿಣಾಗಿ ಬರೂದಿಲ್ಲ. ದೇಹ ತೇಯಬೇಕು. ಉಪ ವಾಸ-ವನವಾಸ ಎಲ್ಲಾ ಭೋಗಿಸಬೇಕು ನಾ ಏನು ಇದ್ದಾಂವ ಅಲ್ಲಾ. ನಿನ್ನ ಹಂಗಽ ಇನ್ನೂ ಹತ್ತ ಹುಡುಗೂರು ಈ ಮನ್ಯಾಗ ವಿದ್ಯಾರ್ಜನಕ್ಕ ಅವಽ. ಊಟಕ್ಕ-ಹೊಟ್ಟಿಗೆ ಅಂತ ಬದಕಬ್ಯಾಡಾ. ಬದಕಲಿಕ್ಕೆ ಅಂತ ಒಂದಿಷ್ಟು ಉಂಣು. ಐದ ಮನೀ ಮಾತ್ರ ದಿನಾ ಅನ್ನಾ ಕೇಳು. ಸಿಕ್ಕರ ಸರಿ. ಇಲ್ಲಾ ನಾ ಇದ್ದೀನಿ. ”

ಅವರ ಮನೆಯಲ್ಲಿ ಓದಲಿಕ್ಕೆಂದಿದ್ದ ಉಳಿದ ಹುಡುಗರ ಜೊತೆಗೆ ಸೇರಿ ನಿತ್ಯ ನಾನು “ ಅನ್ನಭಿಕ್ಷೆ ” ಗೆ ಹೊರಡುತ್ತಿದ್ದೆ. ಆಚಾರ್ಯರ ಕಡ್ಡಾಯ ದಂತೆ ಐದೇ ಮನೆಗಳನ್ನು ಸುತ್ತಬೇಕು. ಬೆಳಗಿನಲ್ಲಿ ತಿರುಗಿ ತಂದ ತಿರುಪೆ– ಸಂಜೆಗೂ ಈಡಾಗಬೇಕು. ಒಂದೊಂದು ದಿನ ಅಷ್ಟು ಅನ್ನ ದೊರಕದೆ– ಸಂಜೆಗೆ ಮಿಗುತ್ತಿರಲಿಲ್ಲ. ಅದನ್ನು ನೋಡುತ್ತಿದ್ದ ಆಚಾರ್ಯರಿಗೆ–ಸುಮ್ಮ ನಿರುವದಾದೀತೇ ? ಅಂದು ಅವರಲ್ಲಿ ನಮಗೆ ಹುಳಿಯನ್ನದ ಮಿಷ್ಟಾನ್ನ ದೊರ ಕುತ್ತಿತ್ತು. ಮಧುಕರಿಯ ಎಲ್ಲ ಹುಡುಗರಲ್ಲಿ ನಾನು ಕಿರಿಯ. ಅಲ್ಲದೆ

ಆಚಾರ್ಯರ ಮನೆಯಲ್ಲಿ ಕೂಸಾಗಿದ್ದಾಗನಿಂದ ಬೆಳೆದು ಬಂದವ. ನನ್ನ ಚುರುಕು ಬುದ್ಧಿ, ಚಟುವಟಿಕೆಯಿಂದ ಆಚಾರ್ಯರಿಗೆ ಅಭಿಮಾನ. ಹೀಗಾಗಿ ನಾನು ಆಚಾರ್ಯರಿಗೆ ತೀರ ಸ್ವಕೀಯ–ಅವರವನೇ ಆಗಿದ್ದೆನಾದ ಕಾರಣ ಉಪವಾಸ- ವನವಾಸ–ತೆಗೆಯುವ ಸಮಯ ಬರುತ್ತಿರಲಿಲ್ಲ.

ಇಂಗ್ಲಿಷ್ ಮೂರನೇ ಎತ್ತೆಯ ವರೆಗೂ ನನ್ನ 'ಕವಳ ಭಿಕ್ಷೆ'—ವಿದ್ಯಾರ್ಜನೆ ಹೀಗೇ ಸರಾಗವಾಗಿ ನಡೆದು ಬಂದಿತು. ಅದಕ್ಕೆ ಆ ಮಟ್ಟಿಗೆ ಯಾವ ಅಡ್ಡಿ ಆತಂಕ ಬಂದಿರಲಿಲ್ಲ. ಪರೀಕ್ಷೆ ಮುಗಿದು ಮೇ ತಿಂಗಳ–ಬೇಸಿಗೆಯ ಬಿಡುವಿಗೆ ಮೊದಲಾಗಿ ೮–೧೦ ದಿನವಾಗಿರಬೇಕು. ನನ್ನ ಸಹಪಾಠಿಗಳು ತಮ್ಮ ತಮ್ಮ ಊರಿಗೆ ಹೋಗಿಬಿಟ್ಟರು. ಅನಾಥನಾದ ನನಗೇನು ಊರೇ–ಕೇರಿಯೇ ? ಏನಿದೆ ? ನಿಂತ ನೆಲವೇ ಆಸರ. ಎತ್ತಿ ಇಕ್ಕಿದ ತುತ್ತು ಕವಳವೇ ಆಹಾರ. ನಾನು ಇಲ್ಲೇ ಇದ್ದು ಸೂಟಿಯನ್ನು ಕಳೆಯಬೇಕು.

ಒಂದುದಿನ ರವಿವಾರವಿರಬೇಕು. ನಿತ್ಯದಂತೆ ಜೋಳಿಗೆ–ಪಾತ್ರಧಾರಿಯಾಗಿ ೧೨ ಗಂಟೆಯ ಸುಮಾರಿಗೆ "ಓಂ ಭವತಿ"ಯ ಗಾಯಿತ್ರಿ ನುಡಿಯುತ್ತ ಹೊರಟೆ. ಊರಿನ ಬ್ರಾಹ್ಮಣಕೇರಿಯ ಒಬ್ಬ ಗಣ್ಯ ವ್ಯಕ್ತಿಯ ಮನೆಯ ಬಾಗಿಲಿಗೆ–ತಳಿರು ತೋರಣದ ಸಿಂಗರ ಕಂಡು ಹುಡುಗ ಬುದ್ಧಿ–ನಾಲಗೆಯ ಚಾಪಲ್ಯದಿಂದ ಬಾಯಲ್ಲಿ ನೀರೂರಿ ಏನಾದರೂ ಸವಿ-ಸಪ್ಪಗಿನದು ದೊರಕೀತೆಂಬ ಆಶೆಯಿಂದ ಅವರ ಮನೆ ಬಾಗಿಲನ್ನು ಸಂಧಿಸಿ "ಓಂ ಭವತಿ ಭಿಕ್ಷಾಂದೇಹೀ" ಎಂದು ಕೂಗಿದೆ. ಮನೆಯ ಯಜಮಾನರು ಪಡಸಾಲೆಯಲ್ಲಿ ಉಂಡು ಶತಪಥ ಮಾಡುತ್ತಿದ್ದವರು ನನ್ನ ಕೂಗನ್ನು ಕೇಳಿ "ಬಂದ ಮಾಗಾ. ಹೊತ್ತಿಲ್ಲಾ ವ್ಯಾಳ್ಯಾ ಇಲ್ಲಾ. ಮೂರೆಳೀ ಧಾರಾ, ಲಂಗಟಾ ಹಾಕ್ಕೊಂಡನೆರಿಲ್ಲಾ ಬ್ರಾಹ್ಮಣರ ಮಕ್ಕಳು. ಈಗೇನು ಗೊಂದಲಿಗ್ಯಾರು ಸುದ್ದೇ ಇಂಥಾ ವೇಷಾ ಹಾಕತಾರ. ದುಡದ ಹೊಟ್ಟೇ ತುಂಬಿಕೋಬೇಕು ? ಏನ ಬ್ಯಾನಿ ಆಗೇದ. ಹಮಾಲೀ ಮಾಡಬೇಕು ? ಅಡ್ಡ ಕಡದರ ಆರ ಮೊಳಾ ಆಗ್ತಾಂಗ ಇದ್ದೀ. ಏನ ಧಾಡಿ ಆಗೇದ ನಿನಗ ಭಿಕ್ಷಾ ಬೇಡಲಿಕ್ಕೆ?"

"ಸಾಲೀ ಕಲೀತೀನಿ ರಾಯರ. ನಾ ಅನಾಥ ಹುಡುಗಾ" ಇಷ್ಟೇ ನುಡಿದೆ. ಹೆಚ್ಚಿಗೆ ಮಾತನಾಡುವ ಶಕ್ತಿಯೂ ಉಡುಗಿಹೋಗಿತ್ತು.

"ಸಾಲೀ ಕಲೀತೀದಿ. ಯಾ ಸಾಲ್ಯಾಗ ನೀ ಕಲೀಯೂದು? ನಿಂಮಂಥಾ ಲಫಂಗರಿಗೆ ಆ ಬಾಳ್ಯಾನ ಸಾಲೀನ ಆಸರ. ಹೋಗ ಮುಂದಿನ ಮನೀಗೆ" ಎಂದು ಧಡಾರನೆ ಬಾಗಿಲನ್ನು ಇಕ್ಕಿಕೊಂಡುಬಿಟ್ಟರು. ನನ್ನ ಭಿಕ್ಷಾಟನೆಯ ಐದು ಮನೆಗಳಲ್ಲಿ ಅದು ಮೊದಲನೇ ಮನೆ. ಅಲ್ಲೇ ಈ ರೀತಿ ಮಂಗಳಾರತಿ ಯಾದುದಕ್ಕೆ ನೊಂದು ಮುಂದಿನ ಮನೆಗೆ ಹೋಗುವ ತ್ರಾಣವೂ ಉಳಿಯ ಲಿಲ್ಲ ಅಲ್ಲಿ ದೊರಕಿದ 'ವಿಷ್ವಾನ್ನದ ಸವಿ' ಇನ್ನೂ ಅರಗಲಿತ್ತು. ಯಾರೋ ಮುಖದ ಮೇಲೆ ಈ ಹೀನ ಬದುಕನ್ನು ಅಣಕಿಸಿ ಪಿಚಿಪಿಚಿ ಉಗುಳಿದಂತಾ ಯಿತು. ಇಂಥ ಬೈಗಳು; ಮೇಲೆ ರಣರಣ ಬಿಸಿಲು; ಕೆಳಗೆ ಕಾದು ಹಂಚಾದ ನೆಲ. ಆರುತಾಸು ಹೊತ್ತೇರಿದರೂ ಹೊಟ್ಟೆಯಲ್ಲಿ ಒಂದು ಅಗಳು ಅನ್ನ-ಹನಿ ನೀರು ಕರುಳು ತೋಯಿಸಲು ಇರಲಿಲ್ಲ. ತಲೆತಿರುಗುತ್ತಿತ್ತು. ಸೋತ ದೇಹ, ನೊಂದ ಮನಸ್ಸು--ಕಾಲನ್ನು ಎಳೆಯಲಾರದೆ ಎಳೆಯುತ್ತ ನಡೆದೆ. ದುಃಖ ತುಂಬಿಬಂದಿತ್ತು. ಅನ್ನಕ್ಕೆ ಆಸರವಿಲ್ಲದೆ ಬದುಕಲಾರದ ಬಾಳನ್ನು ಕೊಟ್ಟ ದೇವರನ್ನು ಶಪಿಸುತ್ತಿದ್ದೆ. ಇಂಥ ಪಾಪದ ಪಿಂಡಕ್ಕೆ ಜನ್ಮಕೊಟ್ಟು, ದುಃಖ-ಸಂಕಟದ ಹಡದಿಯನ್ನು ನನ್ನ ದಾರಿ ತುಂಬ ಹಾಸಿ-ತಾವು ಕಣ್ಮುಚ್ಚಿಕೊಂಡು ದಕ್ಕೆ ತಂದೆ ತಾಯಿಯರನ್ನು ಉದ್ಧರಿಸಿದೆ. ಮುಂದೆ ಹೆಜ್ಜೆ ಇಡುವ ಸರ್ವ ಶಕ್ತಿಯೂ ಅಳಿದ ಕಾರಣ ಯಾರದೋ ಮನೆಯ ಕಟ್ಟೆಯ ಆಸರಿಗೆ ನಿಂತು ಕೊಂಡೆ. ಸಹಸ್ರ ನಾಲಗೆಯನ್ನು ಚಾಚಿ-ಭೂಮಿಯ ತಂಪು-ಹಸಿರನ್ನು ಹೀರುತ್ತಿದ್ದ ಸಹಸ್ರಾಕ್ಷ ನನ್ನ ಕೀಳು ಜೀವನದ ಸತ್ವವನ್ನೂ ಆಪೋಷಣೆ ತೆಗೆದುಕೊಳ್ಳಲೆಂಬ ಪಣತೊಟ್ಟು ಆಸರಿಗೆಂದು ನಿಂತ ಆ ಮನೆಯ ಕಟ್ಟೆಯ ಫರಸಿಯ ಕಲ್ಲಿನ ಮೇಲೆ ಒರಗಿಬಿಟ್ಟೆ. ಒವಳಿ ಬಂದು ನಾನು ಯಾವೊತ್ತು ನಿಶ್ಚೇಷ್ಟಿತನಾಗಿದ್ದೆನೋ ಅರಿಯೆ !

ಜಾಗರ ಪ್ರಪಂಚಕ್ಕೆ ನಾನು ಮರಳಿದಾಗ-ಮೇಲೆ ಉರಿಯುವ ಬಿಸಿಲೂ ಇರಲಿಲ್ಲ-ಕೆಳಗೆ ಸುಡುವ ನೆಲವೂ ಕಾಣಲಿಲ್ಲ. ಮೂರು ಮೊಳದ ಈ ದೇಹ ಮುದಿಕೆಯಾಗಿ-ಒಂದು ಮೆತ್ತನೆಯ ಗಾದಿಯ ಮೇಲೆ ಬಿದ್ದಿತ್ತು. ಯಾರದೋ ತಾಯಿಯ ಅಮೃತಹಸ್ತ ಹಣೆಯನ್ನು ಸೀವುತ್ತಿತ್ತು. ಆಳೊಬ್ಬ ಕಾಲಿಗೆ ಎಂಣೆ ತಿಕ್ಕುತ್ತಿದ್ದ. ಉರಿಯುವ ಲಾಕ್ಷಾಗೃಹದಿಂದ ನನ್ನ ವಿಮೋಚನೆಯಾಗಿ-ಈ ಹಿಮಮಂದಿರದಲ್ಲಿ ರಾಜಭೋಗವನ್ನು ಅನುಭವಿಸುತ್ತಿದ್ದೆ.

ನನ್ನ ಮೂರ್ಛೆಯ ಗುಂಗು ಇನ್ನೂ ಸಂಪೂರ್ಣವಾಗಿ ಇಳಿದಿರಲಿಲ್ಲ. ಸ್ಮೃತಿ-ವಿಸ್ಮೃತಿಯ ನಡುವೆ ಜೀಕುತ್ತಿದ್ದೆ. ಬದಿಗೆ ಕುಳಿತವರು ಆಡುವ ಮಾತು ಅಷ್ಟು ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. ಹರಕು-ಮುರುಕಾಗಿ ಕಿವಿಯ ಮೇಲೆ ಬಿದ್ದಂತಾಗುತ್ತಿತ್ತು.

"ಆಚಾರ್ಯ್ರ, ಹುಡುಗಾ ಇಲ್ಲೇ ನನ್ನ ಹತ್ತೀಲೇನ ಇದ್ದುಬಿಡ್ಲಿ. ಹೊಟ್ಟಿಗೆ ಅನ್ನ, ನೆತ್ತಿಗೆ ಎಂಣೀ ಇಲ್ದ ಬದಕಂದರ ಬೆಳಿಯೂ ಜೀಂವಾ ಹ್ಯಾಂಗ ಬದಕೀತು. ಮಗ್ಗಿ ಇರೂದ್ರಾಗನ ಕಮರಬಾರದು. ಹತ್ತರ ಜೋಡೀ ಹನ್ನೊಂದು. ನನಗೇನು ಭಾರ ಆಗಬೇಕಾದ್ದೂ ಅಷ್ಟರಾಗನ ಅದ."

"ಗಂಗಕ್ಕಾ, ಅನ್ನದ ಋಣಾ ಎಲ್ಲಿ ಇರತ್ತದ ಅಲ್ಲೇನ ದೇವರು ತಾನಾಗಿ ಅಟ್ಟತಾನ. ಶ್ರೀಹರಿ ಇಚ್ಛಾ ಇಂವಾ-ಸೀನೂ ಇಲ್ಲೇ ಬೆಳೀಬೇಕೂ ಅಂತ ಅವನ ಇಚ್ಛಾ ಇದ್ರ ಆಗ್ಲಿ."

ಮುಂದೆ ಅವರು ಆಡಿದ ಮಾತು ತಿಳಿಯಲಿಲ್ಲ. ನಿದ್ರೆಯ ಗುಂಗಿನಲ್ಲಿದ್ದೆ. ಜೊಂಪು ಬಂದಿರಬೇಕು ನನಗೆ ಸಂಪೂರ್ಣ ಎಚ್ಚರವಾಗಲು ತಾಸೆರಡು ತಾಸಾದರೂ ಹಿಡಿದಿರಬೇಕು.

ಅನಶನದಿಂದ ನಿರ್ವಿಣ್ಣನಾದ ನಾನು ಚೇತರಿಸಿಕೊಂಡು—ಎದ್ದು ಓಡಾಡು ವಂತಾಗಲಿಕ್ಕೆ ೨-೩ ದಿನ ಹಿಡಿಯಿತು. ನನ್ನ ವಾಸ್ತವ್ಯ ಅಲ್ಲೇ ಆಯಿತು. ಆಚಾರ್ಯರು ಬಂದು ಹೇಳಿಹೋದರು. ಅವರ ಮಾತಿಗೆ ಎದುರು ನುಡಿ ಯುವ ಧೈರ್ಯ ನನಗಿರಲಿಲ್ಲ. ಅನಾಥರೆಲ್ಲ ಎತ್ತಿದವರ ಕೂಸೇ. ಅಂದಿನಿಂದ ಗಂಗಕ್ಕ ನನ್ನ ಸಾಕು ತಾಯಿಯಾದಳು.

೩

ಗಂಗಕ್ಕ ಸೆಕ್ಕೇಶಿ. ೫೦-೫೫ ವರುಷವಿದ್ದಿರಬೇಕು. ಅವರ ಯಜಮಾನರು ತೀರಿಕೊಂಡಿದ್ದರೋ, ಬಿಟ್ಟಿದ್ದರೋ ತಿಳಿಯದಂತಿತ್ತು. ಅವರು ವಿರಾಗಿಯಂತೆ ಮಾತ್ರ ಬಾಳುತ್ತಿದ್ದರು. ಯಾಕರಿಂದಲೋ ಕಹಿಯಾದ ಅವರ ಜೀವನ ಧಾರ್ತರಾಷ್ಟ್ರಾವತಾರ ತಾಳಿ—ಮುಖದ ಮೇಲೆ, ಜೀವನದ ಸುಖದ ಮೇಲೆ ವಿರಾಗದ ಸೆರಗೆಳೆದುಕೊಂಡು ಬಿಟ್ಟಿತ್ತು. ಮನೆಯಲ್ಲಿ ಕುಬೇರನ ಸಂಪತ್ತಿತ್ತು. ಅವರು ಆ ಸಂಪತ್ತಿನಿಂದ ಮಹಾರಾಜ್ಞಿಯಾಗಿ ಬಾಳಬಹುದಾಗಿತ್ತು. ಆದರೆ ಅವರ ಸಂಪತ್ತಿನ ಬಹುಭಾಗ—ಬಾಳಾಚಾರ್ಯರ ಉಮಾ ವಿದ್ಯಾಲಯಕ್ಕೆ ದತ್ತಿಯಾಗಿ ಹೋಗಿತ್ತು. ಅವರೇ ಆ ಸಾಲೆಯ ಉದ್ಧಾರಕರೆಂಬ ಮಾತು

ಜನಜನಿತವಾಗಿತ್ತು. ಅದು ಏಕೆ ? ಹೇಗೆ ? ಎಂಬ ಸಮಸ್ಯೆ ಮಾತ್ರ ಬಿಡಲಿಲ್ಲ. ಅವರ ಉದಾರದಾನದ ಫಲಶ್ರುತಿಯೆಂದರೆ— ಬಾಳಾಚಾರ್ಯರ-ಗಂಗಕ್ಕನ ಸಂಬಂಧವಿರಬೇಕೆಂಬ ಕಲ್ಪನೆಯ ಕೀಟಕಕ್ಕೆ ಕೋಡು ಮೂಡಿದ್ದು ಮಾತ್ರ. ನಾನು ಗಂಗಕ್ಕನ ಮನೆಗೆ ಬಂದು ನೆಲೆಯಾಗಿ ನಿಲ್ಲುವ ಹೊತ್ತಿಗೆ ಈ ಮಾತು ಹಳೆಯದಾಗಿ ಹಳಸಿಹೋಗಿತ್ತು. ಈ ದಾಸ-ತತ್ಸಂಬಂಧದ ವಿಷಯ ಆಗಷ್ಟು ಪ್ರಚಲಿತವಾಗಿರಲಿಲ್ಲ.

ಗಂಗಕ್ಕನ ನೆರವಿನಿಂದ ನನ್ನ ಓದು ಮುಗಿಯಿತು. M. A; L. L. B. ಮುಗಿಸಿ—ಇನ್ನು ಎಲ್ಲಿಯಾದರೂ ವಕೀಲಿಯ ಪಾಟಿಯನ್ನು ಅಂಟಿಸಬೇಕೆಂದು ಯೋಚಿಸುತ್ತಿರುವಾಗಲೇ ಗಂಗಕ್ಕ ಕೈಬಿಟ್ಟ ಸುದ್ದಿ ಬಂತು. ಅವರಿಗೆ Cancer ಬೇನೆ ಇದ್ದೇ ಇತ್ತು. ಅದು ಇಷ್ಟು ತೀವ್ರ ಪ್ರಬಲಿಸಿ—ಅವರನ್ನು ಬಲಿ ತೆಗೆದುಕೊಳ್ಳಲಾರದೆಂದು ಅನಿಸಿತ್ತು. ಅವರ ಕೊನೆಯ ಗಳಿಗೆಯಲ್ಲಿ—ಬಾಯಿಗೆ ಗಂಗಾಮೃತ ಬಿಡುವ ಭಾಗ್ಯವೂ ಈ ದುರ್ಭಾಗ್ಯನಿಗೆ ದೊರಕಲಿಲ್ಲ. ಇರುವಷ್ಟು ದಿನ ನನ್ನ ತಾಯಿಯಾಗಿ-ವಾತ್ಸಲ್ಯ ಪ್ರೀತಿ ತೋರಿ, ನೆರವು ನೀಡಿ—ನನ್ನನ್ನು ಮಾನವನನ್ನಾಗಿ ಮಾಡಿದ್ದರು. ಅವರಿಗೆ ಕೊನೆಗಾಲದಲ್ಲಿ ಆಗಲಿಲ್ಲವೆಂದು ಕೊರಗತೊಡಗಿದೆ. ನನ್ನ ಸಂಸಾರ, ವಕೀಲಿಯ ವ್ಯವಸಾಯ ಕಂಣು ತುಂಬ ನೋಡಿ—ಧನ್ಯತೆ ಪಡೆದು ಅವರು ಕಂಣುಮುಚ್ಚಿದ್ದರೆ ಅವರಿಗೂ ಸಮಾಧಾನ—ನನಗೂ ಒಂದು ಬಗೆಯ ಋಣಭಾರವಿಳಿಸಿದ ಸಂತಸ. ಆ ಭಾಗ್ಯವನ್ನು ದೇವರು ಕರುಣಿಸಲಿಲ್ಲವೆಂದು ಹಳಹಳಿಸಿದೆ.

ಗಂಗಕ್ಕ ನನ್ನ ಮೇಲೆ ತೋರಿಸುತ್ತಿದ್ದ ಅಕ್ಕರೆ—ಆತ್ಮೀಯತೆಯನ್ನು ಕಂಡವರು—ಅವರು ಹೋಗುವಾಗ ನನ್ನ ಪಾಲಿಗೆ ದೊಡ್ಡ ಗಂಟು ಬಿಟ್ಟು ಹೋಗಿರಬೇಕೆಂದು ಭಾವಿಸಿದ್ದರು. ಆದರೆ ಇದ್ದು ಬಿದ್ದ ಸ್ಥಾವರ ಆಸ್ತಿಯನ್ನು ಉಮಾ ವಿದ್ಯಾಲಯಕ್ಕೆ ಧಾರೆ ಎರೆದು ಹೋಗಿದ್ದರು, ತಮ್ಮ ಯಜಮಾನರ ಹೆಸರಿನಲ್ಲಿ. ತಮ್ಮ ಸ್ವಂತದ ನಾಮನಿರ್ದೇಶ ಎಲ್ಲೂ ಬರದಂತೆ ಮಾತ್ರ ದಕ್ಷತೆ ವಹಿಸಿದ್ದರು. ಅವರ ದುಡ್ಡು-ಹೊನ್ನು ಅದೇನಿತ್ತೋ ಏನಾಯಿತೋ ತಿಳಿಯಲಿಲ್ಲ. ಅವರಿದ್ದ ಸ್ವಂತ ಮನೆಯನ್ನು ಉಮಾ ವಿದ್ಯಾಲಯದ ಅನಾಥಾಶ್ರಮಕ್ಕೆ ಬಿಟ್ಟಿದ್ದರು. ನನ್ನ ಪಾಲಿಗೆ ಅವರೇನೂ ಬಿಡಲಿಲ್ಲವೆಂಬ ಮಾತು ನನ್ನನ್ನು ಚುಚ್ಚಲಿಲ್ಲ. ಜೀವನದುದ್ದಕ್ಕೂ ನೆರವಾಗಿ—ನನಗೆ ದಾರಿ ದೀಪವಾಗಿ—

ಬಾಳಿ ಬದುಕಿಸಿದ ಪುಣ್ಯ ಅಸ್ಟಿಷ್ಟಲ್ಲ. ಆರೇಳು ವರುಷದ ಕಾಲೇಜ ಜೀವನ ವನ್ನು ರಾಜಕುಮಾರನಂತೆ ನಾನು ಕಳೆದದ್ದು ಅವರ ನೆರವಿನಿಂದಾಗಿ. ಅವರು ನನಗೆ ಏನೂ ಬಿಡದೆ ಹೋದ ಬಗ್ಗೆ ದುಃಖವಾಗಲೀ ವ್ಯಸನವಾಗಲೀ ನನ್ನನ್ನು ಕುಡುಕಲಿಲ್ಲ

ಅವರೇ ಹೋದಮೇಲೆ ಆ ಊರಿನಲ್ಲಿ ನೆಲೆನಿಂತು ವಕೀಲಿ ಮಾಡುವದ ರಲ್ಲಿ ಅರ್ಥವಿಲ್ಲವೆಂದು ಬೇರೊಂದು ಊರಿನ ದಾರಿ ಹಿಡಿದೆ. ೩-೪ ವರುಷದ ವ್ಯವಸಾಯದಲ್ಲಿ ಉಚಿತವಾಗಿ ಹೆಸರೂ-ಹಣವೂ ಬಂದಿತು. ಆದರೂ ಪಕ್ಷ ಕಾರರು-ಛಿಡೆ-ಮುರವತ್ತು ಇವಕ್ಕೆಲ್ಲ ಹೊಂದಿಕೊಳ್ಳದ ಜೀವನ, ಸಬ್‌ಜಜ್ಜ-ಪದವಿಯ ಕರೆ ತಾನಾಗಿ ನಡೆದು ಬಂದಾಗ ಬಿಡದೆ ಅದಕ್ಕೆ ಅಂಟಿಕೊಂಡಿತು. ಅಂದಿನಿಂದ ೫-೬ ವರುಷ ನವಕರಿಯ ದೆಶೆಯಿಂದಾಗಿ ಅಲ್ಲಲ್ಲಿ ಬದಲಿ-ವಸತಿ ಮುಗಿಸಿ ಮತ್ತೆ ನಾನು ಕಲಿತ-ಬೆಳೆದುಬಾಳಿದ ಊರಿಗೆ ತಂದು ಬಿಟ್ಟಿತು. ನನಗೆ ಬದಲಿಯಾದ ಸುದ್ದಿಯಿಂದ ಆಚಾರ್ಯರಿಗೆ ಅಮಿತ ಆನಂದವಾದರೂ, ಗಂಗಕ್ಕನ ಕಣ್ಣು ಈ ಸೌಭಾಗ್ಯವನ್ನು ಕಾಣಲಿಲ್ಲವೆಂದು ಕೆಡಕೂ ಎನಿಸಿತ್ತು.

೪

ನಾನು ಈ ಊರಿಗೆ ಬಂದು ೫-೬ ದಿನ ಆಚಾರ್ಯರಲ್ಲಿ ತಂಗಿದ್ದಾಗ ಅವರಿಗೆ ಕೇಳಿದ್ದೆ : 'ಗಂಗಕ್ಕ ನನ್ನ ಮೇಲೆ ಮಾಡಿದ ಅಪಾರ ಋಣದಲ್ಲಿ ಈ ಷತ್ತನ್ನಾದರೂ ಮುಟ್ಟಿಸುವ ಬಯಕೆಯಿದೆ. ಅದಕ್ಕೆ ತಾವು ದಾರಿ ತೋರಿಸ ಬೇಕು' ಎಂದು. ಆದರೆ ಆಚಾರ್ಯರು 'ಓ ಲಕ್ಷ್ಮಣಾ' ಎಂದು ತಮ್ಮ ಮಾತಿಗೇ ತಿರುಗಿ 'ಪೂರ್ಣಾತ್ ಪೂರ್ಣಮಾದಾಯ' ಮಂತ್ರ ಹೇಳಿ ಮುಗಿಸಿಬಿಟ್ಟಿದ್ದರು. ಆದರೆ ಶಾಲೆಯ ವಾರ್ಷಿಕೋತ್ಸವದ ನೆವದಿಂದ ಅಂಥ ಮಂಗಲ ಗಳಿಗೆ ಫಲಿಸುವ ಕಾಲವೊದಗಿ ನನ್ನ ಋಣವಿಮೋಚನೆಯ ಮಾತಿಗೆ ಮತ್ತೆ ಅಂಕುರವಿಟ್ಟಿತ್ತು. ಅಂದು ಆಚಾರ್ಯರ ಅಪ್ಪಣೆಯ-ಅನುಮತಿಯ ದಾರಿ ನೋಡದೆ, ಗಂಗಕ್ಕನ ಚಿರಸ್ಮಾರಕವೆಂದು, ಒಂದು ದೊಡ್ಡ ಮೊತ್ತದ ಕಾಣಿಕೆಯನ್ನು ಶಾಲೆಗೆ ಕೊಡಬೇಕೆಂದು ನಿಶ್ಚಯಿಸಿ ನಿರಂಬಳನಾಗಿದ್ದೆ.

* * * *

ಅಧ್ಯಕ್ಷ ಪೀಠದಿಂದ ನಾನು ಕೊಡಿಸಿದ ಸಂದೇಶ ಅರ್ಥಾತ್ ಭಾಷಣ ಎಲ್ಲರಿಗೂ ಹಿಡಿಸಿತು. ಸಹಸ್ರಾರುಜನರ ಕರತಾಡನ-ವಿಜಯಭೇರಿ ಮೊಳಗ-ಆ ಸಂದೇಶ ನನಗೆ ಅವಗತವಾಗಿತ್ತು. ಅದೆಲ್ಲವನ್ನೂ ಮೀರಿ-

ನಾನು ಅಂದು ಭಾಷಣದ ಕೊನೆಗೆ, ಶಾಲೆಯಲ್ಲಿ ವಿದ್ಯಾರ್ಥಿವೇತನವೆಂದು ಗಂಗಕ್ಕನ ಚಿರಸ್ಮಾರಕವಾಗಿ-ಅವರ ಹೆಸರಿನಲ್ಲಿ ಸಾರಿದ ೫೦೦೦ ರೂ. ಕಾಣಿಕೆಯ ಮಾತು ಎಲ್ಲರನ್ನೂ ಚಕಿತಗೊಳಿಸಿತ್ತು. ಹೆ. ಮಾ. ರಂತೂ-ನನ್ನನ್ನು ಅಭಿನಂದಿಸಿದ್ದೇ ಅಭಿನಂದಿಸಿದ್ದು. ವಿಶ್ವಸ್ಥರೂ ನನ್ನನ್ನು ಕೊಂಡಾಡಿದರು. ಊರಿನ ಶೆಟ್ಟಿ-ಸಾವುಕಾರರು-ಸಂಘ-ಸಂಸ್ಥೆಯವರು ಮಾಲೆ ತುರಾಯಿಗಳ ಮಳೆಗರೆದರು. ಉತ್ಸವದ ಗಡಿಬಿಡಿ ಮುಗಿದಿತ್ತು. ಅಲ್ಪೋಪಹಾರದ ವಿಧಿ ಮುಗಿಸಿ ಇನ್ನೇನು ನಾವು ಹೊರಡಬೇಕು. ಅಷ್ಟರಲ್ಲಿ ಆಚಾರ್ಯರು ನನ್ನ ಬಳಿಗೆ ಬಂದು "ಸೀನೂ-ಈಗೇನು ಮನಿಗೆ ಹೋಗೂ ಗಡಿಬಿಡಿ ಅಷ್ಟ ಇಲ್ಲಲಾ· ಅಂತೂ ಇಲ್ಲೀ ನಿನ್ನ Programme ಮುಗದ ಮ್ಯಾಲ ಒಂದಿಷ್ಟು ಮನೀ ಕಡೆಗೆ ಬಂದು ಹೋಗು. ಇಂದs ಬಂದರ ನೆಟ್ಟಗs. ನಿನ್ನ ವೈಭವಾ ನಮ್ಮ ಮನೀಯುವರೂ ಅಷ್ಟು ನೋಡಲಿ" ಎಂದರು.

"ಹೇಗೂ ನನ್ನ ಗಾಡಿ ಇದ್ದೇ ಇದೆ ಇದರಲ್ಲೇ ಹೊರಟು ಬಿಡೋಣ. ಸಂಜೆಯ ಊಟ ನಿಮ್ಮಲ್ಲಿ ಆದರೂ ನಡೆಯುತ್ತದೆ. ನಿಮ್ಮ ಸೊಸೆಯದೂ ಅದಕ್ಕೆ 'ನಾ' ಇಲ್ಲ."

"ಅಪಾ, ನಾ ಬಡವ ಬ್ರಾಹ್ಮಣಾ. ಮನಸೂಫಗ ಮೇಜವಾನೀ ಆಯತಾ ವ್ಯಾಳ್ಯಾದಾಗ ಎಲ್ಲಿಂದ ಮಾಡಿಸಲಿ. ನೀ ದೊಡ್ಡ ದಾನೀ ಬೇರೆ— ಕರ್ಣನ ತುಕಡಿ. ನಿಮ್ಮಂಥವರಿಗೆ ಅಂಜಿಕೊಂಡs ಇರಬೇಕು."

"ನಿಮ್ಮ ಮುಂದೃs ನಾ ಕೂಸಾ. ನನ್ನ ದಾನ ಯಾತರದು ? ಎಲ್ಲಾ ನಿಮ್ಮ ಕೃಪಾ."

"ಆಗಲೀ, ಈಗ ಹೊರಡೂಣ ಹಂಗಾರ" ಎಂದರು ಆಚಾರ್ಯರು.

ಮಾಲೆ-ತುರಾಯಿಯಿಂದ ಬಿಗಿದ ಮೋಟಾರಿನಲ್ಲಿ ಹೇಗೋ ಜಾಗಾ ಮಾಡಿಕೊಂಡು-ಕುಳಿತೆವು. ಶಾಲೆಯ ವ್ಯವಸ್ಥಾಪಕರ-ವಿಶ್ವಸ್ಥರ ಅಪ್ಪಣೆ ಪಡೆದು—ಹುಡುಗರ ಜಯಜಯಕಾರ ನಡೆದಿರುವಾಗಲೇ ನಮ್ಮ ಗಾಡಿ ಶಾಲೆಯ Porch ನಿಂದ ಹೊರಟಿತು.

ಆಚಾರ್ಯರ ಮನೆಯ ಅಟ್ಟದ ಮೇಲೆ ನಾವೆಲ್ಲ ಹೋಗಿ ಕುಳಿತೆವು. ಆಚಾರ್ಯರ ಪತ್ನಿ ನನ್ನ ವೈಭವವನ್ನು ಕಂಡು—ಎದೆ ತುಂಬಿ ಬಂದವರಾಗಿ,

"ಸೀನೂ, ಮ್ಯಾಟ್ರಿಕ್ ಆದಾಗ ಹೀಂಗs ಮಾಲೀ ಹಾಕಿದ್ದರು ಮಂದಿ. ಊರಿಗೆ ಊರೇ ನೆರದಿತ್ತು. ಅಪ್ಪಾಜಿ, ಹಡದ ತಂದೀ ತಾಯೀ ಈ ನಿನ್ನ

ಸೌಭಾಗ್ಯ ನೋಡಲಿಲ್ಲಪಾ. ಗಂಗಕ್ಕಾರ ಜೀವಂತ ಇದ್ರ ಎಂಥಾ ಸುಖಾ ಹಚ್ಚಿಕೋತಿದ್ಲು." ಎಂದು ಹೇಳಿ ನನಗೆ ದೃಷ್ಟಿ ನಿವಾಳಿಸಿ ಒಗೆದರು. ನನಗೆ ಕಣ್ಣು ಎದೆ ತುಂಬಿ ಬಂದು-ಮಾತನಾಡುವದಾಗದೆ-ಆ ತಾಯಿಯ ಪಾದ ಮುಟ್ಟಿ ನಮಸ್ಕಾರ ಮಾಡಿದೆ. ಬಾಯಿತುಂಬ ಹರಸಿ-ಆ ತಾಯಿ-ನನ್ನ ಮನೆ ಯಾಕೆಯನ್ನು ಕರೆದುಕೊಂಡು ಕೆಳಗಿಳಿದು ಹೋದರು. ಇಷ್ಟೆಲ್ಲ ನಡೆದಿದ್ದರೂ ಆಚಾರ್ಯರು ಮಾತ್ರ ನಿರ್ವಿಕಾರ ಮುಖ ಮಾಡಿಕೊಂಡು ಕುಳಿತಿದ್ದರು. ಅವರಲ್ಲಿ ಸುಖ-ದುಃಖ-ವ್ಯಸನ-ಉತ್ಸಾಹ ಒಂದೂ ಕಾಣಬರಲಿಲ್ಲ. ಗೀತೆಯ ದ್ವಾದಶಾಧ್ಯಾಯದಲ್ಲಿ ಬರುವ ಸತ್ ಶಿಷ್ಯನ ಸರ್ವ ಗುಣಗಳೂ ಏಕ ಕಾಲದಲ್ಲಿ ಅವರ ಮುಖರಂಗವನ್ನು ಬೆಳಗಿಸಿದಂತೆ ಕಾಣುತ್ತಿತ್ತು. ಹೆಣ್ಣುಮಕ್ಕಳು ಕೆಳಗಿಳಿದು ಹೋದದ್ದನ್ನು ನೋಡಿ ಆಚಾರ್ಯರು ದೀರ್ಘನಿಶ್ವಾಸದೊಂದಿಗೆ "ಸೀನೂ, ಇಂದ ಋಣಭಾರ ಇಳಿಸಿಕೊಂಡೆವಾ. ಹೊರಲಾರದss ಹೊತ್ತ ನಿಂತಿದ್ದಿ. ಇಂದ ನಿರಂಬಳ ಆದಿ ನೋಡು. ಗಂಗಕ್ಕನ ಜೀವ ಧನ್ಯ ಆಗಿರ ಬೇಕು. ಯಾಕs"

"ನನ್ನ ಅಲ್ಪಸೇವಾ ಅವರಿಂದ ಸ್ವೀಕೃತ ಆಗಿರಬೇಕೂಂತ, ನಿಮಗ ನಿಸಿದರ ನಾ ಧನ್ಯ."

"ನಿನಗ ಅನಿಸಿತಲಾ. ಭಾಷಣದಾಗ ಅದನs ಹೇಳಿದಿ. ಕೇಳಿದ ಮಂದಿ ಕೈ ತಟ್ಟಿ ಸ್ವಾಗತಿಸಿದರು. ಜನತಾ-ಜನಾರ್ಧನಾ ಬ್ಯಾರೆ ಏನು?"

"ಸಾವಿರ ಜನರಿಗೆ ಅನಸೂದಕ್ಕ, ನಿಮಗ ಅನಸೂದಕ್ಕ ಬಿಡಸ್ತದ. ನಿಮ್ಮೊಬ್ಬರಿಗೆ ಸಮಾಧಾನ ಅನಿಸಿದ್ರ ನನಗ ಅಷ್ಟs ಸಾಕು."

"ನನಗss. ಹೂಂ. ಅನಿಸಿತನ್ನು ಇಲ್ಲಂತ ಹ್ಯಾಂಗ ಅನ್ನಲಿ? ಗಂಗಕ್ಕನ ಋಣಾ ತೀರಸ್ತಿದ್ದೀನಿ ಅಂತ ದಿಮಾಖ ಏನ ಹೇಳಿದಿ ನೋಡು, ಅದೂ ಮಾತ್ರ ತಪ್ಪಿತು. ನಾ ಹೇಳಕೋತ ಬಂದಿದ್ದೆ. ಋಣಾ, ತಮಾ, ತೀರಸಲಿಕ್ಕ ಬರ ಲಾರದ್ದು. ಪೂರ್ಣ ಕುಂಭ ಇದ್ದಾಂಗ. ಆ ರತ್ನಾಕರದಾಗಿನ ನೀರ್ನss ಭೊಗ ಸೀಲೆ ಎಷ್ಟಂತ ತಗದ ಬರೀದ ಮಾಡೀ? ಗಂಗಕ್ಕನ ಋಣಾ ಏಳೇಳ ಜನ್ಮ ಆದ್ರೂ ತೀರಸಲಿಕ್ಕೆ ಬರಲಾರಧಾಂಗ ಅದss. ನಿಂದರೆ ಏನ ತಪ್ಪು? ಕಲ್ಪನಾದ ಕುದರೀ ಏರೀ ನೀ ನಡದೀ. ಖರೇ ಹಕೀಕತ್ತ ನಿನಗ ಗೊತ್ತಿದ್ರ ಈ ಮಾತು ನಿನಗೂ ಮುಂಚಿನೇನss ಹೊಳೀತಿತ್ತು. ಆಗಲಿ. ಇಂದ ಪ್ರಸಂಗ ಬಂದದ.

ನನಗೂ ದಿನಾಽ ತುಂಬಕೋತ ಬಂದಾವ ಕುಳ್ಳಹೋಗಿ ಗೋರ್‍ಯಾಗ ಬಿದ್ದಾವ. ನಾ ಇನ್ನ ಎಷ್ಟು ಘಳಿಗೀಯುಂವಾ? ಇಲ್ಲೀ ತನಕಾ ಮುಚ್ಚಿಟ್ಟ ಮಾತು–ಒಮ್ಮೆ ಬಿಚ್ಚಿ ಹೇಳಿದೆನಂದ್ರ, ಎಲ್ಲಾಽ ಒಗಟ ಬಿಟ್ಟೀತು. ಹೇಳ ದಿದ್ರ ನನಗ ಕಾಕಪಿಂಡ ಆಗಲಿಕ್ಕಿಲ್ಲ. ನನ್ನ ಸ್ವಾರ್ಥಕ್ಕರ್ಽ ಅದನ್ನ ಹೇಳತೇನಿ, ಕೇಳು.

"ನಿನ್ನಲ್ಲಿ ಕಲ್ಪನಾ ಊಹಾ-ಶಕ್ತಿ ಮೂಡೂದಕಿಂತಾ ಮುಂಚಿನೇನಽ ನಿನಗ ಜನ್ಮಕೊಟ್ಟ ತಂದೀ ತಾಯೀ ಕಂಣ ಮುಚಿಕೊಂಡ ಬಿಟ್ರು. ಅವರು ಹ್ಯಾಂಗ ಇದ್ರೂ, ಏನ ಇದ್ರೂ, ಅನೂದರ ಮುಸಕ ಭಾಸನೂ ನಿನಗ ಇರೂ ಸಂಭವ ಇಲ್ಲಾ. ನೀ ವರ್ಷ-ದೀಡವರ್ಷದ ಕೂಸ ಇರತನಽ ಅವರದು ಅಂತ್ಯ ಆತು. ಅಂತ್ಯ ತಾನಾಗಿ ಆತು ಅನೂದಕಿಂತಾ, ಯಾರೋ ದುಷ್ಟರು ಅದನ್ನ ಮಾಡಿರಬೇಕು ಅಂದ್ರಽ ಒಪ್ಪೀತು. ಕಡೀಕನೂ ಅದನ್ನ ಮಾಡಿದವರ ಪತ್ತೆ ಮಾತ್ರ ಆಗಲಿಲ್ಲಾ. ಆದರ ಮಾಡಿದವರ ಪಾಪ, ನೋಡಿದವರ ಸುತ್ತ ಅನೂಹಾಂಗ, ಯಾರೋ ಮಾಡಿದ ಕೊಲೀಗೆ ಗಂಗಕ್ಕನ ಗಂಡ ಬಲೀ ಆಗ ಬೇಕಾತು.

"ನಿಮ್ಮ ತಂದಿ, ಮುಂಚಿನಿಂದೂ ವಾರಕರೀ ಪಂಥದವಾ. ಏನ ತಪ್ಪಿ ದರೂ ಅವನ ಕಾರ್ತೀಕ ಆಷಾಢದ ಪಂಢರಪುರದ ಯಾತ್ರಾ ಮಾತ್ರ ತಪ್ಪ ತಿರಲಿಲ್ಲಾ. ಮಳೀ, ಛಳೀ, ಬ್ಯಾನಿ, ಬ್ಯಾಸರಕಿ, ಯಾತರ ಪರಿವೀನೂ ಇಲ್ಲದಽ ಯಾತ್ರಾಮಾಡಿ ಮುಗಸಾಂವಾ. ಊರಿಂದ ಹೊರಡುವಾಗ–ಕಾಲ್ನಡಿ ಗೀಲೇನೆ ಹೋಗೂದು. ಬರುವಾಗ ಮಾತ್ರ ರೇಲ್ವೆದಲೆ ಬರೂದು. ಎಷ್ಟೋ ದಿನಾ ನಡಿಸಿಕೋತ ಬಂದಿದ್ದಾ ಪುರಂದರ ವಿಠಲಾ. ಆದರ ಅವಗೂ ಇದು ಬ್ಯಾಡ ಅನಿಸಿತೋ, ಏನ ಭಕ್ತ ಭಾರ ಆದನೋ ತಿಳೀದು. ಒಮ್ಮೆ ಮಾತ್ರ ಗಂಡ ಹೆಂಡತಿ ಇಬ್ಬರೂ ಬೇಡಿಕೊಂಡಿದ್ರು–ಯಾತ್ರಾ ಹೊಂಟ ಸಮಯ ಸಾಧಿಸಿ–ವಿಠೋಬರಾಯಾ ಅವರನ್ನ ಇಲ್ಲಿಂದ ಮುಕ್ತಮಾಡಿ, ತಾನು ಮೋಕಳೀಕ ಆದಾ.

"ನಿನಗ ಆಗ ೧॥-೨ ವರುಷ ಏನಾರೇ ಇರಬೇಕೇನಪಾ. ಕೂಸು ಸಂಣದು, ದಾರೀ ನಡೀಯೂ ತ್ರಾಸಿಗೆ ಹೈರಾಣ ಆದೀತು ಅನ್ನೂದರ ಪರಿವಿ ಯಿಲ್ಲದನಽ ಅವರು ಯಾತ್ರಾಕ್ಕ ಹೊಂಟಬಿಟ್ಟರು. ಯಾರ ಹೇಳಿದ್ರೂ

ಕೇಳಲಿಲ್ಲಾ. ದೇವರು ಕಾಯೋಂವ ಇರೂವಾಗ ಯಾಕ ಚಿಂತಿ ಅಂತ ಅವರ ಅಂಬೋಣ. ಆ ಸಾರಿ ಗಂಗಕ್ಕನ ಯಜಮಾನರು ಭೋಧರಾಯರೂ ಹೊರ ಟಿದ್ದರು ಕಾಲ್ನಡಿಗೀಲೇನs ಯಾತ್ರಾಕ್ಕ. ಅವರಿಗೆ ಮಕ್ಕಳಿರದ ವ್ಯಥಾ. ಭಕ್ತಪ್ರಿಯ ವಿಠ್ಠಲಾ ಕರುಣಿಸಿದರ ಫಲಾ ದೊರತೀತು ಅನೂ ಆಶಾ. ಅಂತೂ ಒಬ್ಬರಿಗೊಬ್ಬರ ಜೋಡೀ ಅದs. ಸೆರವ ಅಲ್ಲs. ಯಾತರ ಅಂಜಿಕಿ? ಏನ ಅರೀದ ಹಾದಿ ಅಲ್ಲ. ಆ ಹಾದೀಲೇನs ಹತ್ತಿಪ್ಪತ್ತ ವರ್ಷ ಅಲೆದದ್ದ ಆಗೇದ. ಅಂತೂ ಮೂರೂ ಮಂದಿ, ನೀ ಒಂದ ಚುಂಗಟೀ ಕೂಸಾ. ಇಷ್ಟು ಮ್ಯಾಳ ಹೊರಟಿತು. ಹೊಂಟ ಘಳಿಗಿ ಮಾತ್ರ ಯಾರಿಗೂ ಶುಭದ್ದ ಇಪ್ಪಾಂಗ ಕಾಣಿಸ ಲಿಲ್ಲ. ಅವರೆಲ್ಲಾ ಹೋಗಿ ೧೫-೨೦ ದಿನಾ ಆಗಿರಬೇಕು. ೩-೪ ದಿನಕ್ಕೊಮ್ಮೆ ಅವರಿಂದ ಪತ್ರಬರತಿದ್ದೂ, ಖುಶಾಲಿ ತಿಳೀತಿತ್ತು. ಆದರ ಮುಂದ ೮-೧೦ ದಿನಾ ಆದ್ರೂ ಸುದ್ದಿ ಸಮಾಚಾರ ಏನ ಬರಲೇ ಇಲ್ಲ. ಗಂಗಕ್ಕಗ ಜೀವ ಕಸಿ ವಿಸಿ ಆಗಿ—ನನಗ ಬಂದು ಕೇಳೂಆಕಿ. ನಾನರs ಏನ ಹೇಳ್ಲಿ? ಅಂತೂ ಬಂದೀತು, ಕಾಳಜೀ ಬ್ಯಾಡ ಅಂತ ಸಮಜೂತಿ ಹಾಕಿ ಕಳಸತಿದ್ದೆ. ಒಂದ ದಿನಾ ಮರಾಠೀ ವರ್ತಮಾನ ಒಂದರಾಗ—ಜ್ಞಾನಪ್ರಕಾಶ ಇರಬೇಕು—ಒಂದು ಸುದ್ದಿ ಏನವಾ—'ಸೊಲಾಪೂರ ಪಂಢರಪೂರ ರಸ್ತೇದಾಗ ಒಬ್ಬ ಗಂಡಸು-ಒಬ್ಬ ಹೆಂಗಸಿನ ಖೂನೀ ಆಗಿದ್ದು—ರಕ್ತದ ಕಾವಲೀ ನಡವ ಒಂದು ೧॥-೨ ವರುಷದ ಕೂಸಾ ಅಳಕೋತ ಬಿದ್ದಿತ್ತು. ಪೋಲೀಸರು ಪಂಚನಾಮೇ ಮಾಡಿ ಹೆಣಾ—ಕೂಸು—ತಾಬೇಕ್ಕ ತಗೊಂಡಾರ' ಅಂತ. ಊರತುಂಬ ಬೊಬಾಟಾ! ಯಾರ ಇರಬೇಕು ಖೂನಿ ಆದಾವ್ರು—ನಮ್ಮೂರವ್ರೇ ಯಾಕ ಆಗಿರಬಾರದು? ಅಂತ! ಇಲ್ಲೀ ಪೋಲೀಸರ ಕಡಿಂದ ಚವಕಶಿಗೆ ಬರಸಿದೆವು. ಫೌಜದಾರ ನನ್ನ ಗುರುತಿನಂವಾ, ಖಟಪಟ ಮಾಡಿಸಿದೆ. ಅಲ್ಲಿಂದ ರಿಪೋರ್ಟ ಬಂತು' 'ಅವರ ಗುರ್ತು—ಖೂನಾ ಹಿಡಿಯುವಂಥಾವ್ರು ಯಾರರೇ ಇದ್ರ ಅವರನ್ನ ಕರ ಕೊಂಡು ಬರಬೇಕಂತ.' ನಾನು—ಫೌಜದಾರ ಸಂಣಪ್ಪ, ಇಲ್ಲಿಂದ ಹೋದೇವು. ನಿನ್ನ ತಂದೀ ತಾಯೀ ಹೆಣಾ ವಿಕಾರಾಗಿ ಬಿಟ್ಟಿದ್ದೂ; ಗುರ್ತ ಹತ್ತಧಾಂಗs ಆಗಿದ್ದೂ. ನಿನ್ನ ಗುರ್ತ ಹೇಳಿದೇವು. ಅದರ ಜೋಡಿ ಉಳದ ಹಕೀಕತ್ತೂ ಹೇಳಬೇಕಾತು. ಊರಿಂದ ಹೊರಡಾಗ ಯಾರ್‍ಯಾರಿದ್ರೂ, ಎಂದ ಹೊರಟಿದ್ರೂ ಅದನ್ನ ಹೇಳದs ಗತೀನೇ ಇರಲಿಲ್ಲಾ. ಎಲ್ಲಾ ನೋಂದಾಯಿಸಿಕೊಂಡ

ಮ್ಯಾಲ ಹೇಳಿದರು–ಕೂಸಿನ್ನ ಪಂಡರಪುರದ ಬಾಲಕಾಶ್ರಮದಾದ ಇಡತೇವಿ ಅಂತ. ನನಗ ಕೆಡಕನಿಸಿತು. ಊರಾಗ ಇಷ್ಟು ಜನಾ ಇದ್ದೂ–ನಿನ್ನ ಅನಾಥ ಆಶ್ರಮದ ಪಾಲ ಮಾಡಬೇಕಂದರ ಮನಸ್ಸೊಪ್ಪಲಿಲ್ಲ. ಸಂಪಣಪ್ಪನ ರದಬದಲೀಯಿಂದ ನಿನ್ನ ಜ್ವಾಕಿ ಮಾಡೂ ಭಾರಹೊತ್ತೆ ನಿನ್ನ ನನ್ನ ತಾಬೇಕ್ಕ ತಗೊಂಡೆ. ನಿನ್ನೇನೋ ತಂದೆ. ಆದ್ರ ಗಂಗಕ್ಕನ ಯಜಮಾನರ ಗತೀ ಏನಾಯಿತು ಅನೂದರ ನಿಷ್ಪನ್ ಮಾತ್ರ ಅಲ್ಲೆ ಆಗಲೇ ಇಲ್ಲಾ. ಪೋಲೀಸರ–ಸರಳ ಅಂದಾಜಿನ ಪ್ರಕಾರ ಅವರೇ ಖೂನಿಮಾಡಿ ಫರಾರಿ ಆಗಿರಬೇಕಂತ ಕಾಯಾಸ ಆತು. ಬೋಧರಾಯರ ತಪಾಸಣೀಗೆ ಎಲ್ಲಾ ಕಡಿಗೂ ಆರ್ಡರ ಹೋತು. ಇದನ್ನೆಲ್ಲಾ ಮುಗಿಸಿ ಊರಿಗೆ ತಿರಗಿ ಬರಬೇಕಾದ್ರ ೧೦–೧೫ ದಿನಾ ಹಿಡೀತು. ತಿರಗಿ ಬರೂದ್ರಾಗಽ ಇಲ್ಲೊಂದು ಸುದ್ದೀನಽ ಬ್ಯಾರೇ ಎದ್ದಿತ್ತು. ಆಗ ನಮ್ಮೂರಾಗ ಒಬ್ಬ ಅಯ್ಯಾ ಇರತಿದ್ದಾ. ಅವಗ ರಮಲಶಾಸ್ತ್ರ ಬರತಿತ್ತಂತ ಜನಕ್ಕ ಗೊತ್ತು. ಹೋಗಿ ಕೇಳಿದ್ರು. ಅವನೂ ಕೆಲವು ವಿಷಯದಾಗ ಖರೇನ ಆಡಿದ್ದಾ ರಮಲನ್ನ: 'ಇಂಥಾ ಜಾಗಾದಾಗ–ರಸ್ತೇದ ಇಂಥಾ ಬಾಜೂಕ್ಕ–ಗಂಡಾ ಹೆಂಡತೀ ಖೂನೀ ಆಗೇದ. ಮಾಡಿದವರು ಅಜಮಾಸ ಹೀಂಗ ಹೀಂಗ ಇರೂ ಸಂಭವ ಅದಽ.' ಚಾಣಿಸಿ ನೋಡಿದೆ. ಖೂನಿ ಆದ ಸ್ಥಳ ಮಾತ್ರ ಹೊಂದಿತು. ಮಾಡಿದವರ ಹೋಲಿಕೆ–ಬೋಧರಾಯರಿಗೆ ಹೊಂದಲಿಲ್ಲ. ನನ್ನ ಲೆಕ್ಕಕ್ಕ ಹೊಂದದಿದ್ರೂ–ಜನರ ಆಡಿಕೊಂಬೂದಕ್ಕ ಹೊಂದದನಽ ಇರತಽದ? ಅವರು ಏನೇನೋ ಹೊಂದಿಸಿ–ಖೂನಿಗೆ ಕಾರಣ ಬೋಧರಾಯನಽ ಇರಬೇಕಂತ ನಿಷ್ಕರ್ಷ ತಗದರು.

"ಬೋಧರಾಯರು ಖೂನೀ ಮಾಡೂ ಕಾರಣೇನು ? ಅವರಿಗೇನಂಥಾ ಆಶಾ ಇರಬೇಕು—ಅನೂದರ ಸಾರಾಸಾರಾ ವಿಚಾರ ಮಾತ್ರ ಯಾರೂ ಮಾಡಲಿಲ್ಲಾ. ನನಗ ಸಂಪೂರ್ಣ ಖಾತ್ರೀ ಇತ್ತು, ಅಂವಾ ನಿರ್ದೋಷಿ ಇದ್ದಾನಂತ. ಆದರ ಆಡೂ ಸಾವಿರ ನಾಲಿಗೀ ಮುಂದ ನನ್ನ ಸಂಣಧನಿ ಯಾರಿಗೆ ಕೇಳಸಬೇಕು? ಅಷ್ಟು ದರಿದ್ರ ಬ್ರಾಹ್ಮಣ ನಾ. ಉರಾಗೇನ ಗಣ್ಯ ವ್ಯಕ್ತೀನಽ, ವಜನದಾರ ಮನಸ್ಯಾನಽ, ಏನದಽ? ಅಲ್ಲದಽ ಬೋಧರಾಯಾ ಇರೂತನಕಾ–ಸನ್ನ ಸಾಲಿಗೆ ಕೈ ಸಡ್ಲಬಿಟ್ಟು ದಾನಾ ಮಾಡಿದ್ದಾ. ಅವನ ಬಾಜೂ ಹಿಡಕೊಂಡು ಇಂವಾ ಆಚಾರಿ ಹೇಳತಾನ. ಇವನ್ನೂಽ ಅದರಾಗ ಕೈವಾಡ ಇರಬೇಕು–ಅಂತೂ

ಒಬ್ಬಿಬ್ಬರು ಅಂದಿದ್ರಂತ. ಆದರ ಫೌಜದಾರ್ರಿಗೆ ನನ್ನ ಸಾಚಾತನದ ಅರಿವಿತ್ತು, ಅಂತಕ ಅದೇನು ನನ್ನ ಬಾಧಸಲಿಲ್ಲಾ.

"ಖೂನೀಮಾಡಿ ಬೋಧರಾಯಾ ಫರಾರಿ ಆಗ್ಯಾನಂಬೂ ಕಾರಣದಿಂದ ಅವನ ಪತ್ತೇದಾಗ ಪೋಲೀಸರು ಎಲ್ಲಾಕಡೀಗೂ ಗುಪ್ತ ವೇಷದಾಗ ಅಡ್ಡಾಡತಿದ್ರು. ಬೋಧರಾಯನ ಮನೀ ಸುತ್ತೂ ಅವರ ಜಾಲ ಹರಡಿತ್ತು, ವೇಷಾಂತರ ಮಾಡಿ ಅಂವಾ ಬಂದ್ರೂ ಬರೂ ಸಂಭವ ಅದ ಅಂತ. ಈ ಎಲ್ಲಾ ಸುದ್ದಿಯಿಂದ ಗಂಗಕ್ಕ–ಗಂಡನ ಕಳಕೊಂಡ ದುಃಖ, ಅಲ್ಲದನ–ಅಪಮಾನಾ–ಅಪಕೀರ್ತಿ ಭಾರದಿಂದ ಕುಗ್ಗಿ ಹೋಗಿದ್ಲು. ಅಕೀಗೆ ಹೇಳಿದರ ನಾನs ಸಮಾಧಾನ ಹೇಳಾಂವ. ಅಕೀಗೂ ಏನ ಹತ್ತಿ–ಹೊಂದಿದವರು ಇದ್ದರೂ ಅಷ್ಟರಾಗs ಇತ್ತು. ಬೋಧರಾಯಂದೂ ಹಂಗೆ. ಅವನ ವಿಶ್ವಾಸದ ಗೆಳ್ಯಾರಾಗ ಅಂದ್ರ ನಾ ಒಬ್ಬ ಮಾತ್ರ ಇದ್ದೆ. ನನ್ನ ಮಾತಿನ ಮ್ಯಾಲ ಭಾರಾ ಹಾಕಿ ಗಂಗಕ್ಕ ಜೀವಧಾರಣ ಮಾಡಿಕೋತ ಇದ್ಲು. ಅವರ ಮನೀ ಸನೇಕ ಸುಳಿಯೂ ಧೈರ್ಯಾ ಯಾರಿಗೂ ಇರಲಿಲ್ಲಾ. ಯಾಕಂದರ ಪೋಲೀಸ್ರು ಸಂಶಾತಗೊಂಬೂ ಸಂಭವ ಇತ್ತು. ಸಂಣಪ್ಪನ ಬಲಾ ಇತ್ತೂ ಅಂತs ನಾ ಒಬ್ಬ ಅಲ್ಲಿಗೆ ಹೋಗಿ ಬರತಿದ್ದೆ. ನಿನ್ನ ಕರಕೊಂಡ ಬಂದ ಸುದ್ದೀ ಮಾತ್ರ ಗಂಗಕ್ಕನ ಮುಂದ ಒಡದಿರಲಿಲ್ಲಾ. ಯಾಕಂದರ ನಿಮ್ಮ ಕಾಲಾಗ ಬೋಧರಾಯಗ ಇಂಥಾ ಸಂಕಟ ಬಂತು—ಅನೂ ಭಾವನಾ ಆಗಿ–ಅಕೀ ಮನಸು ಕೆಡೂ ಸಂಭವ ಇತ್ತು. ಅಲ್ಲದ ಅದನ್ನ ಹೇಳಿದ್ರೂ ಆಗೂ ಫಾಯದೇನೂ ಅಷ್ಟರಾಗs ಇತ್ತು.

"ಅಂತೂ ತಿಂಗಳೆರಡು ತಿಂಗಳಾದ್ರೂ ಯಾತರದೂ ಪತ್ತೇ ಆಗದs ಉಳೀತು. ಪೋಲೀಸರ ಕಾವಲಾ–ಓಡ್ಯಾಟ ಒಂದಿಷ್ಟು ಸಡ್ಲ ಆಧಾಂಗಾತು. ಒಂದಿನಾ ಸರಿರಾತ್ರಿ ಮೀರಿ ಹೋಗಿರಬೇಕು. ಅಂದ ದರಶೀ ಅಮಾಸಿ. ನಾನೂ ಅದs ಸಾಲೀ ಕೆಲಸಾ ಮುಗಿಸಿ ಇನ್ನೇನು ಅಡ್ಡಾಗಬೇಕೂ ಅನೂಅಂವಾ. ಅಷ್ಟರಾಗನs ಯಾರೋ ಮೆಲ್ಲಕ ಟಿಕ್ ಟಿಕ್ ಅಂತ ಬಾಗಲಾ ಬಡದ ಸಪ್ಪಳಾತು. 'ಯಾರದು ?' ಅಂದೆ. ಮಾತಿಲ್ಲಾ–ಕತಿಯಿಲ್ಲಾ. ಮತ್ತ ಟಿಕ್ ಟಿಕ್ ಅಂತ ಬಟ್ಟಿಲೆ ಬಾಗಲಾ ಬಡಿಯೂ ಸದ್ದು. ಎದ್ದು ಧೈರ್ಯಾಮಾಡಿ ಬಾಗಲಾ ಅಂತೂ ತಗದೆ. ನೋಡಿದರ–ಗಡ್ಡಾ–ಮೀಸಿ ಬೆಳೆಸಿದ–ಬೈರಾಗಿ ವೇಷದಾಗಿನ

ಒಂದು ವ್ಯಕ್ತಿ ಸರ್‍ರ್‍ನ ಒಳಗ ನುಸುಳಿ-ತಾನs ಬಾಗಲಾ ಮುಂದಮಾಡಿ ಚಿಲಕಾ ಹಾಕಿ ಅಗಳೀ ಎಳದಬಿಟ್ಟಿತು. ನಾ ಬರೂದರ ಹಾದೀ ಸುದ್ದೆ ನೋಡ ದನs, ತಾನೇ ತಾನಾಗಿ ಭರಭರನೆ ಅಡಿಗೀ ಮನೆಯ ಕಡೆಗೆ ನಡದೂಬಿಟ್ಟಿತು. ಆ ನಡಿಗಿ-ಆ ಆಕಾರ ನೋಡಿದರ ಆ ವ್ಯಕ್ತಿ ಬೋಧರಾಯಾ ಅನೂದ್ರಾಗs ಸಂಶಯನs ಉಳೀಲಿಲ್ಲಾ. ನನಗೂ ಧೈರ್ಯಾ ಬಂಧಾಂಗಾತು. ಅವನ್ನ ಕರ ಕೊಂಡು ದೇವರ ಮನೀಗೆ ಹೋದೆ. ಅಲ್ಲೇ ನಂದಾದೀಪದ ಬೆಳಕಿನಾಗ ಇಬ್ಬರೂ ಕೂತೇವು. ಅವಾ ಎಲ್ಲೀದೋ ಧೂರದಿಂದ ಧಾವಿಸಿ ಬಂಧಾಂಗಿತ್ತು. ನೀರ ಬೇಡಿದಾ. ತುಂಬಿದ ತಂಬಿಗಿ ಥಾಲೀ ಮುಂದ ಇಟ್ಟೆ. ಒಳಗೆ ಹೋಗಿ ಒಂದ ವಾಟಗಾದ ತುಂಬ ಹಾಲ ತಂದುಕೊಟ್ಟೆ. ಬೋಧರಾಯ ಎದ್ದು ಕೈಕಾಲ ತೊಳಕೊಂಡು ಬಂದು, ದೇವರಿಗೆ ದಂಡವತ್ ಪ್ರಣಾಮ ಮಾಡಿ ಹಾಲ ಕುಡದಾ. ಒಮ್ಮೆ ಕಣ್ಣು ಮುಚ್ಚಿ ತಗಧಾಂಗ ಮಾಡಿ, ದೀರ್ಘ ನಿಶ್ವಾಸಬಿಟ್ಟು ಹೇಳಿದ: "ಬಾಳೂ-ನಾ ಈ ವೇಷದಾಗ ಬಂದೇನಂಬೂ ಕಲ್ಪನಾ ಕನಸ ಮನಸಿನ್ಯಾಗೂ ಬಂದಿರಲಿಕ್ಕಿಲ್ಲಾ. ಜನಾಪವಾದ ಏನ ಬಂದದ ಅನೂ ದರ ಹಕೀಕತ ನಿನಗೂ ಗೊತ್ತದ. ಪ್ರಾಣದೇವರ ಸಾಕ್ಷಿಯಿಟ್ಟ ಹೇಳತೀನಿ. ಮುಂದ ಥಾಳ ಆಗಿ ನಂದಾದೀಪ ಉರೀತದ. ಅದರ ಆಣೀ ಮಾಡಿ ಹೇಳ ತೇನಿ. ಖೂನಿ ಮಾಡಿದಂವಾ ನಾ ಅಲ್ಲಾ. ಅವರನ್ನ ಕೊಂದು ನಾ ಏನ ಪಡಕೋಬೇಕಾಗಿತ್ತು. ಮನ್ಯಾಗ ಅಷ್ಟೈಶ್ವರ್ಯ ಇತ್ತು. ಏನ ಹೆಂಣಿನ ಆಶಾಕ್ಕ ಮಾಡಿದೇ ಅಂದ್ಯಾ. ಗಂಗೂನಂಥಾ ರಂಭಾ ದಾಸಾನುದಾಸಿ ಆಗಿದ್ಲು. ಇನ್ನ ಬ್ಯಾರೆ ಯಾವ ಆಶಾದಿಂದ ನಾ ಅವರ ಖೂನೀ ಮಾಡ ಬೇಕಾಗಿತ್ತು? ಒಂದ ತಪ್ಪಾತು ನನ್ನ ಕಡಿಂದ. ಅದರ ಪ್ರಾಯಶ್ಚಿತ್ತ ನಾನs ಅನುಭೋಗಿಸಬೇಕು; ಭೋಗಸ್ತೀನಿ. ವಿಧಿಯಿಲ್ಲಾ. ನೀ ಬೇಕಾರ ವಿಶ್ವಾಸ ಇಡು, ಬಿಡು. ಆದ ಸುದ್ದೀ ನಿನ್ನ ಮುಂದ ಹೇಳಿ-ಗಂಗೂನ್ನ ಸಮಾಧಾನ ಮಾಡೂ ಅಂತ ನಿನಗೆ ಭೆಟ್ಟಿಯಾಗಿ ಹೇಳಿ ಹೋಗೂಅಂಥಾ ದಿವ್ಯ ಮಾಡೀನಿ. ನಾವ್ ಮೂರು ಮಂದಿ ಆ ಕೂಸಿನ್ನ ಕಟಿಕೊಂಡು ಯಾತ್ರಾಕ್ಕ ಹೊರಟದ್ದು ನಿನಗ ಗೊತ್ತs ಅದs. ನಮ್ಮ ಜೋಡಿ ಒಂದಿಷ್ಟು ಗಂಟ-ಗದಡಿ ಇದ್ದs ಇತ್ತು. ಮ್ಯಾಲ ೧-೧॥ ವರುಷದ ಹಸಗೂಸು-ಪಾಪ. ಆ ಹೆಣ್ಮಗಳಿಗೆ ತ್ರಾಸ ಬ್ಯಾಡಾ ಅಂತs ಒಂದ ಹೆಗಲಿಗೆ ಹಸಿಬಿ ಇನ್ನೊಂದು ಹೆಗಲ ಮ್ಯಾಲ ಕೂಸಿನ

ಮಲಗಿಸಿಕೊಂಡು—ನಾನು ಮುಂದ ಮುಂದ ಅವರ ಹಿಂದಿಂದ—ನಡಿಯೂ ಪರಿಪಾಠ ಇಟಗೊಂಡಿದ್ದೆವು. ಸೋಲಾಪೂರ ದಾಟಿದ ಮ್ಯಾಲ ಒಂದ ಧೊಡ್ಡ ಹಳ್ಳ ಬರತದs. ಅದರ ದಂಡೀಸುತ್ತ ಜಾಲೀ ಬನಾ ವಿಪರೀತ. ಅದರಾಗ ಹಾದೀ ನಡದ ಹೋಗಬೇಕು. ಆದೇನ ರಾಜರಸ್ತೇ ಅಲ್ಲಾ ಏನ ಅಲ್ಲಾ. ಹೀಂಗs ಸೀದಾ ಹೋಗಬೇಕಂತ ಗೊತ್ತ ನನಗ. ನಾ ಭರಾಭರಾ ಮುಂದ ನಡದಿದ್ದೆ. ಹಿಂದೆ ಇವರು ಗಂಡಾ ಹೆಂಡತಿ ನಿಧಾನಾಗಿ ಬರತಿದ್ರು. ನಾ ಎಷ್ಟ ಮುಂದ ಹೋಗಿದ್ನೋ ನನಗೇ ತಿಳೀದು. ಭಾಳ ಹೊತ್ತಾದರೂ ಇವರ ಸುಳಿವನs ಇಲ್ಲಾ—ಬರಲಿ ಅಂತ ಅಲ್ಲೇ ಒಂದಿಷ್ಟು ಕೂತೆ. ತಾಸ ಅರ್ಧಾ ತಾಸ ಆದ್ರೂ ಪತ್ತೇನs ಇಲ್ಲಾ. ಚಿಂತಿ ಅನಿಸಿ—ಮತ್ತೆ ತಿರಗಿ ಹೊಂಟೆ. ೧-೧॥ ಮೈಲು ತಿರುಗಿ ಬಂದ ನೋಡಿದೆ. ಅವರ ಕಡೇ ಇದ್ದ ಹಸಿಬಿ ಚೆಲ್ಲಾಪಿಲ್ಲಿ ಆಗಿ ಬಿದ್ದಿತ್ತು. ಅಲ್ಲೇ ಸನೇದಾಗ ಇದ್ದ ಫೂಲಿನ ಹತೀಲೆ ಇವರಿಬ್ಬರ ಹೆಣಾ ಅಸ್ತಾವ್ಯಸ್ತ ಆಗಿ ಬಿದ್ದಿದ್ದು ರಕ್ತ ಇನ್ನೂ ಚಿಮ್ಮತಿತ್ತು. ಕೊಡ್ಲಿ ಕಚ್ಚ ಇದ್ದೂ ಮೈಮ್ಯಾಲs. ತಲೀ ತಿರಗಿ ಭವಳಿ ಬಂಧಾಂಗಾತು. ಏನ ಮಾಡಲಿಕ್ಕೂ ಹೊಳೀದ ನಿಂತಕೊಂಡೆ. ಕೂಸ ಇನ್ನೂ ಮಲಗಿ ನಿದ್ದೀ ಮಾಡತಿತ್ತು. ಬರೂಹೋಗವರ ದಾರೀ ನೋಡಿ ಈ ಸುದ್ದೀ ನೆರೀ ಊರಿಗೆ ಮುಟ್ಟಿಸಬೇಕು. ಇಲ್ಲs ನಾನs ಹೋಗಿ ಹೇಳಿಬರಬೇಕು ? ಅಲ್ಲೆ ನನ್ನs ಹಿಡದರs ಖೂನೀ ತಾನ ಮಾಡಿ ಈಗ ಹೇಳಲಿಕ್ಕೆ ಬಂದಾನಂತs! ಇಂಥಾ ವರ್ದಿ ಕೊಟ್ರ—ನಾನs ಆಗಿ ಬಲ್ಯಾಗ ಬಿದ್ಧಾಂಗ. ಹಾಂಗs ಓಡಿ ಹೋದೇನs ಈ ಕೂಸೊಂದು ! ದಿಕ್ಕ ತಪ್ಪಿಧಾಂಗ ಆಗಿ ನಿಂತೆ. ಅಷ್ಟರಾಗs ಧೂರದಿಂದ ಗಾಡಿ ಬರೂ ಸಪ್ಪಳ ಕೇಳಸಲಿಕ್ಕೆ ಹತ್ತು. ಎತ್ತಿನ ಗೆಜ್ಜಿ ದನಿ ಸನೆಸನೇಕ ಬಂಧಾಂಗಾತು. ನಿಂತು ನಾನಾಗೆ ಮರಣ ತರಕೊಂಬೂದಕಿಂತಾ—ವಿಠ್ಠಲ ಕಾಯಾಂವಿದ್ದರ ಕಾಯ ತಾನ. ಈ ಕೂಸಿನ ಭಾರ ಅವನ ಮ್ಯಾಲs ಇರಲಿ ಅಂತ—ಕೂಸಿನ್ನ ಅಲ್ಲೆ ಮಲಗಿಸಿ, ಅಂದ ಏನ ಫರಾರಿ ಆದೆ—ಇಂದೇ ಇಲ್ಲಿ ಬಂದೇನಿ. ಆಗೀಗ ನಡದ ಸುದ್ದಿ ಕಿವಿಗೆ ಬಿದ್ದು, ಎಲ್ಲಾ ಗೊತ್ತಾಗೇದ—ಗುನ್ಹೇಗಾರ ನಾನs ಅಂತ. ಇನ್ನ ನನಗ ಮುಕ್ತೀ ಇಲ್ಲಾ. ಒಂದು, ಜೀವಾನರೀ ನೀಗಬೇಕು. ಇಲ್ಲಾ, ತಲೀ ಮರಿಸಿಕೊಂಡು ಹಿಂಗs ಅಲೀಬೇಕು—ಬಾವಾ ಬೈರಾಗಿ ಆಗಿ, ಗೋವಾ ಹೈದ್ರಾಬಾದದಾಗ ತಲೀ ತಪ್ಪಿಸಿಕೊಂಡು—ಕೂಲಿ-ಕುಂಬಳಿ ಮಾಡಿಕೋತ.

ಇಲ್ಲಾ ಭಿಕ್ಷಾ ಎತಕೋತ ಇರಬೇಕು. ಎಂದ ಈ ಮಾತಿನ ನಿಜಾಂಶ ಗೊತ್ತಾಗತದ ಅಂದ ಹೊರಗ ಬರಬೇಕು. ಬದಕಿದ್ರ ಬರತೀನಿ. ಇಲ್ಲಽ ಕೃಷ್ಣಾರ್ಪಣ ಅನ್ರಿ. ಗಂಗೂನ್ನ ನಿನ್ನ ಉಡ್ಯಾಗ ಹಾಕೀನಿ. ಬೆನ್ನ ಬಿದ್ದ ತಂಗೀ ಅಂತ ಜೋಪಾನಾ ಮಾಡು. ಮಗಳಂತ ನೋಡಿಕೊ. ನನ್ನ ಜೀವದ ಮ್ಯಾಲಿನ ಆಶಾಕ್ಕ—ಈ ಕೂಸಿನ್ನ ಅಡಿವೀಪಾಲ ಮಾಡಿದೆ. ಅದರ ಪಾಪಾ—ನನಗ ಭೂತ ಆಗಿ ಬೆನ್ನ ಹತ್ತೇದ. ಅದರ ಪ್ರಾಯಶ್ಚಿತ ಭೋಗಸದ ಗತೀಯಿಲ್ಲಾ. ಇದ ನೋಡು, ಈ ಕಾಗದ. ಗಂಗೂಗ ಕೊಡು. ಅವಳಿಗೆ ಗೊತ್ತು ನನ್ನ ಅಕ್ಷರಾ. ನನ್ನ ದುಡ್ಡು-ದುಗಾಣಿ-ಇಸ್ಟೇಟ ಎಲ್ಲಾದಕೂ ಅಕೀನಽ ಮಾಲಕೀ. ಜೀವ ಇರೂತನಕಾ ಅನಭೋಗಿಸಲಿ. ಮುಂದ ಅದರ ವಿಲ್ಹೆವಾಟ ಅಕೀ ತನಗ ಅನಿಸಿಧಾಂಗ ಮಾಡಲಿ. ನನ್ನ ನಶೀಬ ಇದ್ರ ಅಕೀ ಮಂಗಳಸೂತ್ರದ ಪುಣ್ಯಾ ಇದ್ರಽ ತಿರಗಿ ಬರತೀನಿ. ಅಪವಾದ ತಾನಽ ಅಳದೀತು; ಇಲ್ಲಽ ಇಲ್ಲೇ ಇಲ್ಲಾ. ಈ ಕೂಸಿನ್ನ ನಾನಽ ಅನಾಥ ಮಾಡಿದಂವಾ. ಅದರ ಭಾರ ನಿಮ್ಮ ಮ್ಯಾಲ ಅದಽ. ಪ್ರಸಂಗ ಬಂದಾಗ ಈ ಕೂಸಿನ ಸುದ್ದೀ ಅಕೀಗೆ ಹೇಳು. ಅಕೀ ಮನಸ್ಸು ಕರಗಿ-ಇದರ ಕಲ್ಯಾಣ ಕಟ್ಟಬೇಕೆಂದರ ಅದು ಕೈಗೂಡೀತು. ಗಂಗೂ ದೊಡ್ಡ ಜೀವಾ. ಸಮಂಜಸ ಬುದ್ಧೀಯಾಕಿ. ನನ್ನ ಕೈ ಹಿಡದು ಏನ ಸುಖಾ ಅನುಭೋಗಿಸಿದ್ಲು? ಇರಲಿ. ಈ ಕೂಸಿನ್ನ ಅಡವೀಪಾಲ ಮಾಡಿದ ಪಾಪಾ ತಲೀಮ್ಯಾಲ ಹೊತಗೊಂಡು ಅಶ್ವತ್ಥಾಮನ್ಹಾಂಗ ದೇಶ ದೇಶ ತಿರಗತೀನಿ. ಅದರ ಪರಿಹಾರ ಆಗಿ-ಒರೂ ಕಾಲ ಬಂದ್ರ ಬರತೀನಿ-ಇಲ್ಲಽಇಲ್ಲೆ ಇಲ್ಲಾ."

"ಛದ್ಮವೇಷಧಾರಿಯಾದ ಬೋಧರಾಯ ಒಂದೇ ಉಸಿರಿನ್ಯಾಗ ಎಲ್ಲಾ ಮಾತು ಮುಗಿಸಿ-ಮಲಕ್ಕೊಂಡು ಗಡದ್ದ ನಿದ್ದೀಮಾಡತಿದ್ದ ನಿನ್ನ ಮುಸಕ ತಗದು ಹಣೀಗೊಂದು ಮುದ್ದಕೊಟ್ಟು ಹ್ಯಾಂಗ ಬಂದಿದ್ನೋ ಹಾಂಗಽ ಭರ್ರನೇ ಹೋಗಿಬಿಟ್ಟಾ. ಅಂದಿನಿಂದ ಇಂದಿನ ತನಕಾ, ತಿರಗಿ ಅವನ ಭೆಟ್ಟಿ ಇಲ್ಲಾ. ಅವನ ಅವಸಾನ ಮುಗದಿರಬೇಕು. ಅಂವಾ ಬಂದ ಹೋದ ಸುದ್ದೀ ಒಂದಿನಾ ಗಂಗಕ್ಕಗ ತಿಳಿಸಿ-ಅವನ ಪತ್ರಾ ಕೊಟ್ಟೆ. ಅದನ್ನ ಓದಿ ನೋಡಿ ಅತ್ತ ಅತ್ತ ಹಂಣಾದ್ಲು. ನಿನ್ನ ದಶಿಂದ ಆಗನೂ ಒಂದ ಮಾತ ಆಡಲಿಲ್ಲಾ. ಎಂದ ಒಂದ ದಿನಾ ನೀ ಭಿಕ್ಷಾಟನಕ್ಕ ಹೋಗಿ ಭವಳಿ ಬಂದ ಬಿದ್ದಿದ್ದಿ ಅವರ

ಮನೀ ಬಾಗಲದಾಗ—ಅಂದ್ಕ ಈ ಮಾತ ಒಡದೆ. ಬೋಧರಾಯ ಕೊಂದ ಕೂಸಿನ್ನ ನೀವ್ ಬದಕಿಸಿದ್ರಿ–ಅದನ್ನ ಬಾಳಸೂದು ನಿಮ್ಮನ್ನ್ಕ ಕೂಡೇದಂತ್ಕ. ಅಂದಿನಿಂದನ್ಕ ಅವರ ಮನೀ ಅನ್ನಾ ನೀರು–ನಿನ್ನ ಬೆಳವಣಿಗ್ಗೆ ಆತು. ಅವರ ಹಚ್ಚಿದ ದೀಪದಾಗ ನಿನ್ನ ಹಾದಿ ಸಾಗೇದ. ಯಾರೋ ಯಾರನ್ನ ಕೊಂದ ಪಾಪಕ್ಕ ಬೋಧರಾಯ ಬಲೀ ಆಗಿ–ಕೈ ಹಿಡದ ಹೆಂಡತೀನ್ನ ಅನಾಥಳನ್ನ ಮಾಡಿ ಹೋದಾ. ಆ ದುಃಖ ಹಚಿಕೊಳದೇನ್ಕ–ಎಲ್ಲಾ ನುಂಗಿಕೊಂಡು ಗಂಗಕ್ಕಾ ನಿನ್ನ ಬದಕಿಸಿದ್ಲು. ಇನ್ನಾ್ಕ ಮುಗದಿಲ್ಲಾ ಕತಿ! ನಿಂದ್ರು. ಅಕೀ ಋಣಾ ನಿನ್ನ ಮ್ಯಾಲ ಎಷ್ಟು ಅದ್ಕ ಅನೂದನ್ನ ತೋರಸ್ತೀನಿ." ಎಂದು ಎದ್ದು ಆಚಾರ್ಯರು ಭಾರವಾದ ಕಬ್ಬಿಣದ ಪೆಟ್ಟಿಗೆಯೊಂದನ್ನು ತೆರೆದು ಅದರಲ್ಲಿಂದ ಒಂದು ಹಿತ್ತಾಳೆಯ ದೊಡ್ಡ ಡಬ್ಬಿಯನ್ನು ತಂದು ತೆರೆದು ನನ್ನೆದುರು ಹಿಡಿದರು. ಅದರಲ್ಲಿ ಮುತ್ತು ರತ್ನ ಬಂಗಾರದ ಸಾಮಾನು—ಅದರಲ್ಲಿ ಒಂದೇ ಒಂದು ಚೀಟಿ : "ಸೀನೂನ ಲಗ್ನದ ಆಹೇರಿ" ಎಂದು. ಆ ಚೀಟಿಯನ್ನು ಕೈಗೆ ಕೊಡುತ್ತ ಆಚಾರ್ಯರು ಹೇಳಿದರು:

"ಆತಪಾ....ನಿನ್ನ ಋಣಭಾರದ ಪರಿಹಾರಾ."

ಆಚಾರ್ಯರ ಪ್ರವಚನ ಮುಗಿದು—ಈ ಚೀಟಿಯಲ್ಲಿಯ ಆ ನಾಲ್ಕು ಅಕ್ಷರ ನೋಡಿ ನಾನು ಕಲ್ಲಾಗಿ ಕುಳಿತೆ. ಅವರ ಹೃದಯ ವಿದ್ರಾವಕವಾಣಿ–ನನ್ನೆದೆಯನ್ನು ಆಗಲೇ ಕೊರೆದಿತ್ತು. ಈ ಚೀಟಿಯಿಂದ ಈಗದು ಎರಡು ಹೋಳಾಗಿ ಹೋಗಿತ್ತು. ಗಂಗಕ್ಕ ಬೋಧರಾಯರ ಎರಡು ಚಿತ್ರಗಳು ಕಣ್ಣೆದುರು ಕಟ್ಟಿದ್ದವು.

"ಋಣಭಾರ ಇಳಿಸಿದೆಯಾ" ಎಂದು ಕೇಳಿದಂತಾಯಿತು.

"ಇಲ್ಲ–ಇಲ್ಲ–ತಪ್ಪಿದೆ" ಎಂದು ನಾನು ಕೂಗಿದಾಗ ಆಚಾರ್ಯರು ಆಶ್ಚರ್ಯದಿಂದ ಕೇಳಿದರು:

"ಏನದು ಶೀನು? ಏನು ?"

ಕಂಬನಿ ತುಂಬಿ ಬಂದು–ದುಃಖ ತಡೆಯದಾಗಿ–ನಾನು ಆಚಾರ್ಯರ ಪಾದ ಮುಟ್ಟಿ, ನಮಸ್ಕರಿಸಿ ಹೇಳಿದೆ:

"ಋಣಭಾರವಿಳಿಸಲಾರೆ; ತಪ್ಪಿದೆ; ಕ್ಷಮಿಸಿರಿ."

ಹೇಳುತ್ತಿರುವ ಮಾತು ಅರ್ಥಕ್ಕೆ ನಿಂತಾಗ ಆಚಾರ್ಯರ ಪಾದ ನನ್ನ ಕಂಬನಿಯ ಅರ್ಘ್ಯದಿಂದ ನೆನೆಯುತ್ತಿದ್ದವು.

## ಈ ಲೇಖಕರ ಬೇರೆ ಕೃತಿಗಳು

ಪಿಪಾಸೆ—ಕವನ ಸಂಗ್ರಹ                                        ೧—೪—೦

### ಪ್ರಕಟನೆಯ ದಾರಿಯಲ್ಲಿ

ಗೀತಾಹೃದಯ (ಪೂ. ಸಾನೇ ಗುರೂಜಿ ಅವರ ಕೃತಿಯ ಅನುವಾದ)

ದೀಪನಿರ್ವಾಣ (ಕಾದಂಬರಿ)

ಶ್ರೀ ಎ. ಸೀ. ಅವರ ಕಾವ್ಯಸಂಪತ್ತು

ಗಾಂಧೀ ಕತೆಗಳು

ತರಂಗಮಾಲೆ (ಲೇಖನಸಂಗ್ರಹ)

ರುದ್ರಾವತಾರ (ಕವನಸಂಗ್ರಹ)

ಜೀವ-ಶಿವ (ಖಲೀಲ ಗಿಬ್ರಾನರ ಕತೆ-ಲೇಖನಗಳ ಸಂಗ್ರಹ—ಅನುವಾದಿತ)

ದಿಗಂಬರ (ಭಾರತೀಯ ಕತೆಗಳ ಸಂಕಲನ—ಅನುವಾದಿತ)